ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 20 ಭಾನುವಾರ 2022

43

ಸಂಪುಟ: 43 | ಸಂಚಿಕೆ: 213 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕತಾರ್‌ನಲ್ಲಿ ಇಂದಿನಿಂದ ಫಿಫಾ ಫುಟ್ಬಾಲ್ ವಿಶ್ವಕಪ್

ಸೆಕ್ಸ್ ಆಟಿಕೆ, ಹಂದಿ ಮಾಂಸ, ಬಿಯರ್‌ಗೆ ನಿಷೇಧ

ದೋಹಾ: ಫಿಫಾ ಫುಟ್ಬಾಲ್ ವಿಶ್ವಕಪ್ ಭಾನುವಾರದಿಂದ ಕತಾರ್‌ನಲ್ಲಿ ಆರಂಭಗೊಳ್ಳುತ್ತಿದೆ. ಇದರಲ್ಲಿ 32 ತಂಡಗಳು ಭಾಗವಹಿಸುತ್ತಿವೆ. ಇದೇ ಮೊದಲ ಬಾರಿಗೆ ಕತಾರ್ FIFA ವಿಶ್ವಕಪ್ 2022ರ ಆತಿಥ್ಯವಹಿಸುತ್ತಿದ್ದು, ಇದು ದೇಶಕ್ಕೆ ಉತ್ತೇಜಕ ಸಮಯವಾಗಿದ್ದರೂ ಅಲ್ಲಿಗೆ ಭೇಟಿ ನೀಡುವ ▶ 8ನೇ ಪುಟಕ್ಕೆ

(ಹೆಚ್ಚಿನ ಸಚಿತ್ರ ವರದಿ ಪುಟ–5)

ಬಿಜೆಪಿ ಸರ್ಕಾರದಿಂದ 25 ಲಕ್ಷ ಮಂದಿಯ

ಮತದಾನ ಹಕ್ಕಿಗೆ ಕತ್ತರಿ

● ಪ್ರದೇಶ ಕಾಂಗ್ರೆಸ್ ಗಂಭೀರ ಆರೋಪ ● ಅಮೆರಿಕಾದ ಐತಿಹಾಸಿಕ 'ವಾಟರ್ ಗೇಟ್'ನಂತೆ ಇದು 'ವೋಟರ್ ಗೇಟ್' ಪ್ರಕರಣ ● ಮುಖ್ಯಮಂತ್ರಿಗಳೇ ಈ ಹಗರಣದಲ್ಲಿ ಶಾಮೀಲಾಗಿದ್ದಾರೆ ● ಹಾಗಾಗಿ ನ್ಯಾಯಯುತ, ನಿಷ್ಪಕ್ಷಪಾತ ತನಿಖೆ ಆಗಬೇಕು



ಬೆಂಗಳೂರು, ನ. 19 (ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಬಿಜೆಪಿ ಸರ್ಕಾರ 25 ಲಕ್ಷಕ್ಕೂ ಹೆಚ್ಚು ಮತದಾರರ ಮತದಾನದ ಹಕ್ಕನ್ನು ಕಸಿದುಕೊಂಡಿದೆ ಎಂದು ಪ್ರದೇಶ ಕಾಂಗ್ರೆಸ್ ಆರೋಪಿಸಿದೆ.


ಈ ಸಂಬಂಧ ದಾಖಲೆ ಸಮೇತ ಚುನಾವಣಾಧಿಕಾರಿಗಳಿಗೆ ದೂರು ನೀಡಿದ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಉಸ್ತುವಾರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ ಶಿವಕುಮಾರ್, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಮಾತನಾಡಿ, ಅಮೇರಿಕಾದಲ್ಲಿ 'ವಾಟರ್ ಗೇಟ್' ಪ್ರಕರಣ ಎಂದು ಕರೆಯುತ್ತಿದ್ದೆವು. ಅದೇ ರೀತಿ ಇದು 'ವೋಟರ್ ಗೇಟ್' ಪ್ರಕರಣ. ಜಗತ್ತಿನಲ್ಲಿ ಇಂಥಾ ಪ್ರಕರಣಗಳು ನಡೆಯುವುದು ಬಹಳ ಅಪರೂಪ ಎಂದರು.

ನಮ್ಮ ರಾಜ್ಯದಲ್ಲಿ ನಡೆದಿದೆ. ಈ ಹಗರಣದಲ್ಲಿ ನೇರವಾಗಿ ಮುಖ್ಯಮಂತ್ರಿಗಳು ಶಾಮೀಲಾಗಿದ್ದಾರೆ. ಅವರೇ ಪ್ರಮುಖ ಅಪರಾಧಿ. ಜನರ ಮತದಾನದ ಹಕ್ಕನ್ನು ಸರ್ಕಾರ ದುರುಪಯೋಗ ಮಾಡಿಕೊಂಡಿರುವುದು ಒಂದು ಗಂಭೀರ ಅಪರಾಧ. ಚುನಾವಣಾ ▶ 8ನೇ ಪುಟಕ್ಕೆ



ಕಾಂಗ್ರೆಸ್ ನಾಯಕರು ಶನಿವಾರ ಚುನಾವಣಾಧಿಕಾರಿಗೆ ದೂರು ಸಲ್ಲಿಸಿದರು.

'ಚಿಲುಮೆ' ನ್ಯಾಯಾಂಗ ತನಿಖೆ ಅನಗತ್ಯ



ಬೆಂಗಳೂರು: ಚಿಲುಮೆ ಪ್ರಕರಣದ ಬಗ್ಗೆ ನ್ಯಾಯಾಂಗದ ತನಿಖೆ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆ, ಚುನಾವಣಾ ಆಯೋಗ ನಿಯಮಿತವಾಗಿ ಕೈಗೊಳ್ಳುವ ಪ್ರಕ್ರಿಯೆ. ಅದರಲ್ಲಿ ಸರ್ಕಾರದ ಪಾತ್ರವೇನಿಲ್ಲ. ಕಾಂಗ್ರೆಸ್‌ನವರು ಸೋಲುವ ಭೀತಿಯಿಂದ ಇಲ್ಲಸಲ್ಲದ ಆರೋಪ ▶ 8ನೇ ಪುಟಕ್ಕೆ

ಗಣಿಗಾರಿಕೆ ಜಮೀನು ಖರೀದಿ ಕರಾರು....

ಚಾ.ನಗರ ಶಾಸಕ ಪುಟ್ಟರಂಗಶೆಟ್ಟಿ ವಂಚನೆ ಯತ್ನ: ಗುಜರಾತ್ ಉದ್ಯಮಿ ಆರೋಪ

ಇಲ್ಲಿವರೆಗೆ 3.54 ಕೋಟಿ ನೀಡಿ, 9 ಕೋಟಿ ಬಾಕಿ ನೀಡದೇ ಇದ್ದರೂ ಸದರಿ ಜಮೀನಲ್ಲಿ ಗಣಿಗಾರಿಕೆಗೆ ಆಕ್ಷೇಪ



ಕಮಲೇಶ್

ಚಾಮರಾಜನಗರ, ನ.19–ಗಣಿಗಾರಿಕೆ ಜಮೀನು ಖರೀದಿ ಒಪ್ಪಂದ ಕರಾರು ಮಾಡಿಕೊಂಡಿರುವ ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಕೇವಲ ಮುಂಗಡ ಹಣವನ್ನು ಮಾತ್ರ ನೀಡಿದ್ದು, ಜಮೀನಿನ ಪೂರ್ಣ ಹಣ ನೀಡಿ ಕಾನೂನುಬದ್ಧವಾಗಿ ಕ್ರಯ ಮಾಡಿಕೊಳ್ಳದೇ ಸದರಿ ಜಮೀನಿನಲ್ಲಿ ಗಣಿಗಾರಿಕೆ ನಡೆಸುವ ಮೂಲಕ 9 ಕೋಟಿ ರೂ. ವಂಚಿಸಿದ್ದಾರೆ ಎಂದು ಗುಜರಾತ್ ಮೂಲದ ಉದ್ಯಮಿ ಕಮಲೇಶ್ ಕುಮಾರ್ ಗೋಪಾಲದಾಸ್ ಪಾಟೀಲ್ ಆರೋಪಿಸಿದ್ದಾರೆ.

ಚಾಮರಾಜನಗರದಲ್ಲಿಂದು ಸುದ್ದಿಗೋಷ್ಠಿ ನಡೆಸಿದ ಅವರು, ತಾನು 2018ರ ಏಪ್ರಿಲ್‌ನಲ್ಲಿ ಗುಂಡ್ಲುಪೇಟೆ ತಾಲೂಕು ತೆರಕಣಾಂಬಿ ಗ್ರಾಮದ ಸರ್ವೆ ನಂ.335/1, 336/4, 336/6 ಮತ್ತು 339/1ರಲ್ಲಿ ಇರುವ 4.33 ಎಕರೆ ಪ್ರದೇಶದಲ್ಲಿ ನಡೆಯುತ್ತಿದ್ದ ಕರಿಕಲ್ಲು ಕ್ವಾರೆಯನ್ನು ಹಿತೇಂದ್ರ ಜೋಷಿ ಎಂಬುವರಿಂದ ಖರೀದಿ ಮಾಡಿರುವುದಾಗಿ ತಿಳಿಸಿದರು. 2021ರವರೆಗೆ ಸದರಿ ▶ 8ನೇ ಪುಟಕ್ಕೆ

ಕ್ರಯ ನೋಂದಣಿ ಮಾಡಿಕೊಟ್ಟ ಕೂಡಲೇ ಬಾಕಿ ಹಣ ಪಾವತಿ



ತೆರಕಣಾಂಬಿಯಲ್ಲಿ ಹಿತೇಂದ್ರ ಜೋಷಿ ಎಂಬಾತನ ಕರಿಕಲ್ಲು ಕ್ವಾರೆ ನಡೆಯುವ ಜಮೀನಿನ ಪೈಕಿ 4.33 ಎಕರೆಯನ್ನು ಕಮಲೇಶ್ ಕುಮಾರ್ ಗೋಪಾಲದಾಸ್ ಪಾಟೀಲ್ ಎಂಬಾತ ಖರೀದಿಸಿರುವುದು ನಿಜ. ಹಿತೇಂದ್ರ ಜೋಷಿಗೆ ಸೇರಿದ ಉಳಿದ ಜಮೀನನ್ನು ನಾನು ಖರೀದಿಸಿದ್ದೇನೆ ಹಿತೇಂದ್ರ ಜೋಷಿಯಿಂದ ಖರೀದಿಸಿರುವ ಜಮೀನನ್ನು 12.50 ಕೋಟಿ ರೂ.ಗಳಿಗೆ ನನಗೆ ಮಾರಾಟ ಮಾಡಲು ಕಮಲೇಶ್ ಕರಾರು ಪತ್ರ ಮಾಡಿಕೊಂಡು ನನ್ನಿಂದ 3.54 ಕೋಟಿ ರೂ. ಪಡೆದಿದ್ದಾರೆ. ನಾನು ಹಿತೇಂದ್ರ ಜೋಷಿಯಿಂದ ನೇರವಾಗಿ ಖರೀದಿಸಿರುವ ಜಮೀನಿನಲ್ಲಿ ನಿನ್ನೆಯಿಂದ ಕ್ವಾರೆ ಆರಂಭಿಸಿದ್ದೇನೆಯೇ ಹೊರತು ಕಮಲೇಶ್ ▶ 8ನೇ ಪುಟಕ್ಕೆ

ಕೆಆರ್‌ಎಸ್ ಬೃಂದಾವನದಲ್ಲಿ ಈಗ ಚಿರತೆಯೊಂದಿಗೆ ಮುಳ್ಳುಹಂದಿ ಪ್ರತ್ಯಕ್ಷ

● ನೀರಾವರಿ ಅಧಿಕಾರಿಗಳಿಗೆ ಮತ್ತೊಂದು ತಲೆನೋವು ● ಚಿರತೆ–ಮುಳ್ಳುಹಂದಿ ಕಾದಾಟ ಸಿಸಿ ಕ್ಯಾಮರಾದಲ್ಲಿ ಸೆರೆ ● 20 ದಿನದಿಂದ ಪ್ರವೇಶ ನಿರ್ಬಂಧದಿಂದ ಆದಾಯ ಖೋತಾ: ವ್ಯಾಪಾರಿಗಳಿಗೆ ಸಂಕಷ್ಟ

ಶ್ರೀರಂಗಪಟ್ಟಣ, ನ.19(ವಿನಯ್ ಕಾರೇಕುರ)– ವಿಶ್ವವಿಖ್ಯಾತ ಕೆಆರ್‌ಎಸ್ ಅಣೆಕಟ್ಟೆಯ ಬೃಂದಾವನ ಉದ್ಯಾನವನದಲ್ಲಿ ಮತ್ತೆ ಚಿರತೆಯೊಂದಿಗೆ ಮುಳ್ಳುಹಂದಿ ಕಾಣಿಸಿಕೊಂಡಿದ್ದು, ಇದರಿಂದ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ್ತೆ ಆತಂಕಕ್ಕೆ ಒಳಗಾಗಿದ್ದಾರೆ. ಶುಕ್ರವಾರ ರಾತ್ರಿ ಅಣೆಕಟ್ಟೆಯ ನಾರ್ಥ್ ಗೇಟ್ ಉದ್ಯಾನವನದ ಬಳಿ ಚಿರತೆ ಹಾಗೂ ಮುಳ್ಳುಹಂದಿ ಕಾಣಿಸಿಕೊಂಡು ಒಂದಕ್ಕೊಂದು ಕಾದಾಡಿರುವ ಪ್ರಸಂಗ ತಡವಾಗಿ ಬೆಳಕಿಗೆ ಬಂದಿದೆ.

ಮೊದಲ ಬಾರಿಗೆ ಅ.22 ರಂದು ಕಾಣಿಸಿಕೊಂಡಿದ್ದ ಚಿರತೆ ಮತ್ತೆ ಅಣೆಕಟ್ಟೆಯ ಉತ್ತರ ಭಾಗದಲ್ಲಿ ಮತ್ತು ದಕ್ಷಿಣ ಪ್ರವೇಶ ದ್ವಾರದಲ್ಲಿ ಮೂರ್‍ನಾಲ್ಕು ಬಾರಿ ಕಾಣಿಸಿಕೊಂಡಿತ್ತು. ಚಿರತೆ ಸೆರೆಗಾಗಿ ಶ್ರೀರಂಗಪಟ್ಟಣ ಹಾಗೂ ಪಾಂಡವಪುರ ಅರಣ್ಯ ಇಲಾಖೆ ಅಧಿಕಾರಿಗಳು 9 ಬೋನುಗಳನ್ನು ಇರಿಸಿದ್ದರು. ಇವುಗಳ ಪೈಕಿ ಅಣೆಕಟ್ಟೆ ನಾರ್ಥ್ ಗೇಟ್‌ನ ಉದ್ಯಾನವನದ ಬಳಿ ಇರಿಸಲಾಗಿದ್ದ, 1 ಬೋನನ್ನು ಶುಕ್ರವಾರ ಬೆಳಗ್ಗೆ ಪಾಂಡವಪುರ ಅರಣ್ಯ ಇಲಾಖೆ ಅಧಿಕಾರಿಗಳು, ನಿಗಮದ ಅಧಿಕಾರಿಗಳು ವಿರೋಧದ ನಡುವೆಯೂ ಸ್ಥಳಾಂತರಿಸಿದ್ದಾರೆ. ಕಾಕತಾಳೀಯವೆಂಬಂತೆ ಸ್ಥಳಾಂತರಿಸಿದ ದಿನವೇ ಅದೇ ಸ್ಥಳದಲ್ಲಿ ಚಿರತೆ ಹಾಗೂ ಮುಳ್ಳುಹಂದಿ ಪ್ರತ್ಯಕ್ಷವಾಗಿರುವುದು



ನಿಗಮದ ಅಧಿಕಾರಿಗಳು ಹಾಗೂ ಸಾರ್ವಜನಿಕ ವಲಯದಲ್ಲಿ ಹೆಚ್ಚಿನ ಆಕ್ರೋಶ ವ್ಯಕ್ತವಾಗಿದೆ.

ಚಿರತೆ, ಮುಳ್ಳುಹಂದಿ ಕಾದಾಟ: ಚಿರತೆ ತನ್ನ ದೇಹದಾದ್ಯಂತ ಚೂಪಾದ ಕ್ವಿಲ್‌ಗಳನ್ನು ಹೊಂದಿರುವ ಮುಳ್ಳುಹಂದಿಯನ್ನು ಹಿಡಿಯುವ ಪ್ರಯತ್ನದಲ್ಲಿ ವಿಫಲವಾಗಿದೆ. ಏತನ್ಮಧ್ಯೆ, ಕೆಲವು ಸಮಯ ಅವುಗಳ ಕಾದಾಟದ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಮುಳ್ಳುಹಂದಿ ತಿನ್ನುವಲ್ಲಿ ಚಿರತೆ ವಿಫಲವಾಗಿದೆ.


ಆದಾಯಕ್ಕೆ ಕಲ್ಲು: ಬೃಂದಾವನದಲ್ಲಿ ಚಿರತೆ ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದು, ಪ್ರವಾಸಿಗರ ಸುರಕ್ಷತಾ ದೃಷ್ಟಿಯಿಂದ 20ಕ್ಕೂ ಹೆಚ್ಚು ದಿನಗಳಿಂದ ಕೆಆರ್‌ಎಸ್ ಬೃಂದಾವನಕ್ಕೆ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ. ಇದರಿಂದ ಟೋಲ್ ಸಂಗ್ರಹ, ಪ್ರವೇಶ ಶುಲ್ಕ ಮತ್ತು ಪಾರ್ಕಿಂಗ್ ಶುಲ್ಕಗಳಿಂದ ಬರುತ್ತಿದ್ದ ಸುಮಾರು 2 ಕೋಟಿ ರೂ. ಆದಾಯ ನಷ್ಟವಾಗಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ನಿನ್ನೆ ಬೆಳಗ್ಗೆ ಬೋನನ್ನು ಸ್ಥಳಾಂತರಿಸಿದ್ದು, ಸಂಜೆ ವೇಳೆಗೆ ಅದೇ ಸ್ಥಳದಲ್ಲಿ ಚಿರತೆ ಕಾಣಿಸಿಕೊಂಡಿದೆ. ಬೋನನ್ನು ತೆಗೆಯದಿದ್ದರೆ ಚಿರತೆ ಬಲೆಗೆ ಬೀಳಬಹುದಿತ್ತು. ಪ್ರವಾಸಿಗರಿಗೆ ಪ್ರವೇಶ ನೀಡಬಹುದಾಗಿತ್ತು. ಆದರೆ ಅಧಿಕಾರಿಗಳು ಬೋನ್ ▶ 8ನೇ ಪುಟಕ್ಕೆ

ಬೆಂಗಳೂರಿನ ಪ್ರಮುಖ ಸ್ಥಳದಲ್ಲಿ ಅನಾಮಧೇಯ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ನಿರ್ಮಾಣ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟ

ಬೆಂಗಳೂರು,ನ.19(ಕೆಎಂಶಿ)–ಬೆಂಗಳೂರಿನ ಪ್ರಮುಖ ಸ್ಥಳದಲ್ಲಿ ಅನಾಮಧೇಯ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನೊಳಗೊಂಡ ಸ್ಮಾರಕವನ್ನು ನಿರ್ಮಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶವಿದೇಶಗಳಲ್ಲಿ ಇಂತಹ ಸ್ಮಾರಕಗಳಿಗೆ ಬಹಳ ಮಹತ್ವವಿದೆ. ಇಂತಹ ಸ್ಮಾರಕಗಳು ನಮ್ಮ ಇತಿಹಾಸ, ಸಂಸ್ಕೃತಿ–ಪರಂಪರೆಗಳನ್ನು ಬಿಂಬಿಸುತ್ತಿವೆ ಎಂದರು.

ಜೊತೆಗೆ ನಮ್ಮ ಅಸ್ಮಿತೆಯನ್ನೂ ಬಿಂಬಿಸುತ್ತದೆ. ವಿವಿಧತೆಯಲ್ಲಿ ಏಕತೆಯನ್ನು ಕಾಣುವ ಭಾರತೀಯತೆ, ಇದಕ್ಕೆ ಪೂರಕವಾದ ಸರ್ಕಾರದ ನೀತಿಗಳು ಭಾರತದ ಅಸ್ಮಿತೆಯನ್ನು ಗಟ್ಟಿಗೊಳಿಸುತ್ತದೆ. ಭಾರತದ ಸ್ವಾತಂತ್ರ್ಯಕ್ಕಾಗಿ ಜೀವತೆತ್ತ ಅನೇಕ ಅನಾಮಧೇಯ ಹೋರಾಟಗಾರರ ಬಗ್ಗೆ ನಮ್ಮ ಯುವಜನತೆಗೆ, ದೇಶವಿದೇಶಗಳಿಗೆ ಅರಿವು ಮೂಡಿಸಬೇಕು. ಜಪಾನ್‌ನಲ್ಲಿ ಸುಭಾಷ್ ಚಂದ್ರ ಬೋಸ್ ಪ್ರತಿಮೆ, ಅಮೆರಿಕಾದಲ್ಲಿ ಮಹಾತ್ಮಗಾಂಧಿ ಸ್ಮಾರಕ ನಮಗೆ ಸ್ಫೂರ್ತಿ ನೀಡುತ್ತಿದೆ ಎಂದು ಹೇಳಿದರು.

ಭಾರತಕ್ಕೆ ಸ್ವಾತಂತ್ರ್ಯ ಸುಲಭವಾಗಿ ದೊರಕಲಿಲ್ಲ. ಹಲ ವರು ತಮ್ಮ ಬದುಕು, ಜೀವವನ್ನೇ ತ್ಯಾಗ ಮಾಡಿದ್ದಾರೆ. ಬ್ರಿಟಿಷರ ವಿರುದ್ಧ ಹೋರಾಟ ಮೊದಲು ರೈತರಿಂದ ಪ್ರಾರಂಭವಾಯಿತು. ಕೆದಂಬಾಡಿ ರಾಮಯ್ಯ ಗೌಡರು, ರೈತ ಕುಟುಂಬದಲ್ಲಿ ಹುಟ್ಟಿ, ವೀರ ಯೋಧರಾಗಿ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದರು. ರೈತರು ಯೋಧರಾದಾಗ ಕ್ರಾಂತಿಯಾಗುತ್ತದೆ. ಕಿತ್ತೂರು ರಾಣಿ ಚೆನ್ನಮ್ಮ, ಕೆಳದಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಝಾನ್ಸಿ ರಾಣಿ ಲಕ್ಷ್ಮೀಬಾಯಿಯಂತಹವರು ಸ್ವಾತಂತ್ರ್ಯ ಹೋರಾಟಕ್ಕೆ ಇಳಿದಾಗ ಬ್ರಿಟಿಷರಿಗೆ ತಮಗೆ ಇನ್ನು ಉಳಿಗಾಲವಿಲ್ಲ ಎಂಬ ಸತ್ಯದ ಅರಿವಾಯಿತು. ಸರ್ದಾರ್ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ನಡೆದ ರೈತ ಸತ್ಯಾಗ್ರಹ ಬ್ರಿಟಿಷರನ್ನು ಕಂಗೆಡಿಸಿತು ಎಂದರು.

> ದೇಶಕ್ಕಾಗಿ ಬದುಕುವುದನ್ನು ಇಂದಿನ ಯುವ ಜನರು ಸಂಕಲ್ಪ ಮಾಡಿದರೆ, ನಮ್ಮ ದೇಶ ಸಮೃದ್ಧವಾಗುತ್ತದೆ. ಭಾರತೀಯ ಸಂಸ್ಕೃತಿ ಪರಂಪರೆಗಳು ನಮ್ಮನ್ನು ಕಾಪಾಡುತ್ತಿವೆ. ಪ್ರಪಂಚದ ಅನೇಕ ದೇಶಗಳು ಆರ್ಥಿಕ ಹಿನ್ನಡೆ ಹಾಗೂ ಹಣದುಬ್ಬರ ಸಮಸ್ಯೆಯನ್ನು ಎದುರಿಸುತ್ತಿದ್ದರೆ, ನಮ್ಮ ದೇಶ ಶೇ.6ರಷ್ಟು ಪ್ರಗತಿಯನ್ನು ತೋರಿಸುತ್ತಿದೆ. ಭಾರತದಲ್ಲಿ ಉಳಿತಾಯ ಸಂಸ್ಕೃತಿಯಿದ್ದು, ದೇಶದ ಆರ್ಥಿಕತೆಯಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ.ತಾನು ಹುಟ್ಟಿದ ಭೂಮಿಗೆ ನಿಷ್ಠೆಯಿಂದಿರಬೇಕೆಂದು ಎಲ್ಲ ಧರ್ಮಗಳೂ ಬೋಧಿಸುತ್ತವೆ. ಆದರೆ ಇತ್ತೀಚಿನ ದಿನಗಳಲ್ಲಿ ಇದು ಪರಿಪಾಲನೆ ಆಗದಿರುವುದು ದುಃಖದ ಸಂಗತಿ. ಭಾರತದಲ್ಲಿ ಚರಿತ್ರೆಯಿದ್ದು, ಚಾರಿತ್ರ್ಯಬೇಕಿದೆ. **–ಬಸವರಾಜ ಬೊಮ್ಮಾಯಿ, ಸಿಎಂ**

ದುಡಿಯುವ ವರ್ಗ ಬ್ರಿಟಿಷರ ವಿರುದ್ಧ ತಿರುಗಿಬಿದ್ದಾಗ, ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಚಿಂತನೆ ಪ್ರಾರಂಭಿಸಿದರು. ಅನಾಮಧೇಯ ಹೋರಾಟಗಾರರ ಸಂಖ್ಯೆ ಸಾಕಷ್ಟಿದೆ. ಇಂತಹ ಅನೇಕರ ತ್ಯಾಗಬಲಿದಾನಗಳಿಗೆ ನ್ಯಾಯ ದೊರೆತಿಲ್ಲ. ನರಗುಂದ ಬಾಬಾಸಾಹೇಬ, ಮಹಾದೇವ ಅವರು ಬೆಳಗಾವಿ, ಬಿಜಾಪುರ ಭಾಗಗಳಲ್ಲಿ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದರು. 12 ವರ್ಷದ ಬಾಲಕ, ನಾರಾಯಣ ಮಹಾದೇವ ಧೋನಿ, ವಂದೇ ಭಾರತ ಪಠಿಸುತ್ತಲೇ ಬ್ರಿಟಿಷರ ಗುಂಡಿಗೆ ಬಲಿಯಾಗುತ್ತಾನೆ. ಈ ಬಾಲಕನಿಗೆ ದೇಶಭಕ್ತಿಯೊಂದೇ ಸ್ಫೂರ್ತಿಯಾಗಿತ್ತು. ಇಂತಹ ಕಥೆಗಳು ನೂರಾರಿವೆ ಎಂದರು.

ಮೈಸೂರಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಬೈಕ್ ರ್‍ಯಾಲಿ

- ಮೈಸೂರಿನಿಂದ ಮಡಿಕೇರಿ; ಮರಳಿ ಮಡಿಕೇರಿಯಿಂದ ಮೈಸೂರು
- ಮಾರ್ಗಮಧ್ಯೆ ಘೋಷಣಾ ಫಲಕ, ಬೀದಿನಾಟಕದ ಮೂಲಕ ಅರಿವು



ಮೈಸೂರು,ನ.19(ಆರ್‌ಕೆ)–ರಸ್ತೆ ಸುರಕ್ಷತೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮೈಸೂರಿನಿಂದ ಮಡಿಕೇರಿವರೆಗೆ ಶನಿವಾರ ಬೈಕ್ ರ್‍ಯಾಲಿ ಮಾಡಲಾಯಿತು.

ಜೀವರಕ್ಷಾ ಸಂಸ್ಥೆಯು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ರೋಟರಿ ಮೈಸೂರು ಜಿಲ್ಲಾ ರೋಟರ್‍ಯಾಕ್ಟ್ ಆರ್‌ಐಡಿ 3181 ಹಾಗೂ ಇತರ ಸಂಸ್ಥೆಗಳ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಜೀವರಕ್ಷಾ ಬೈಕ್‌ಥಾನ್‌ಗೆ ಅಪರಾಧ ಮತ್ತು ಸಂಚಾರ ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಸುಮಾರು 200 ಬೈಕ್‌ಗಳಲ್ಲಿ ರ್‍ಯಾಲಿ ನಡೆಸಿದ ಯುವಕರು, ಹುಣಸೂರು ರಸ್ತೆಯಲ್ಲಿ ಸಾಗಿ ಗೋಣಿಕೊಪ್ಪ ಮೂಲಕ ವಿರಾಜಪೇಟೆ ಮಾರ್ಗವಾಗಿ ಸಂಜೆ ಮಡಿಕೇರಿ ತಲುಪಿದರು. ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸಿ ವಾಹನ ಚಾಲನೆ ಮಾಡಬೇಕು, ಮದ್ಯಪಾನ ಮಾಡಿ ವಾಹನ ಚಾಲನೆ, ಮೊಬೈಲ್‌ನಲ್ಲಿ ಮಾತನಾಡುವುದು ಅಪಘಾತಕ್ಕೆ ಆಹ್ವಾನ ಕೊಟ್ಟಂತೆ, ಅತೀ ವೇಗ, ಅಜಾಗರೂಕ ಚಾಲನೆ ಮೃತ್ಯುವಿಗೆ ನಾಂದಿ ಎಂಬಿತ್ಯಾದಿ ಘೋಷಣಾ ಫಲಕಗಳೊಂದಿಗೆ ಮಾರ್ಗದುದ್ದಕ್ಕೂ ಜನರಿಗೆ ಅರಿವು ಮೂಡಿಸಿದರು.

ಮಾರ್ಗಮಧ್ಯೆ ಗೋಣಿಕೊಪ್ಪ, ವಿರಾಜಪೇಟೆ ಮತ್ತು ಮಡಿಕೇರಿಯಲ್ಲಿ ಬೀದಿನಾಟಕ ಪ್ರದರ್ಶಿಸುವ ಮೂಲಕ ಸಂಚಾರ ನಿಯಮ ಪಾಲಿಸಿ, ಅಪಘಾತಗಳನ್ನು ತಡೆಯುವುದು, ಅಮೂಲ್ಯ ಪ್ರಾಣ ರಕ್ಷಿಸುವ ಬಗ್ಗೆ ಜಾಗೃತಿ ಮೂಡಿಸಲಾಯಿತು. ನಾಳೆ (ನ.20) ಮಡಿಕೇರಿಯಿಂದ ಹೊರಡಲಿರುವ ಬೈಕ್ ರ್‍ಯಾಲಿಯು, ಕುಶಾಲನಗರದಲ್ಲಿ ಬೀದಿನಾಟಕ ಪ್ರದರ್ಶನ ಮಾಡಿದ ಬಳಿಕ ಮೈಸೂರು ತಲುಪಲಿದೆ. ಬೈಕಥಾನ್‌ಗೆ ಚಾಲನೆ ನೀಡುವ ವೇಳೆ ಜೀವರಕ್ಷಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ರಾಮ್, ರೊ.ಸುಬ್ರಹ್ಮಣ್ಯ, ರೊ. ಮಂಜೇಶ್, ಜಸ್ವಂತ್, ನಿಖಿಲ್, ಸಂತೋಷ್, ಚೇತನ್, ವೆಂಕಟೇಶ್ ಇತರರು ಉಪಸ್ಥಿತರಿದ್ದರು.

‘ಟಿಪ್ಪು ನಿಜ ಕನಸುಗಳು’ ಕೃತಿ ಮುಟ್ಟುಗೋಲಿಗೆ ಒತ್ತಾಯ

ಸದರಿ ಕೃತಿ ಆಧಾರಿತ ನಾಟಕ ಪ್ರದರ್ಶನಕ್ಕೂ ತಡೆಯೊಡ್ಡಲು ಸರ್ಕಾರಕ್ಕೆ ಎಸ್‌ಡಿಪಿಐ ಆಗ್ರಹ



ಮೈಸೂರು,ನ.19(ಪಿಎಂ)– ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ ‘ಟಿಪ್ಪು ನಿಜ ಕನಸುಗಳು’ ನಾಟಕ ಕೃತಿ ಮುಟ್ಟುಗೋಲು ಹಾಕಿಕೊಂಡು, ಈ ಕೃತಿ ಆಧಾರಿತ ನಾಟಕ ಪ್ರದರ್ಶನಕ್ಕೆ ತಡೆಯೊಡ್ಡಲು ಸರ್ಕಾರ ಶೀಘ್ರ ಕ್ರಮ ವಹಿಸಬೇಕೆಂದು ಎಸ್‌ಡಿಪಿಐ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಸ್‌ಡಿಪಿಐ ರಾಜ್ಯ ಮುಖಂಡ ಅಮ್ಜದ್‌ಖಾನ್, ಸರ್ಕಾರದ ಅಧೀನ ಸಂಸ್ಥೆಯಾದ ರಂಗಾಯಣ ವೇದಿಕೆ ಬಳಸಿಕೊಂಡು ಸದರಿ ಕೃತಿ ಬಿಡುಗಡೆ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಸಮುದಾಯವನ್ನು ನಿಂದಿಸಲಾಗಿದೆ. ಈ ಕೃತಿಯೇ ರಾಜ್ಯಕ್ಕೆ ಒಂದು ಕಂಟಕ. ಕೃತಿ ಬಿಡುಗಡೆಗೆ ಸೇರಿದ್ದ ಗಣ್ಯ ವ್ಯಕ್ತಿಗಳು ಆಡಿದ ಮಾತುಗಳು ಶೋಭೆ ತರುವಂತವಲ್ಲ. ಇವರ ವಿರುದ್ಧ ಸರ್ಕಾರ ಸುಮೊಟೊ (ಸ್ವಯಂ ಪ್ರೇರಿತ) ಪ್ರಕರಣ ದಾಖಲಿಸಲು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಬೇಕು ಎಂದು ಒತ್ತಾಯಿಸಿದರು.

ಚುನಾವಣೆ ಸಮೀಪಿಸುತ್ತಿದ್ದು, ರಾಜ್ಯ ಬಿಜೆಪಿ, ಅಭಿವೃದ್ಧಿ ಹೆಸರಿನಲ್ಲಿ ಜನತೆ ಬಳಿಗೆ ಹೋಗಲು ಆಗದೇ ರಾಜ್ಯದಲ್ಲಿ ವಿವಾದ ಸೃಷ್ಟಿಸಲು ಮುಂದಾಗಿದೆ. ಟಿಪ್ಪು ಪ್ರತಿಮೆ, ಬಸ್ ತಂಗುದಾಣ ವಿರೋಧಿಸುವ ನಕಾರಾತ್ಮಕ ವಿಚಾರಗಳಿಗೆ ಪ್ರತಿದಿನ ಮೈಸೂರು ಸುದ್ದಿಯಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದರು.

ಶಾಸಕ ತನ್ವೀರ್ ಸೇಠ್ ಅವರು ಟಿಪ್ಪು ಪ್ರತಿಮೆ ಸ್ಥಾಪಿಸುವ ಹೇಳಿಕೆ ಕೊಟ್ಟಿದ್ದರು. ಅದು ಅವರ ವೈಯಕ್ತಿಕ ಹೇಳಿಕೆ. ಇದನ್ನು ಸಾಂವಿಧಾನಿಕ ಪದ ಬಳಕೆಯಲ್ಲಿ ವಿರೋಧಿಸಿದರೆ ಯಾವುದೇ ಅಡ್ಡಿಯಿಲ್ಲ. ಆದರೆ ಸಕಲೇಶಪುರದ ರಘು ಮತ್ತು ಮೈಸೂರಿನ ಗಿರಿಧರ್ ಎಂಬುವವರು ಕೊಲೆ ಬೆದರಿಕೆ ಹಾಕುವ ರೀತಿಯಲ್ಲಿ ಶಾಸಕರನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಈ ಇಬ್ಬರ ವಿರುದ್ಧ ಆಯಾಯ ಜಿಲ್ಲಾಡಳಿತಗಳು ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ಜಿಲ್ಲಾಧ್ಯಕ್ಷ ರಫತ್‌ಖಾನ್, ಉಪಾಧ್ಯಕ್ಷ ಸ್ವಾಮಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮಹಿಷಾ ದಸರಾ ಮಾಡಿದ್ದೇವೆ; ಸಂಸದ ಪ್ರತಾಪ್ ಸಿಂಹ ಹೇಳಿಕೆಗೆ ತಿರುಗೇಟು



ಮೈಸೂರು,ನ.19(ಪಿಎಂ)– ‘ಮಹಿಷಾ ದಸರಾ ಮಟ್ಟ ಹಾಕಿದ್ದೇವೆ’ ಎಂಬ ಸಂಸದ ಪ್ರತಾಪ್ ಸಿಂಹ ಹೇಳಿಕೆ ಖಂಡಿಸಿರುವ ದಲಿತ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು, ಚಾಮುಂಡಿಬೆಟ್ಟದ ಮಹಿಷಾ ಪ್ರತಿಮೆ ಆವರಣದಲ್ಲಿ ಮಾಡಲಾಗದಿದ್ದರೂ ನಮಗೆ ಅನುಕೂಲಕರ ಸ್ಥಳದಲ್ಲಿ ಮಹಿಷಾ ದಸರಾ ಆಚರಣೆ ಮಾಡಲಾಗಿದೆ ಎಂದು ತಿರುಗೇಟು ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಾಪ್ ಸಿಂಹ ಕೋಮು ದ್ವೇಷ ಹರಡುವ ಮೂಲಕ ಮೈಸೂರಿನ ಶಾಂತಿ ಮತ್ತು ನೆಮ್ಮದಿಗೆ ಭಂಗ ಉಂಟು ಮಾಡುತ್ತಿದ್ದಾರೆ. ಅವರು ಮೊನ್ನೆ ಮಹಿಷಾ ದಸರಾ ಆಚರಣೆ ಮಟ್ಟ ಹಾಕಿರುವುದಾಗಿ ಹೇಳಿಕೆ ನೀಡಿದ್ದು, ಇವರು ಯಾವುದೇ ಕಾರಣಕ್ಕೂ ಮಹಿಷಾ ದಸರಾ ತಡೆಯಲು ಸಾಧ್ಯವಿಲ್ಲ. ಇವರು ಮೊದಲು ಮೈಸೂರಿನ ರಸ್ತೆ ಗುಂಡಿಗಳನ್ನು ಮಟ್ಟ ಮಾಡಲಿ ಎಂದು ಕಿಡಿಕಾರಿದರು. ಟಿಪ್ಪು ಸಾಮಾಜಿಕ ನ್ಯಾಯದ ಪರವಾಗಿ ಇದ್ದವರು. ಅವರ ಬಗ್ಗೆ ಮಾತನಾಡುವ ಯೋಗ್ಯತೆ ಪ್ರತಾಪ್‌ಸಿಂಹ ಅವರಿಗಿಲ್ಲ. ಕಳೆದ 8 ವರ್ಷಗಳಿಂದ ದಲಿತರು, ಅಲ್ಪಸಂಖ್ಯಾತರನ್ನು ಪ್ರತಾಪ್ ಸಿಂಹ ಹಿಯ್ಯಾಳಿಸುತ್ತಿದ್ದಾರೆ. ಇವರು ತಮ್ಮ ಪ್ರತಾಪವನ್ನು ಅವರ ಪಾರ್ಟಿಯೊಳಗೆ ಇಟ್ಟುಕೊಳ್ಳಲಿ. ಇವರ ವರ್ತನೆಯನ್ನು ಜನತೆ ತಾಳ್ಮೆಯಿಂದ ಗಮನಿಸುತ್ತಿದ್ದು, ಚುನಾವಣೆಯಲ್ಲಿ ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಟಿಪ್ಪು, ಮಹಿಷಾನ ವಿಚಾರದಲ್ಲಿ ಬೇಕಿದ್ದರೆ ಚರ್ಚೆಗೆ ಬರಲಿ. ಈಗಾಗಲೇ ಹಲವು ಬಾರಿ ಚರ್ಚೆಗೆ ಆಹ್ವಾನ ನೀಡಿದರೂ ಬಂದಿಲ್ಲ. ಅಲ್ಪಸಂಖ್ಯಾತರು, ದಲಿತರು, ಮಹಿಷಾ ದಸರಾ ವಿಚಾರದಲ್ಲಿ ಹಗುರವಾಗಿ ಮಾತನಾಡಬಾರದು ಎಂದರು.

ಬಸ್ ತಂಗುದಾಣದ ಗುಂಬಜ್ ವಿಚಾರವಾಗಿ ಪ್ರತಿಕ್ರಿಯಿಸಿ, ಮೈಸೂರು ಅರಮನೆ ಸೇರಿದಂತೆ ಮೈಸೂರಿನ ಎಲ್ಲಾ ಪಾರಂಪರಿಕ ಕಟ್ಟಡಗಳ ಪೈಕಿ ಬಹುತೇಕ ಕಟ್ಟಡಗಳಲ್ಲಿ ಗುಮ್ಮಟಾಕಾರ ಇದೆ. ದಮ್ಮು–ತಾಕತ್ತು ಬಗ್ಗೆ ಮಾತನಾಡುವ ಇವರು, ಅರಮನೆ ಗುಮ್ಮಟಾಕಾರ ಹೊಡೆಯುತ್ತಾರೆಯೇ? ಎಂದು ಪ್ರತಾಪ್ ಸಿಂಹ ವಿರುದ್ಧ ಹರಿಹಾಯ್ದರು. ಪಾಲಿಕೆ ಮಾಜಿ ಸದಸ್ಯ ಸಿದ್ದಪ್ಪ, ಲೇಖಕ ಸಿದ್ದಸ್ವಾಮಿ, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಿಕ್ಕ ಅನ್ನದಾನಿ, ಮುಖಂಡ ಎಸ್.ರಾಜಯ್ಯ ಗೋಷ್ಠಿಯಲ್ಲಿದ್ದರು.

ವೆಬ್‌ಸೈಟ್ ಬಿಡುಗಡೆ

ಮೈಸೂರು,ನ.19–ಮಡಿಕೇರಿ ಬಳಿಯ ಸುಂಟಿಕೊಪ್ಪದ ವಿಕಾಸ್ ಜನಸೇವಾ ಟ್ರಸ್ಟ್‌ನ ವೃದ್ಧಾಶ್ರಮದ ವೆಬ್‌ಸೈಟ್ ರೂಪಿಸಲಾಗಿದ್ದು, www.vikasjanaseva trust.info ಸಂಪರ್ಕಿಸಬಹುದು ಎಂದು ವೆಬ್‌ಸೈಟನ್ನು ಉಚಿತವಾಗಿ ರೂಪಿಸಿಕೊಟ್ಟಿರುವ ಎಸ್–ಇಂಡಿಯಾ ಸಾಫ್ಟ್‌ವೇರ್ ಟೆಕ್ನಾಲಜೀಸ್ ಲಿ. ಸಂಸ್ಥೆಯ ಶಿವಕುಮಾರ್ ತಿಳಿಸಿದ್ದಾರೆ.

ಪಿಹೆಚ್.ಡಿ



ಮೈಸೂರು: ಡಾ.ರಾಜಕುಮಾರ್ ಹೆಚ್.ಗರಂಪಲ್ಲಿ ಅವರ ಮಾರ್ಗದರ್ಶನದಲ್ಲಿ ತೇಜಸ್‌ಕುಮಾರ್, ಸಸ್ಯಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ದುಬೈನಲ್ಲಿ ನಡೆದ ಅಂತರರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ ಗಳಿಸಿದ ಮೈಸೂರು ವಿಜಯ ವಿಠಲ ವಿದ್ಯಾಸಂಸ್ಥೆಯ 8ನೇ ತರಗತಿ ವಿದ್ಯಾರ್ಥಿ, ಮೈಸೂರು ತಾಪಂ ಮಾಜಿ ಅಧ್ಯಕ್ಷೆ ನೇತ್ರಾವತಿ ಹಾಗೂ ವೆಂಕಟೇಶ್ ದಂಪತಿ ಪುತ್ರ ತನೀಶ್‌ಗೌಡನನ್ನು ಮೈಸೂರಿನ ನಿವೇದಿತಾ ನಗರದ ಎಸ್.ಆರ್.ಸುಬ್ಬರಾವ್ ಉದ್ಯಾನವನದಲ್ಲಿ ಅಭಿನಂದಿಸಲಾಯಿತು. ಈ ವೇಳೆ ಮಾಜಿ ಕಾರ್ಪೋರೇಟರ್ ಜೆ.ಎಸ್.ಜಗದೀಶ್, ಪ್ರೊ.ನಾಗರಾಜ್, ಎಸ್.ಟಿ.ರಘು, ಬೆಮೆಲ್ ವೆಂಕಟೇಶ್, ಬೆಮೆಲ್ ಮಂಜಣ್ಣ ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ನ.19–ಸ್ಟಾಫ್ ಸೆಲೆಕ್ಷನ್ ಕಮೀಷನ್‌ರವರಿಂದ ಸಶಸ್ತ್ರ ಪೊಲೀಸ್ (CAPF) ಮತ್ತು SSF ಪಡೆಗಳಲ್ಲಿ ಕಾನ್‌ಸ್ಟೆಬಲ್ (GD) ಮತ್ತು ಅಸ್ಸಾಂ ರೈಫಲ್ಸ್‌ಮ್ಯಾನ್ (GD) ಮತ್ತು ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೊನಲ್ಲಿ ಸಿಪಾಯಿ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. 18ರಿಂದ 23 ವರ್ಷಗಳು (ಕೋವಿಡ್ ಪರಿಸ್ಥಿತಿ ಕಾರಣಕ್ಕಾಗಿ ಮೇಲೆ ನಮೂದಿಸಿರುವ ಗರಿಷ್ಠ ವಯೋಮಿತಿಗೆ ಮೂರು ವರ್ಷ ಸಡಿಲಿಕೆ ನೀಡಲಾಗಿದೆ. ಅರ್ಜಿ ಸಲ್ಲಿಸಲು ನ.30 ಕೊನೆಯ ದಿನ. www.ssckkr.kar. nic.in ಮತ್ತು http://ssc.nic.in ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸ್ಟಾಫ್ ಸೆಲೆಕ್ಷನ್ ಕಮೀಷನ್ ಸಹಾಯವಾಣಿ: 080–25502520, 9483862020 ಅನ್ನು ಸಂಪರ್ಕಿಸಬಹುದು.

ಇಬ್ಬರು ಸರಗಳ್ಳರ ಸೆರೆ: 11.75 ಲಕ್ಷ ಮೌಲ್ಯದ ಚಿನ್ನಾಭರಣ ವಶ

ಮೈಸೂರು, ನ.19(ಆರ್‌ಕೆ)–ಇಬ್ಬರು ಸರಗಳ್ಳರನ್ನು ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರು, 11.75 ಲಕ್ಷ ರೂ. ಮೌಲ್ಯದ 235 ಗ್ರಾಂ ಚಿನ್ನದ ಸರಗಳನ್ನು ವಶಪಡಿಸಿಕೊಂಡಿದ್ದಾರೆ. ಮೈಸೂರಿನ ಸಂತೋಷ್(23) ಹಾಗೂ ದರ್ಶನ್(20) ಬಂಧಿತರಾಗಿದ್ದು, 3 ಬೈಕ್‌ಗಳು, 2 ಮೊಬೈಲ್ ಸೇರಿದಂತೆ 11.75 ಲಕ್ಷ ರೂ. ಬೆಲೆಯ ಚಿನ್ನಾಭರಣವನ್ನು ಖದೀಮರಿಂದ ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಫಾರ್ಮಸಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವಕರು ಮೋಜು–ಮಸ್ತಿಗಾಗಿ ಮಹಿಳೆಯರ ಸರ ಅಪಹರಣ ಮಾಡುತ್ತಿದ್ದರು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ.

ಅಕ್ಟೋಬರ್ ಮಾಹೆಯಲ್ಲಿ ಕುವೆಂಪುನಗರ ಠಾಣಾ ವ್ಯಾಪ್ತಿಯ 4 ಹಾಗೂ ಕೆ.ಆರ್. ಠಾಣಾ ಸರಹದ್ದಿನಲ್ಲಿ 1 ಸರಗಳವು ಪ್ರಕರಣಗಳಲ್ಲಿ ಸಂತೋಷ್ ಮತ್ತು ದರ್ಶನ್ ಭಾಗಿಯಾಗಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಷಣ್ಮುಗ ವರ್ಮ ಅವರು ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಿದ್ದಾರೆ.

ಕೆ.ಆರ್.ಉಪವಿಭಾಗದ ಎಸಿಪಿ ಎಸ್.ಇ.ಗಂಗಾಧರಸ್ವಾಮಿ ಉಸ್ತುವಾರಿಯಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಇನ್ಸ್‌ಪೆಕ್ಟರ್ ಷಣ್ಮುಗ ವರ್ಮ, ಸಬ್‌ಇನ್ಸ್‌ಪೆಕ್ಟರ್ ರಾಧ, ಗೋಪಾಲ್, ಎಎಸ್‌ಐ ಮಹದೇವ, ಸಿಬ್ಬಂದಿಗಳಾದ ಮಂಜುನಾಥ, ಪುಟ್ಟಪ್ಪ, ನಾಗೇಶ್, ಯೋಗೇಶ್, ಮನುಕುಮಾರ್, ಶ್ರೀನಿವಾಸ್, ಮಾದೇಶ ಇತರರು ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.35 ಋಷಿ ಮನೀಷಿಗಳು, ಲೇಖನ ಶ್ರೀ ರಾಮ್ ಭಟ್, ಪ್ರಸ್ತುತಿ–ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ–ಶಂಕರ್ ಶ್ಯಾನುಭೋಗ್, 9.00 ಕನ್ನಡ ಕಜ್ಜಾಯ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ–ಬನ್ನೂರು ಕೆಂಪಮ್ಮ ಮತ್ತು ತಂಡ, 1.20 ಭಾವಗೀತೆ–ವೃಂದಗಾನ, 3.30 ಮಕ್ಕಳ ಮಂಟಪ–ಮುಖಾಮುಖಿ, ಇಂಗ್ಲೀಷ್ ಭಾಷಾ ಕಲಿಕೆ ಕುರಿತು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಲಿರುವವರು ಸದಾನಂದ, 4.00 ನಾಟಕ, 4.30 ನೆನಪಿನಂಗಳ, ಪ್ರಸ್ತುತಿ– ಎಸ್.ಲಕ್ಷ್ಮೀನಾರಾಯಣ, 6.50 ಕೃಷಿರಂಗ “ತೋರಣ ಹೂರಣ”, ಪ್ರಸ್ತುತಿ– ಎಸ್.ಸುಬ್ರಹ್ಮಣ್ಯ, 9.15 ಶಿಕ್ಷಣದಲ್ಲಿ ಕನ್ನಡ–ಸಿ.ಎಸ್.ಶಿವಸ್ವಾಮಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದ್ಯಾಸಾಗರ್ ಪ್ರಸಾದ್ ಮಿಶ್ರ–ಗಾಯನ, ಪಂಡಿ ನಕುಲ್ ಮಿಶ್ರ–ತಬಲ ಸೋಲೋ, 10.30 ಸವಿನೆನಪು

ಇಂದಿನ ಪಂಚಾಂಗ

20.11.2022 ಭಾನುವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ : ಹಸ್ತ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನ :** ವಾರ್ಷಿಕೋತ್ಸವ, ಬೆಳಗ್ಗೆ 6ಕ್ಕೆ ಗಂಗಾಪೂಜೆ, ಮಹಾಗಣಪತಿ ಪೂಜೆ, ಪುಣ್ಯಾಹಕಲಶ ಸ್ಥಾಪನೆ, ನವಗ್ರಹ ಮಹಾಮೃತ್ಯುಂಜಯ, ರುದ್ರ ತ್ರಿಶತಿ ಕಲಾ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ತೀರ್ಥಪ್ರಸಾದ, ಸ್ಥಳ: ದೇವಸ್ಥಾನ, ಬನ್ನಿಮಂಟಪ ಬಡಾವಣೆ.

■ **ಮಣಿಪಾಲ್ ಆಸ್ಪತ್ರೆ :** ವಾಕರ್ಸ್ ಕ್ಲಬ್ ಪ್ರಾರಂಭದ ಅಂಗವಾಗಿ ವಾಕಥಾನ್, ಚಾಲನೆ : ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ. ಉಪೇಂದ್ರ ಶೆಣೈ, ಆಸ್ಪತ್ರೆ ನಿರ್ದೇಶಕ ಪ್ರಮೋದ್ ಕುಂದರ್, ಸ್ಥಳ: ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 6.30ಕ್ಕೆ.

■ **ಶ್ರೀ ಜ್ವಾಲಾ ಯೂನಿವರ್ಸಲ್ ಹೋಲಿಸ್ಟಿಕ್ ಹೆಲ್ತ್‌ಕೇರ್ ಸೆಂಟರ್ :** ಭಾವ ಪರಿವರ್ತನ ಕುರಿತು ಒಂದು ದಿನದ ಕಾರ್ಯಾಗಾರ, ಸ್ಥಳ: ಹೋಟೆಲ್ ವೈಸ್‌ರಾಯ್ ಕಂಫರ್ಟ್ಸ್, ಬೆಳಗ್ಗೆ 9.30ರಿಂದ.

■ **ಅಸ್ತಿತ್ವ ಫೌಂಡೇಷನ್, ಜೆಎಸ್‌ಎಸ್ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಚಿತ ಔಷಧ ವಿತರಣಾ ಕಾರ್ಯಕ್ರಮ, ಸ್ಥಳ: ಗೆಜ್ಜಗನಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆ, ಬೆಳಗ್ಗೆ 9.30ರಿಂದ.

■ **ಸ್ಪರ್ಶ ಹೆಲ್ತ್ ಮತ್ತು ಕಣ್ಣಿನ ಆಸ್ಪತ್ರೆ:** ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಬಂಬೂ ಬಜಾರ್, ಬೆಳಗ್ಗೆ 10ರಿಂದ.

■ **ಒಕ್ಕಲಿಗರ ಸಂಘ, ಮೈಸೂರು ಪೂರ್ವ ವಲಯ :** ವಧು–ವರರ ಸಮಾವೇಶ, ಸ್ಥಳ: ಸಿದ್ಧಾರ್ಥನಗರ ಸ್ಪೋರ್ಟ್ಸ್ ಕ್ಲಬ್, ಬೆಳಗ್ಗೆ 10ರಿಂದ.

■ **ಶಾರದಾ ವಿಲಾಸ ಕಾಲೇಜು :** ಹಿರಿಯ ವಿದ್ಯಾರ್ಥಿಗಳ ಸಭೆ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ನಗರ ಕೇಂದ್ರ ಗ್ರಂಥಾಲಯ, ಕುವೆಂಪುನಗರ ಶಾಖೆ:** ಗ್ರಂಥಾಲಯ ಸಪ್ತಾಹ ಸಮಾರೋಪ ಸಮಾರಂಭ, ಉದ್ಘಾಟನೆ: ಕವಿ ಡಾ.ಜಯಪ್ಪ ಹೊನ್ನಾಳಿ, ಅಧ್ಯಕ್ಷತೆ: ಗ್ರಂಥಾಲಯ ಶಾಖಾ ಸಮಿತಿ ಸದಸ್ಯ ಎ.ಜಿ. ದೇವರಾಜು, ಸ್ಥಳ: ನಗರ ಕೇಂದ್ರ ಗ್ರಂಥಾಲಯ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಮಂಡಲ ಪೂಜಾ ಮಹೋತ್ಸವ, ಮಹಾಗಣಪತಿ ಹೋಮ, ಉಷಪೂಜೆ, ಪಂಚಗವ್ಯಂ, ಪಂಚಕಂ, ಕಳಸಪೂಜಾ, ಶಿವೇಲಿ ವಾದ್ಯದೊಂದಿಗೆ ದೇವರಿಗೆ ಉತ್ಸವ, ಕಳಸಾಭಿಷೇಕ, ಉದಯಾಸ್ಥಮಾನ ಪೂಜ, ದೀಪರಾಧನೆ, ಅತ್ತಾಳಪೂಜ, ಶ್ರೀ ಭೂತ ಬಲಿ ವಿಳಕ್ಕು, ಅನೇಕ ವಿಶೇಷ ಪೂಜೆಗಳು, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ, ಬೆಳಗ್ಗೆ 10ರಿಂದ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಸಂಗೀತ ಕಲಾನಿಧಿ, ಪದ್ಮಭೂಷಣ ಡಾ. ಮೈಸೂರು ವಿ. ದೊರೆಸ್ವಾಮಿ ಅಯ್ಯಂಗಾರ್ ಜನ್ಮ ಶತಮಾನೋತ್ಸವ, ಬೆಳಗ್ಗೆ 10ಕ್ಕೆ ವಿದುಷಿ ಮೈಸೂರು ಎಸ್. ರಾಜಲಕ್ಷ್ಮಿ ಅವರಿಂದ ವೀಣಾವಾದನ, ವಿದ್ವಾನ್ ಅದಮ್ಯ–ಮೃದಂಗ, ಆರ್. ಶ್ರೀನಿಧಿ–ಘಟ, ಬೆಳಗ್ಗೆ 11.30 ರಿಂದ ವಿದುಷಿ ವಾಣಿ ಯದುನಂದನ್ ಅವರಿಂದ ವೀಣಾವಾದನ, ವಿದ್ವಾನ್ ಅದಮ್ಯ–ಮೃದಂಗ, ಆರ್. ಶ್ರೀನಿಧಿ–ಘಟ, ಸಂಜೆ 6ಕ್ಕೆ ವಿದ್ವಾನ್ ಕಣ್ಣನ್ ಬಾಲಕೃಷ್ಣನ್ ಅವರಿಗೆ ವೈಣಿಕ ಬ್ರಹ್ಮ ಪ್ರಶಸ್ತಿ ಪ್ರದಾನ, ವಿದ್ವಾನ್ ಕಣ್ಣನ್ ಬಾಲಕೃಷ್ಣನ್ ಅವರಿಂದ ವೀಣಾ ವಾದನ, ಡಾ. ನಿಶಾಂತ್ ಚಂದ್ರನ್–ವಯೋಲಿನ್, ವಿದ್ವಾನ್ ಬಿ.ಎಸ್. ಪ್ರಶಾಂತ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ.

■ **ಸಂಸ್ಕೃತಿ ಪ್ರಕಾಶನ:** ಶ್ರೀಮತಿ ನಾಗರತ್ನಮ್ಮನವರ ಪುಣ್ಯಸ್ಮರಣೆ ಅಂಗವಾಗಿ ಲೇಖಕಿ ಗಾಯತ್ರಿ ಸುಂದರೇಶನ್ ಅವರ ರತುನ ಮೆಚ್ಚಿದ ಕಥೆಗಳು ಕೃತಿ ಲೋಕಾರ್ಪಣೆ, ಪುಸ್ತಕ ಲೋಕಾರ್ಪಣೆ: ನಿವೃತ್ತ ತಹಸೀಲ್ದಾರ್, ಅಂಕಣಕಾರರಾದ ಡಾ.ವಿ.ರಂಗನಾಥ್, ಮುಖ್ಯ ಅತಿಥಿಗಳು : ಲೇಖಕ ಸಂಸ್ಕೃತಿ ಸುಬ್ರಹ್ಮಣ್ಯ, ನಿವೃತ್ತ ರೈಲ್ವೆ ಅಧಿಕಾರಿ ಎಚ್.ಎಸ್.ರಾಮಣ್ಣ, ಸ್ಥಳ: ಬಬ್ಬೂರು ಕಮ್ಮೆ ಸಂಘ, ಸರಸ್ವತಿಪುಂ, ಮಧ್ಯಾಹ್ನ 12.15ಕ್ಕೆ.

■ **ಶ್ರೀ ಚಾಮುಂಡೇಶ್ವರಿ ರೈಲ್ವೆ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ:** ಸಂಘದ ಉದ್ಘಾಟನಾ ಸಮಾರಂಭ, ರಾಜ್ಯೋತ್ಸವ, ಮಕ್ಕಳ ದಿನಾಚರಣೆ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ: ಅಧ್ಯಕ್ಷ ಎಂ.ಕೆ.ಶ್ರೀಧರ್, ಗೌರವ ಅತಿಥಿಗಳು: ಪೊಲೀಸ್ ಇನ್ಸ್‌ಪೆಕ್ಟರ್ ಹರೀಶ್‌ಬಾಬು, ಪಂಚಾಕ್ಷರಿ, ಸಂಘದ ಅಧ್ಯಕ್ಷ ಧರ್ಮೇಗೌಡ, ಸಲ್ಮಾ ಸಿದ್ದಿಖ್, ಸ್ಥಳ: ಸಂಘದ ಆವರಣ, ಶ್ರೀ ಚಾಮುಂಡೇಶ್ವರಿ ರೈಲ್ವೆ ಬಡಾವಣೆ, ಮಧ್ಯಾಹ್ನ 3ಕ್ಕೆ.

■ **ಶ್ರೀಪುರುಷ ಸಾಂಸ್ಕೃತಿಕ ಸಮಿತಿ :** 3ನೇ ಶ್ರೀಪುರುಷೋತ್ಸವ ಸಮಾರಂಭ ಹಾಗೂ ಡಾ. ಬಿ.ಎನ್. ರವೀಶ್ ವಿರಚಿತ ಸಾಮ್ರಾಟ್ ಶ್ರೀಪುರುಷ ಪುಸ್ತಕ ಲೋಕಾರ್ಪಣೆ, ಪುಸ್ತಕ ಬಿಡುಗಡೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಸಾಮ್ರಾಟ್ ಶ್ರೀಪುರುಷನ ಬಗ್ಗೆ ಉಪನ್ಯಾಸ ಇತಿಹಾಸಕಾರ ಡಾ. ತಲಕಾಡು ಚಿಕ್ಕರಂಗೇಗೌಡ ಅವರಿಂದ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಉಪಸ್ಥಿತರು: ಲಯನ್ ಕೆ.ದೇವೇಗೌಡ, ಡಾ.ಟಾಮ್ ಪಾಲ್ಮಿಸ್ಟರ್, ಡಾ. ಪೀಟರ್ ಲೆಪ್ಪಿಂಗ್, ಸಿಂಡಿಕೇಟ್ ಸದಸ್ಯ ಡಾ. ಇ.ಸಿ.ನಿಂಗರಾಜೇಗೌಡ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಹುಣಸೂರು ರಸ್ತೆ, ಸಂಜೆ 4ಕ್ಕೆ.

■ **ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಗಳು, ವೆಂಕಟಗಿರಿ ಪ್ರಕಾಶನ, ಮಿತ್ರಕೂಟ, ತಿಪ್ಪೂರು :** ಶ್ರೀ ಕೃಷ್ಣ ತಿಪ್ಪೂರು ಅವರ ಭೀಷ್ಮ ಮಹಾಕಾದಂಬರಿ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃತಿ ಬಿಡುಗಡೆ: ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಅಧ್ಯಕ್ಷತೆ: ಶಾಸಕ ಸಾ.ರಾ. ಮಹೇಶ್, ಕೃತಿ ಕುರಿತು ಮಾತನಾಡುವವರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕ ಡಾ. ಎಂ. ನೀಲಗಿರಿ ತಳವಾರ್, ಮುಖ್ಯ ಅತಿಥಿಗಳು : ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಮಾಜಿ ಶಾಸಕ ವಾಸು, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಡಾ. ಸತೀಶ್‌ಕುಮಾರ್ ಎಸ್. ಹೊಸಮನಿ, ದಿಕ್ಸೂಚಿ ಭಾಷಣ : ಪ್ರೊ. ನೀ. ಗಿರಿಗೌಡ, ಉಪಸ್ಥಿತರು : ಕೃತಿಕಾರ ಕೃಷ್ಣತಿಪ್ಪೂರು, ಸ್ಥಳ: ವಿಜ್ಞಾನ ಭವನ, ಮೈಸೂರು ವಿವಿ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ:** ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ ಹಾಗೂ ಪ್ರತಿಷ್ಠಾನದ 15ನೇ ವಾರ್ಷಿಕೋತ್ಸವ, ಮಕ್ಕಳ ನಾಟಕ ಕೃತಿಗಳ ಲೋಕಾರ್ಪಣೆ, ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಪ್ರತಿಷ್ಠಾನ ಅಧ್ಯಕ್ಷ ಎಂ.ಬಿ.ಸಂತೋಷ್, ಉದ್ಘಾಟನೆ: ಕವಯಿತ್ರಿ ಹೇಮಗಂಗಾ, ಉಪಸ್ಥಿತರು: ಪ್ರೊ.ಮೊರಬದ ಮಲ್ಲಿಕಾರ್ಜುನ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಪ್ರಾಧ್ಯಾಪಕ ಡಾ.ಹೆಚ್.ಎನ್.ವಿಶ್ವನಾಥ್, ಎನ್.ಸಿ.ಮಮತ, ಬಿ.ಶೋಭಾ, ಪ್ರತಿಷ್ಠಾನ ಉಪಾಧ್ಯಕ್ಷೆ ಸಿ. ವಾಣಿರಾಘವೇಂದ್ರ, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಸಂಜೆ 4ಕ್ಕೆ.

■ **ಮೈಸೂರು ಮೆಲೋಡಿ ಸಿಂಗರ್ಸ್ ಗ್ರೂಪ್ :** ಕನ್ನಡ ರಾಜ್ಯೋತ್ಸವ ಅಂಗವಾಗಿ ಕನ್ನಡ ಸ್ವರಗಾನಮೃತ ಕನ್ನಡ ಗೀತ ಗಾಯನ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಉಪಮೇಯರ್ ಡಾ.ಜಿ.ರೂಪ, ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಸಂಸ್ಕೃತಿ ಚಿಂತಕ ಪ್ರೊ.ಕೃಷ್ಣೇಗೌಡ, ಸಯ್ಯದ್ ಇಸಾಕ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 4ಕ್ಕೆ.

■ **ಶ್ರೀ ನಿಮಿಷಾಂಬಾ ಡ್ಯಾನ್ಸ್ ಪ್ರಮೋಟರ್ಸ್:** ಹೆಜ್ಜೆ–ಗೆಜ್ಜೆ ರಾಷ್ಟ್ರೀಯ ನೃತ್ಯೋತ್ಸವ, ಅತಿಥಿಗಳು: ಜೀ ವಾಹಿನಿ ಬ್ಯುಸಿನೆಸ್ ಹೆಡ್ ರಾಘವೇಂದ್ರ ಹುಣಸೂರು, ಕನ್ನಡ ಚಲನಚಿತ್ರ ನಟಿ ಪ್ರಿಯಾಂಕ ಉಪೇಂದ್ರ, ಹೆಚ್‌ಸಿಜಿ ಗ್ರೂಪ್ ಆಫ್ ಹಾಸ್ಪಿಟಲ್ಸ್ ಮತ್ತು ಭಾರತ್ ಕ್ಯಾನ್ಸರ್ ಆಸ್ಪತ್ರೆ ಅಧ್ಯಕ್ಷ ಡಾ.ಬಿ.ಎಸ್.ಅಜಯ್‌ಕುಮಾರ್, ಐಜಿಪಿ ಡಾ.ವಿಪುಲ್‌ಕುಮಾರ್, ಮಾಜಿ ಶಾಸಕ ವಾಸು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಚಿತ್ರ ನಿರ್ದೇಶಕ ಸುಧಾಕರ್ ಸಾಜಾ, ಸ್ಥಳ: ಮಾನಸಗಂಗೋತ್ರಿ ಬಯಲು ರಂಗಮಂದಿರ, ಸಂಜೆ 5ಕ್ಕೆ.

■ **ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಗಳ ಒಕ್ಕೂಟ:** ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿ ಕುಲಪತಿ ಪ್ರೊ.ಸಂತೋಷ್‌ಕುಮಾರ್, ಸನ್ಮಾನಿತರು: ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ರಂಗಭೂಮಿ ಕಲಾವಿದ ಶೃಂಗೇರಿ ರಾಮಣ್ಣ, ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್, ಸ್ಥಳ: ಮೈಸೂರು ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್, ವಿಶ್ವೇಶ್ವರನಗರ, ಸಂಜೆ 5.30ಕ್ಕೆ.

■ **ಡಾ.ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗ, ಪ್ರಣವ್ ಪಿಕ್ಚರ್ಸ್:** 2ನೇ ವರ್ಷದ ಮೈಸೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವ, ಪ್ರಶಸ್ತಿ ಪ್ರದಾನ ಸಮಾರಂಭ, ಉಪಸ್ಥಿತರು: ನಟಿ ಗಿರಿಜಾ ಲೋಕೇಶ್, ಶ್ರೀದೇವಿ ಉನ್ನಿ, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಜೈಪ್ರಕಾಶ್, ರಂಗಭೂಮಿ ಕಲಾವಿದೆ ರಾಮೇಶ್ವರಿ ವರ್ಮ, ಡಿ.ಟಿ.ಪ್ರಕಾಶ್, ರಮೇಶ್, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಟಿಪ್ಪು ನಿಜ ಕನಸುಗಳು ನಾಟಕ ಪ್ರದರ್ಶನ, ನಿರ್ದೇಶನ: ಅಡ್ಡಂಡ ಸಿ.ಕಾರ್ಯಪ್ಪ, ಸಂಗೀತ: ಧನಂಜಯ ಆರ್.ಸಿ.ಸುಬ್ರಹ್ಮಣ್ಯ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆಯವರ ದೈವತ್ವ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಟನ ರಂಗಶಾಲೆ :** ನಟನ ಕಲಾವಿದರಿಂದ ದ.ರಾ. ಬೇಂದ್ರೆ ರಚಿಸಿರುವ ‘ಸಾಯೋ ಆಟ’ ಹಾಸ್ಯಭರಿತ ನಾಟಕ ಪ್ರದರ್ಶನ, ನಿರ್ದೇಶನ : ಮಂಡ್ಯ ರಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಕಲಾಸುರುಚಿ :** ವಿದ್ವಾನ್ ವೈ.ಎಂ. ಪುಟ್ಟಣ್ಣಯ್ಯ ಮತ್ತು ತಂಡದಿಂದ ರಂಗ ಸಂಗೀತ, ಡಿ. ರಾಮು–ಕ್ಲಾರಿಯೋನೆಟ್, ಮಹದೇವ್–ತಬಲ, ಎಂ.ಎಸ್. ಜಯರಾಮ್–ತಬಲ, ಮುಖ್ಯ ಅತಿಥಿಗಳು : ವಚನ ಸಾಹಿತ್ಯ ವ್ಯಾಖ್ಯಾನಕಾರ ದೇವನೂರು ಶಂಕರ್, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30ಕ್ಕೆ.

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ :** ಸಿದ್ಧ ಸಮಾಧಿ ಯೋಗ ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸ ವಿಶೇಷ ಪೂಜಾ ಮಹೋತ್ಸವ, ವರಪೂಜೆ, ಸ್ಥಳ: ದೇವಸ್ಥಾನದ ಆವರಣ, ಕೆ.ಆರ್.ಮೊಹಲ್ಲಾ, ಸಂಜೆ 7ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮುಳ್ಳೂರು ಗ್ರಾಮದಲ್ಲಿಂದು, ಹುಣಸೂರು ತಾ.

■ **ಬಾ ಸೃಷ್ಟಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ :** ಬಾ ಸೃಷ್ಟಿ ಮಕ್ಕಳ ರಂಗ ತರಬೇತಿ ಶಿಬಿರ, ಮುಳ್ಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಂದ ಅಳಿಲು ರಾಮಾಯಣ ನಾಟಕ ಪ್ರದರ್ಶನ, ರಚನೆ : ಶ್ರೀಮತಿ ವೈದೇಹಿ, ನಿರ್ದೇಶನ: ಪಿ. ಶ್ರೇಯಸ್, ಸ್ಥಳ: ಮುಳ್ಳೂರು ಗ್ರಾಮ, ರಾ. 7.30ಕ್ಕೆ.

ಚಾಮರಾಜ ಕ್ಷೇತ್ರದಲ್ಲಿ 600 ಕೋಟಿಗೂ ಅಧಿಕ ಮೊತ್ತದ ಕಾಮಗಾರಿಗೆ ಚಾಲನೆ

ಬೂತ್ ಸಶಕ್ತೀಕರಣ ಸಭೆಯಲ್ಲಿ ಶಾಸಕ ಎಲ್.ನಾಗೇಂದ್ರ ಮಾಹಿತಿ

ಮೈಸೂರು,ನ.19(ಎಸ್‌ಬಿಡಿ)–ಎರಡೂವರೆ ದಶಕದಿಂದ ಬಿಜೆಪಿ ಭದ್ರಕೋಟೆಯಾಗಿರುವ ಚಾಮರಾಜ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ನೂರಾರು ಕೋಟಿ ಅನುದಾನ ನೀಡಿದೆ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಮೈಸೂರಿನ ವಿಜಯನಗರ ಕೊಡವ ಸಮಾಜ ಸಭಾಂಗಣದಲ್ಲಿ ಶನಿವಾರ ನಡೆದ ಚಾಮರಾಜ ವಿಧಾನಸಭಾ ಕ್ಷೇತ್ರದ ಬೂತ್ ಸಶಕ್ತೀಕರಣ ಸಭೆಯಲ್ಲಿ ಮಾತನಾಡಿದ ಅವರು, ಚಾಮರಾಜ ಕ್ಷೇತ್ರವು 25 ವರ್ಷಗಳಿಂದ ಬಿಜೆಪಿ ಭದ್ರಕೋಟೆಯಾಗಿದ್ದು, ಎಲ್ಲಾ ಚುನಾವಣೆಯಲ್ಲೂ ಪಕ್ಷಕ್ಕೆ ಹೆಚ್ಚಿನ ಮತ ದಕ್ಕಿದೆ. ಇದೆಲ್ಲವೂ ಕಾರ್ಯಕರ್ತರ ಪರಿಶ್ರಮದಿಂದ ಸಾಧ್ಯವಾಗಿದೆ ಎಂದು ಹೇಳಿದರು.

ಸರ್ಕಾರ ನಮ್ಮ ಕ್ಷೇತ್ರಕ್ಕೆ ಅಪಾರ ಅನುದಾನ ನೀಡಿದೆ. 600 ಕೋಟಿ ರೂ.ಗೂ ಹೆಚ್ಚು ಅಂದಾಜು ಮೊತ್ತದ ಕಾಮಗಾರಿಗಳು ಪ್ರಗತಿಯಲ್ಲಿವೆ. ಕ್ಷೇತ್ರದಲ್ಲಿ ಹಿಂದೆಂದೂ ಕಾಣದಷ್ಟು ಅಭಿವೃದ್ಧಿ ಕಾರ್ಯಗಳಾಗಿರುವುದನ್ನು ಜನರೇ ಹೇಳುತ್ತಿದ್ದಾರೆ. ನಿಮ್ಮೆಲ್ಲರ ಸಹಕಾರದೊಂದಿಗೆ ಕ್ಷೇತ್ರದ ಶಾಸಕನಾಗಿ ಹಗಲಿರುಳು ಕಾರ್ಯನಿರ್ವಹಿಸುವ ಮೂಲಕ ಜನರ ಋಣ ತೀರಿಸುವ ಪ್ರಯತ್ನದಲ್ಲಿದ್ದೇನೆ. ನಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ



ವಿಶೇಷ ಕಾಳಜಿ ತೋರಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಆಭಾರಿಯಾಗಿದ್ದೇನೆ. ಕ್ಷೇತ್ರದ ಮನೆ ಮನೆಗೆ ತೆರಳಿ ಸರ್ಕಾರದ ಸಹಕಾರ ಹಾಗೂ ಕ್ಷೇತ್ರದಲ್ಲಾಗಿರುವ ಅಭಿವೃದ್ಧಿಯ ಬಗ್ಗೆ ತಿಳಿಸಬೇಕೆಂದು ಕರೆ ನೀಡಿದರು.

ಬಿಜೆಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ಜಿ.ವಿ. ರಾಜೇಶ್ ಮಾತನಾಡಿ, ವಿರೋಧ ಪಕ್ಷಗಳ ಟೀಕೆ, ವಿರೋಧದ ನಡುವೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅಭಿವೃದ್ಧಿಪರ ಆಡಳಿತ ನೀಡುತ್ತಿವೆ. ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೂ ಒತ್ತು ನೀಡಲಾಗಿದೆ. ಸರ್ಕಾರಗಳ ಕಾರ್ಯಕ್ರಮ, ಯೋಜನೆಗಳ ಬಗ್ಗೆ ಸದಾ ಜನರೊಂದಿಗೆ ಬೆರೆಯುವ ಬೂತ್ ಮಟ್ಟದ ಕಾರ್ಯಕರ್ತರು ತಿಳಿಹೇಳಬೇಕು. ಪ್ರಧಾನಿ, ಮುಖ್ಯಮಂತ್ರಿಗಳ ಆಡಳಿತ, ಸ್ಥಳೀಯ ಶಾಸಕರ ಪರಿಶ್ರಮದ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಒಂದು ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿರುವ 18 ವರ್ಷದ ಮೇಲ್ಪಟ್ಟ ಪ್ರತಿಯೊಬ್ಬರನ್ನೂ ಮಾತನಾಡಿಸಿ, ಬೆಂಬಲ ಕೇಳಬೇಕು. ಅದರಿಂದ ಪಕ್ಷದ ಗೆಲುವಿಗೆ ಅನುಕೂಲವಾಗಲಿದೆ ಎಂದು ಕಿವಿಮಾತು ಹೇಳಿದರು.

ಕಾಂಗ್ರೆಸ್ ಹಿಂದೂ ವಿರೋಧಿ ಧೋರಣೆ ಹೊಂದಿದೆ. ಗೋಹತ್ಯೆ ನಿಷೇಧ ಹಾಗೂ ಮತಾಂತರ ನಿಷೇಧ ಕಾಯ್ದೆಗೆ ಕಾಂಗ್ರೆಸ್ ಬೆಂಬಲಿಸಲಿಲ್ಲ. ಮತಬ್ಯಾಂಕ್‌ಗಾಗಿ ಹಿಂದೂ ಧರ್ಮೀಯರ ಭಾವನೆಗೆ ಬೆಲೆ ಕೊಡಲಿಲ್ಲ. ಕಾಂಗ್ರೆಸ್ ಕಾರ್ಯಕರ್ತರು ಮತ ಕೇಳಲು ಬಂದಾಗ ಜನ ಪ್ರಶ್ನಿಸಬೇಕು. ನಿಮ್ಮ ಪಕ್ಷ ಹಿಂದೂ ಪರವೋ? ಅಥವಾ ವಿರೋಧವೋ? ಎಂದು ಕೇಳಿ ಉತ್ತರವನ್ನು ನಿಮ್ಮ ನಾಯಕರಿಂದ ಹೇಳಿಸಿ ಎಂದು ತಾಕೀತು ಮಾಡಬೇಕು. ಆಗ ಕಾಂಗ್ರೆಸ್‌ನ ನಿಜಮುಖ ಬಯಲಾಗುತ್ತದೆ ಎಂದರು.

ಇದಕ್ಕೂ ಮುನ್ನ ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ಮಾತನಾಡಿ, ಚಾಮರಾಜ ಕ್ಷೇತ್ರದಲ್ಲಿ ಬಿಜೆಪಿಯ ಇತಿಹಾಸವನ್ನು ಮೆಲುಕು ಹಾಕುವುದರ ಜೊತೆಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬೂತ್ ಸಮಿತಿ ಪದಾಧಿಕಾರಿಗಳ ಮಹತ್ವದ ಜವಾಬ್ದಾರಿ ಬಗ್ಗೆ ಮಾಹಿತಿ ನೀಡಿದರು.

ಮೇಯರ್ ಶಿವಕುಮಾರ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಚಾಮರಾಜ ಕ್ಷೇತ್ರದ ಉಸ್ತುವಾರಿ ಮೈ.ವಿ. ರವಿಶಂಕರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಕ್ಷೇತ್ರದ ಅಧ್ಯಕ್ಷ ಸೋಮಶೇಖರ ರಾಜು, ಪ್ರಧಾನ ಕಾರ್ಯದರ್ಶಿಗಳಾದ ಪುನೀತ್, ರಮೇಶ್, ಚಾಮರಾಜ ಬಿಎಲ್‌ಎ1 ದಿನೇಶ್‌ಗೌಡ, ಪಾಲಿಕೆ ಸದಸ್ಯರಾದ ಎಂ.ಯು.ಸುಬ್ಬಯ್ಯ, ರಂಗಸ್ವಾಮಿ, ರವೀಂದ್ರ, ವೇದಾವತಿ, ಚಿಕ್ಕವೆಂಕಟು, ಮಾಜಿ ಸದಸ್ಯರಾದ ಗಿರೀಶ್‌ಪ್ರಸಾದ್, ಶ್ರೀರಾಮ್, ದೇವರಾಜು ಸೇರಿದಂತೆ ಅನೇಕ ಮುಖಂಡರು, ಕ್ಷೇತ್ರದ 245 ಬೂತ್‌ಗಳ, ಸುಮಾರು 800ಕ್ಕೂ ಹೆಚ್ಚು ಪದಾಧಿಕಾರಿಗಳು ಸಭೆಯಲ್ಲಿದ್ದರು.

ಡಿ.7ರಿಂದ 29ರವರೆಗೆ ಸಂಸತ್ ಅಧಿವೇಶನ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನ ಡಿಸೆಂಬರ್ 7ರಿಂದ 29ರವರೆಗೆ ನಡೆಯಲಿದೆ. ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಈ ಮಾಹಿತಿ ನೀಡಿದ್ದಾರೆ. ಅಧಿವೇಶನದಲ್ಲಿ ಶಾಸಕಾಂಗ ವ್ಯವಹಾರ ಮತ್ತು ಇತರ ವಿಷಯಗಳ ಕುರಿತು ಚರ್ಚೆ ಗಳನ್ನು ನಿರೀಕ್ಷಿಸಲಾಗಿದೆ. ರಚನಾತ್ಮಕ ಚರ್ಚೆಗೆ ನಾವು ಸಿದ್ಧರಿದ್ದೇವೆ ಎಂದು ಪ್ರಹ್ಲಾದ್ ಜೋಶಿ ಹೇಳಿದ್ದಾರೆ.



ಹಾಲಿ ಸಂಸದರ ನಿಧನವನ್ನು ಗಮನದಲ್ಲಿಟ್ಟುಕೊಂಡು ಮುಂಬರುವ ಅಧಿವೇಶನದ ಮೊದಲ ದಿನವನ್ನು ಮುಂದೂಡುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ. ಇತ್ತೀಚೆಗೆ ನಿಧನರಾದ ಹಾಲಿ ಸಂಸದರಲ್ಲಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಮುಲಾಯಂ ಸಿಂಗ್ ಯಾದವ್ ಕೂಡ ಸೇರಿದ್ದಾರೆ. ಮುಂಬರುವ ಚಳಿಗಾಲದ ಅಧಿವೇಶನದಲ್ಲಿ ಅಂಗೀಕಾರಗೊಳ್ಳುವ ಮಸೂದೆಗಳ ಪಟ್ಟಿಯನ್ನು ಸರ್ಕಾರ ಸಿದ್ಧಪಡಿಸಲಿದೆ. ಈ ವೇಳೆ ಪ್ರತಿಪಕ್ಷಗಳು ತುರ್ತು ವಿಷಯಗಳ ಬಗ್ಗೆ ಚರ್ಚೆ ನಡೆಸಲಿವೆ. ಉಪರಾಷ್ಟ್ರಪತಿ ಜಗದೀಪ್ ಧಂಖರ್, ರಾಜ್ಯ ಸಭೆಯ ಕಲಾಪಗಳನ್ನು ನಡೆಸುವ ಸಂಸತ್ತಿನ ಮೊದಲ ಅಧಿವೇಶನ ಇದಾಗಿದೆ.

ಶ್ರೀ ನನ್ನೇಶ್ವರ ಸ್ವಾಮಿ ಕಲ್ಯಾಣಿಯ ದೀಪೋತ್ಸವ

ಮೈಸೂರು,ನ.19–ಮೈಸೂರು ತಾಲೂಕು ಹಿನಕಲ್ ಗ್ರಾಮದ ಶ್ರೀ ನನ್ನೇಶ್ವರಸ್ವಾಮಿ ಕಲ್ಯಾಣಿಯ ದೀಪೋತ್ಸವ, ಪೂಜಾ ಮಹೋತ್ಸವ ಕಾರ್ಯಕ್ರಮವನ್ನು ನ.21ರ ಕಡೇ ಕಾರ್ತಿಕ ಸೋಮವಾರ ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಹಿನಕಲ್, ವಿಜಯನಗರ 1ನೇ, 2ನೇ 3ನೇ ಮತ್ತು 4ನೇ ಹಂತ, ಆದಿತ್ಯ ಬಡಾವಣೆ, ನನ್ನೇಶ್ವರ ಬಡಾವಣೆ ಹಾಗೂ ಇನ್ನಿತರೆ ಅಕ್ಕಪಕ್ಕದ ಬಡಾವಣೆಯ ನಿವಾಸಿಗಳು ಸುಮಾರು 10 ಸಾವಿರ ಸಾರ್ವಜನಿಕ ಭಕ್ತಾದಿಗಳು ಭಾಗವಹಿಸುತ್ತಿದ್ದು, ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ದಸರಾ ವಸ್ತುಪ್ರದರ್ಶನದಲ್ಲಿ ಪರಿಸರ ಮಾಲಿನ್ಯದ ಬಗ್ಗೆ ಜನ ಜಾಗೃತಿ ಮಳಿಗೆ

'ಇರುವುದೊಂದೇ ಭೂಮಿ ಇದರ ಸಂರಕ್ಷಣೆ ನಮ್ಮೆಲ್ಲರ ಹೊಣೆ'

ಮೈಸೂರು, ನ.19(ಎಂಕೆ)– ಮೈಸೂರಿನ ದಸರಾ ವಸ್ತುಪ್ರದರ್ಶನದಲ್ಲಿ 'ಇರುವುದೊಂದೇ ಭೂಮಿ ಇದರ ಸಂರಕ್ಷಣೆ ನಮ್ಮೆಲ್ಲರ ಹೊಣೆ' ಎಂದು ಪರಿಸರ ಮಾಲಿನ್ಯ ಕುರಿತು ಜಾಗೃತಿ ನೀಡುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಳಿಗೆಯನ್ನು ಶನಿವಾರ ಉದ್ಘಾಟಿಸಲಾಯಿತು.

ಮಳಿಗೆ ಉದ್ಘಾಟಿಸಿದ ಮಂಡಳಿ ಅಧ್ಯಕ್ಷ ಡಾ.ಶಾಂತ್ ಎ.ತಿಮ್ಮಯ್ಯ ಮಾತನಾಡಿ, ಪರಿಸರ ಸಂರಕ್ಷಣೆ ಮುಖ್ಯವಾಗಿದ್ದು, ಮಳಿಗೆಗೆ ಭೇಟಿ ನೀಡುವವರಿಗೆ ಪರಿಸರ ಸಂರಕ್ಷಣೆ ಕುರಿತು ಪ್ರತ್ಯಕ್ಷ ಪ್ರಾತ್ಯಕ್ಷಿಕೆ ಮೂಲಕ ತಿಳಿಸಿಕೊಡಲಾಗುವುದು. ಪ್ಲಾಸ್ಟಿಕ್ ವಸ್ತುಗಳ ಮರುಬಳಕೆ, ಕಾರ್ಖಾನೆಗಳಿಂದ ಬರುವ ತ್ಯಾಜ್ಯ ನೀರಿನ ಶುದ್ಧೀಕರಣ ಸೇರಿದಂತೆ ಪರಿಸರ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕಾದ ಅಂಶಗಳನ್ನು ತಿಳಿಸಿಕೊಡಲಾಗುವುದು ಎಂದು ಹೇಳಿದರು.

ದಸರಾ ವಸ್ತುಪ್ರದರ್ಶನ ಇನ್ನೂ ಸುಮಾರು 40 ದಿನಗಳು ನಡೆಯಲಿದ್ದು, ಅಷ್ಟೂ ದಿನಗಳು ಪ್ರತಿನಿತ್ಯ ಸಾಧ್ಯವಾದಷ್ಟು ಮಾಹಿತಿ ನೀಡಲಾಗುವುದು. ಪ್ರತಿದಿನ ಶಾಲಾ ಮಕ್ಕಳನ್ನು ಕರೆತಂದು ಮಾಹಿತಿ ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಅಲ್ಲದೆ ಮಳಿಗೆಯಲ್ಲಿ ಕ್ಯೂಆರ್ ಕೋಡ್ ಮೂಲಕ ಕ್ವಿಜ್



ಕಾಂಪಿಟೇಷನ್ ನಡೆಸಲಾಗುವುದು. ಪರಿಸರ ಸಂರಕ್ಷಣೆ ಕುರಿತು ನೀಡಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಿದವರಿಗೆ ಪ್ರಮಾಣ ಪತ್ರ ನೀಡಿ ಪ್ರೋತ್ಸಾಹಿಸುವ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಪ್ರತಿ ದಿನ ಮಂಡಳಿ ಅಧಿಕಾರಿಗಳು ಇರಲಿದ್ದು, ಮಳಿಗೆಗೆ ಭೇಟಿ ನೀಡುವವರಿಗೆ ಮಾಹಿತಿ ನೀಡಲಿದ್ದಾರೆ ಎಂದು ತಿಳಿಸಿದರು.

ಬ್ಯಾನ್ ಆಗಿರುವ ಪ್ಲಾಸ್ಟಿಕ್ ಬಳಕೆ ತಡೆಗೆ ಮಂಡಳಿಯಿಂದ ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದ್ದು, 100ಕ್ಕೂ ಹೆಚ್ಚು ಪ್ಲಾಸ್ಟಿಕ್ ತಯಾರಿಕಾ ಕಾರ್ಖಾನೆಗಳನ್ನು ಸೀಜ್ ಮಾಡಿ, ದಂಡ ವಿಧಿಸಲಾಗಿದೆ. ಬ್ಯಾನ್ ಆಗಿರುವ ಪ್ಲಾಸ್ಟಿಕ್ ತಡೆಗೆ ಹಲವು ಕಾರ್ಯಚಟುವಟಿಕೆಗಳನ್ನು ರೂಪಿಸಿದ್ದು, ಉತ್ತರ ಕರ್ನಾಟಕ ಭಾಗದ 13ಕ್ಕೂ ಹೆಚ್ಚು ಜಿಲ್ಲೆಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ನಿಷೇಧಿತ ಪ್ಲಾಸ್ಟಿಕ್ ಬಳಕೆ ಸಂಪೂರ್ಣವಾಗಿ ನಿಲ್ಲಬೇಕಾಗಿದ್ದು, ಸಾರ್ವಜನಿಕರ ಸಹಕಾರವೂ ಅಗತ್ಯವಾಗಿದೆ ಎಂದರು. ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ತ್ರಿವಿಕ್ರಮ ರಾಮ್, ಹಿರಿಯ ಪರಿಸರ ಅಧಿಕಾರ ಬಿ.ಎಂ.ಪ್ರಕಾಶ್, ಪ್ರಾದೇಶಿಕ ಅಧಿಕಾರಿ ಜಿ.ಆರ್.ಗಣೇಶ್ ಮತ್ತಿತರರಿದ್ದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಳಿಗೆಯಲ್ಲಿ ಇ-ತ್ಯಾಜ್ಯ ನಿರ್ವಹಣೆ, ಜಲ-ವಾಯು ಮತ್ತು ಶಬ್ದಮಾಲಿನ್ಯ ನಿಯಂತ್ರಣ, ಘನ ತ್ಯಾಜ್ಯ ನಿರ್ವಹಣೆ, ಜೀವ ವೈದ್ಯಕೀಯ ನಿರ್ವಹಣೆ, ಬ್ಯಾಟರಿ ತ್ಯಾಜ್ಯ ನಿರ್ವಹಣೆಯ ಮಾಹಿತಿ ಜೊತೆಗೆ ಪರಿಸರ ಸ್ನೇಹಿ ಗಣಪತಿ ಬಳಕೆ, ದೀಪಾವಳಿ ಆಚರಣೆ ಹಾಗೂ ಮಂಡಳಿ ಮಾಪನ ಕಾರ್ಯಕ್ರಮಗಳ ಮಾಹಿತಿ ನೀಡುವ ಮೂಲಕ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದು ತಿಳಿಸಲಾಗಿದೆ. ಜೊತೆಗೆ 5 ರೂ. ಕಾಯಿನ್‌ನಿಂದ ಬಟ್ಟೆ ಬ್ಯಾಗ್ ನೀಡುವ ಯಂತ್ರ, ಕಾರ್ಖಾನೆಗಳಿಂದ ಬರುವ ತ್ಯಾಜ್ಯ ನೀರು ಶುದ್ಧೀಕರಣ ಯಂತ್ರ ಸೇರಿದಂತೆ ಕೆಲ ಯಂತ್ರೋಪಕರಣಗಳಿಂದ ತ್ಯಾಜ್ಯ ನಿರ್ವಹಣೆ ಹಾಗೂ ಮರುಬಳಕೆ ವಿಧಾನವನ್ನು ತಿಳಿಸಿಕೊಡಲಾಗುತ್ತದೆ.

ನ.27ರಂದು ಗೊಮ್ಮಟೇಶ್ವರನಿಗೆ ಮಹಾಮಸ್ತಕಾಭಿಷೇಕ



ಮೈಸೂರು,ನ.19(ಪಿಎಂ)– ಜಿಲ್ಲೆಯ ಹುಣಸೂರು ತಾಲೂಕು ಬಿಳಿಕೆರೆ ಹೋಬಳಿಯ ಬೆಟ್ಟದೂರು ಗ್ರಾಮದ ಬಳಿಯ ಶ್ರೀ ಕ್ಷೇತ್ರ ಗೊಮ್ಮಟಗಿರಿಯಲ್ಲಿ ಇಲ್ಲಿನ ಗೊಮ್ಮಟೇಶ್ವರ ಮೂರ್ತಿಗೆ ನ.27ರಂದು 73ನೇ ಮಹಾಮಸ್ತಕಾಭಿಷೇಕ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಗೊಮ್ಮಟಗಿರಿ ಕ್ಷೇತ್ರ ಸೇವಾ ಸಮಿತಿ ಅಧ್ಯಕ್ಷ ಡಾ.ಎಂ.ವಿ.ಶಾಂತಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸದರಿ ಕ್ಷೇತ್ರದಲ್ಲಿ 18 ಅಡಿ ಎತ್ತರದ ಕರಿಕಲ್ಲಿನಲ್ಲಿ ಕೆತ್ತಿರುವ ಬಾಹುಬಲಿ ಮೂರ್ತಿ ಇದೆ. ಶ್ರವಣಬೆಳಗೊಳದಲ್ಲಿರುವ ಬಾಹುಬಲಿ ಮೂರ್ತಿ ಬಿಟ್ಟರೆ ಸುಂದರ ಹಾಗೂ ಭವ್ಯವಾದ ಮೂರ್ತಿ ಇದೆಂಬ ಹೆಗ್ಗಳಿಕೆ ಹೊಂದಿದೆ. ಇಲ್ಲಿ 1950ರ ಸೆ.10ರಂದು ಮೊದಲ ಮಸ್ತಕಾಭಿಷೇಕ ನೆರವೇರಿಸಲಾಯಿತು ಎಂದರು.

ಅಂದು ಬೆಳಗ್ಗೆ 11ಕ್ಕೆ ಶಿವಮೊಗ್ಗ ಜಿಲ್ಲೆಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಡಾ.ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಚಾರ್ಯವರ್ಯ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮಸ್ತಕಾಭಿಷೇಕ ನಡೆಯಲಿದೆ. ಇದೇ ಮೊದಲ ಬಾರಿಗೆ ಕ್ಷೇತ್ರಕ್ಕೆ ಮಂಡ್ಯ ಜಿಲ್ಲೆಯ ಆರತಿಪುರದ ಜೈನ ಮಠದ ಭಟ್ಟಾರಕ ಸಿದ್ಧಾಂತಕೀರ್ತಿ ಸ್ವಾಮೀಜಿ ಆಗಮಿಸಲಿದ್ದಾರೆ. ಈ ಮಹೋತ್ಸವದ ಕುರಿತಂತೆ ಹೆಚ್ಚಿನ ಮಾಹಿತಿ ಹಾಗೂ ಕಳಸ ಪಡೆಯಲು ಮೊ.ಸಂ. 98864 46310 ಅನ್ನು ಸಂಪರ್ಕಿಸಬಹುದು ಎಂದರು. ಸಮಿತಿ ಸದಸ್ಯರಾದ ಧರಣೇಂದ್ರ, ಮನ್ಮಥರಾಜ್, ಸಂತೋಷ್, ಪ್ರಕಾಶ್‌ಬಾಬು ಮತ್ತಿತರರು ಗೋಷ್ಠಿಯಲ್ಲಿದ್ದರು.

ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಮತ್ತೊಂದು ಸೌಹಾರ್ದ ನಡೆ

ನಾಳೆ ಹೆಬ್ಬಾಳಲ್ಲಿ ದೀಪಧ್ವನಿ

ಮೈಸೂರು, ನ.19– ಮೈಸೂರಿನ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ನ.21ರಂದು 'ದೀಪಧ್ವನಿ' ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ.



ವಿಜಯನಗರ ರೈಲ್ವೆ ಲೇಔಟ್ ಮೈದಾನದ ರಂಗಮಂಟಪದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಅಂದು ಸಂಜೆ 5.30ಕ್ಕೆ ರಘುಲೀಲಾ ಸಂಗೀತ ಮಂದಿರದ ವಿದ್ಯಾರ್ಥಿಗಳಿಂದ ನಗರ ಸಂಕೀರ್ತನೆ ಹಾಗೂ ಸಂಜೆ 6.30ಕ್ಕೆ ಖ್ಯಾತ ಗಾಯಕಿ ಎಂ.ಡಿ.ಪಲ್ಲವಿ ಅವರಿಂದ ಗಾಯನ ಸುಧೆ ಜರುಗಲಿದೆ.


ಕೆ.ವಿ.ಶ್ರೀಧರ್

ಇದೇ ವೇಳೆ ಕನ್ನಡ ರಾಜ್ಯೋತ್ಸವ ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಮಾಜಿ ಎಂಎಲ್‌ಸಿ ಡಿ.ಮಾದೇಗೌಡರು, ಸಂಸ್ಕೃತಿ ಚಿಂತಕ ಪ್ರೊ.ಕೃಷ್ಣೇಗೌಡರು, ಉದ್ಯಮಿ ಶ್ರೀಹರಿ, ಪತ್ರಕರ್ತ ಸಿ.ಕೆ.ಮಹೇಂದ್ರ, ಸಂಗೀತ ಸಂಯೋಜಕಿ ಸುನೀತಾ ಚಂದ್ರಕುಮಾರ್, ಟ್ರಸ್ಟ್ ಅಧ್ಯಕ್ಷರೂ ಆದ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಇತರರು ಉಪಸ್ಥಿತರಿರಲಿದ್ದಾರೆ.

ಸಂಕೀರ್ತನದಲ್ಲಿ ಭಾಗಿಯಾಗಿ: ಕಾರ್ತಿಕ ಮಾಸದ ಕಡೆಯ ಸೋಮವಾರ ಸಂಜೆ 5ಕ್ಕೆ ನಿಮ್ಮ ಬಡಾವಣೆ ಬೀದಿಗಳಲ್ಲಿ ಸುನಿತಾ ಚಂದ್ರಕುಮಾರ್ ನೇತೃತ್ವದಲ್ಲಿ ರಘುಲೀಲಾ ಶಾಲೆಯ ನೂರಾರು ವಿದ್ಯಾರ್ಥಿಗಳು ಹಾಡುತ್ತಾ ಸಾಗಲಿದ್ದಾರೆ. ಆ ವೇಳೆ ನಿಮ್ಮ ಮನೆ ಮುಂದೆ ರಂಗೋಲಿ ಹಾಕಿ, ದೀಪ ಹಚ್ಚಿಟ್ಟು ನಗುಮೊಗದಿಂದ ಸ್ವಾಗತಿಸಿ. ಬಳಿಕ ಮನೆಗೊಬ್ಬರಂತೆ ದೀಪ ಹಿಡಿದು ಸಂಕೀರ್ತನಾ ಸಾಲು ಸೇರಿಕೊಂಡು ರಂಗಮಂಟಪದವರೆಗೆ ಹೆಜ್ಜೆ ಹಾಕಿ. ನಂತರ ಜರುಗುವ ಎಂ.ಡಿ.ಪಲ್ಲವಿ ಅವರ ತಂಡದ ಗಾಯನ ಸುಧೆ, ಗಣ್ಯರ ಮಾತು, ಪೂಜೆ, ಪ್ರಸಾದ ವಿನಿಯೋಗ ಹೀಗೆ ಎಲ್ಲಾ ಸಂದರ್ಭದಲ್ಲೂ ಜೊತೆಯಲ್ಲಿರಿ ಎಂದು ಕೆ.ವಿ.ಶ್ರೀಧರ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ. ದಸರಾ ಮಹೋತ್ಸವದ ಸಂದರ್ಭದಲ್ಲಿ ಹೆಬ್ಬಾಳು ಉತ್ಸವದೊಂದಿಗೆ ಸಾಂಸ್ಕೃತಿಕ ಉತ್ಸವ, ವಿವಿಧ ಸ್ಪರ್ಧೆ ನಡೆಸಿ, ಬಹುಮಾನ ವಿತರಿಸಿ, ಸಂಭ್ರಮ ಹಂಚಿದ್ದ ಮಾನವ ಬಂಧು ಕೆ.ವಿ.ಶ್ರೀಧರ್, ಈಗ ಮತ್ತೊಂದು ವಿನೂತನ ಕಾರ್ಯಕ್ರಮದ ಮೂಲಕ ಸಹೃದಯಗಳ ಒಟ್ಟಾಗಿಸಲು ಮುಂದಾಗಿದ್ದಾರೆ.

ನ.22, ನೀರು ವ್ಯತ್ಯಯ

ಮೈಸೂರು, ನ.19–ತುರ್ತು ನಿರ್ವಹಣಾ ಕಾರ್ಯ ನಿಮಿತ್ತ ನ.22ರಂದು ಮೈಸೂರು ನಗರ ವಾರ್ಡ್ ನಂ.9ರಿಂದ 16, 28ರಿಂದ 39, 52, 53 ಇದಕ್ಕೆ ಸಂಬಂಧಪಟ್ಟ ಪ್ರದೇಶಗಳಾದ ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್. ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ, ಶಾಂತಿನಗರ, ಕಲ್ಯಾಣಗಿರಿ, ಡಾ.ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ದಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿದ ಕೆಲ ಪ್ರದೇಶಗಳಲ್ಲಿ ನೀರು ಸರಬರಾಜು ಇರುವುದಿಲ್ಲ ಎಂದು ವಾಣಿವಿಲಾಸ ವಾಟರ್ ವರ್ಕ್ಸ್ ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರಿನ ಹಿರಿಯ ಅಥ್ಲೆಟ್ ಎಂವಿವಿ ಸ್ವಾಮಿಯವರಿಗೆ 6 ಚಿನ್ನ ಸೇರಿ 9 ಪದಕ

ಮೈಸೂರು, ನ.19– ಮೈಸೂರಿನ ಹಿರಿಯ ಅಥ್ಲೆಟ್ 83 ವರ್ಷದ ಎಂ.ವಿ.ವಿ. ಸ್ವಾಮಿಯವರು ನವೆಂಬರ್ 12 ಮತ್ತು 13ರಂದು ಮೈಸೂರು ವಿವಿ ಓವಲ್ ಮೈದಾನದಲ್ಲಿ ನಡೆದ 42ನೇ ರಾಜ್ಯಮಟ್ಟದ ಅಥ್ಲೆಟಿಕ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಮೈಸೂರು ಜಿಲ್ಲೆಯನ್ನು ಪ್ರತಿನಿಧಿಸಿ 3 ಕಂಚಿನ ಪದಕಗಳ ಪಡೆದು ಸಾಧನೆ ಮೆರೆದಿದ್ದಾರೆ.



ಮೈಸೂರಿನ ರಾಮಕೃಷ್ಣನಗರದ ನಿವಾಸಿಯಾಗಿರುವ ಸ್ವಾಮಿಯವರು ಕಳೆದ ಹಲವು ವರ್ಷದಿಂದಲೂ ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದು, ಈ ಬಾರಿ 80ರಿಂದ 85 ವರ್ಷದ ಹಿರಿಯರ ವಿಭಾಗದಲ್ಲಿ ಮೈಸೂರು ಜಿಲ್ಲೆಯನ್ನು ಪ್ರತಿನಿಧಿಸಿ 100 ಮೀಟರ್, 200 ಮೀಟರ್ ಓಟದ ಸ್ಪರ್ಧೆಗಳಲ್ಲಿ ಹಾಗೂ 5 ಕಿ.ಮೀ. ವೇಗದ ನಡಿಗೆ ವಿಭಾಗಗಳಲ್ಲಿ ಮೂರನೇ ಸ್ಥಾನವನ್ನು ಪಡೆದು 3 ಕಂಚಿನ ಪದಕಗಳನ್ನು ಗೆದ್ದು, ಕೊಲ್ಕತ್ತದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಹಿರಿಯರ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಅರ್ಹತೆ ಗಳಿಸಿದ್ದಾರೆ.

ಕಳೆದ ಅಕ್ಟೋಬರ್ 29 ಮತ್ತು 30ರಂದು ಬೆಂಗಳೂರಿನ ವಿಜಯನಗರ ಅಕ್ವೆಟಿಕ್ ಸೆಂಟರ್ ಈಜುಕೊಳದಲ್ಲಿ ನಡೆದ ರಾಜ್ಯಮಟ್ಟದ 23ನೇ ಮಾಸ್ಟರ್ಸ್ ಈಜು ಚಾಂಪಿಯನ್‌ಶಿಪ್‌ಲ್ಲಿ ಭಾಗವಹಿಸಿ 6 ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ನೇಮಕಾತಿ, ಮುಂಬಡ್ತಿಗೆ ಬ್ರೇಕ್

ಬೆಂಗಳೂರು: ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಿ ಅಧಿಸೂಚನೆ ಹೊರಡಿಸಿದ ಹಿನ್ನೆಲೆಯಲ್ಲಿ ಪರಿಷ್ಕೃತ ಮೀಸಲಾತಿ ಅನುಷ್ಠಾನಗೊಳ್ಳುವವರೆಗೆ ನೇರ ನೇಮಕಾತಿ ತಡೆಹಿಡಿಯಬೇಕು.



ಮೀಸಲಾತಿ ಅನ್ವಯ ಮುಂಬಡ್ತಿ ನೀಡುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಇಲಾಖೆ ಮುಂಬಡ್ತಿ ಸಮಿತಿ ಸಭೆ ನಡೆಸಬಾರದು ಎಂದು ಮುಖ್ಯ ಕಾರ್ಯದರ್ಶಿಗಳು ಸುತ್ತೋಲೆ ಹೊರಡಿಸಿದ್ದಾರೆ.

ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು, ಎಲ್ಲಾ ಇಲಾಖೆಗಳ ಮುಖ್ಯಸ್ಥರಿಗೆ ಸೂಚನೆ ನೀಡಿ, ಪರಿಶಿಷ್ಟರಿಗೆ ಶೈಕ್ಷಣಿಕ ಸಂಸ್ಥೆಗಳು, ಸರ್ಕಾರಿ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲು ಹೆಚ್ಚಿಸುವ ಸುಗ್ರೀವಾಜ್ಞೆ ನವೆಂಬರ್ 1ರಿಂದ ಜಾರಿಗೆ ಬಂದಿದೆ. ನೇರ ನೇಮಕಾತಿ ಪದೋನ್ನತಿಯಲ್ಲಿ ಪರಿಶಿಷ್ಟರಿಗೆ ಮೀಸಲಾತಿಗೆ ರೋಸ್ಟರ್ ಅಂತಿಮಗೊಳಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಈ ಪ್ರಕ್ರಿಯೆ ಅಂತಿಮವಾಗಿ ಅಧಿಕೃತವಾಗಿ ಪ್ರಕಟವಾಗುವವರೆಗೆ ನೇರ ನೇಮಕಾತಿ ಪ್ರಕ್ರಿಯೆ ಮತ್ತು ಮುಂಬಡ್ತಿ ತಡೆ ಹಿಡಿಯಬೇಕು ಎಂದು ನಿರ್ದೇಶನ ನೀಡಿದ್ದಾರೆ.


ವಂದಿತಾ ಶರ್ಮಾ

ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣ ಶೇಕಡ 15ರಿಂದ ಶೇಕಡ 17ರಷ್ಟು, ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣ ಶೇಕಡ 3ರಿಂದ ಶೇಕಡ 7ರಷ್ಟು ಏರಿಕೆಯಾಗಿದೆ. ಒಟ್ಟಾರೆ ಪರಿಶಿಷ್ಟ ಮೀಸಲಾತಿ ಪ್ರಮಾಣ ಶೇಕಡ 18 ರಿಂದ 24ಕ್ಕೆ ಹೆಚ್ಚಳ ಮಾಡಿ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ. ಎಲ್ಲ ಹುದ್ದೆಗಳ ಮೀಸಲಾತಿ ಪ್ರಮಾಣವನ್ನು ಮರುನಿಗದಿಪಡಿಸುವ ಪ್ರಕ್ರಿಯೆ ಪೂರ್ಣಗೊಂಡ ಬಳಿಕವಷ್ಟೇ ನೇರ ನೇಮಕಾತಿ ಹಾಗೂ ಮುಂಬಡ್ತಿ ಪ್ರಕ್ರಿಯೆಗಳು ಪುನಾರಂಭಗೊಳ್ಳಲಿವೆ. ಮುಂಬಡ್ತಿಗಾಗಿ ಕಾಯುತ್ತಿದ್ದ ಹಿಂದುಳಿದ ಮತ್ತು ಸಾಮಾನ್ಯ ವರ್ಗದ ಅಧಿಕಾರಿ ಮತ್ತು ನೌಕರರಿಗೆ ಇನ್ನಷ್ಟು ದಿನ ಬಡ್ತಿ ಸಿಗುವುದಿಲ್ಲ. ಹೊಸ ಮೀಸಲಾತಿ ಅನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಬಡ್ತಿ ಸಿಕ್ಕ ನಂತರ ಹಿಂದುಳಿದ ಮತ್ತು ಸಾಮಾನ್ಯದ ವರ್ಗದ ನೌಕರರಿಗೆ ಬಡ್ತಿ ಸಿಗಲಿದೆ.

ಇಂದು 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ

ಮೈಸೂರು, ನ.19– ಮೈಸೂರಿನ ಹುಣಸೂರು ಮುಖ್ಯ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ನಾಳೆ(ನ.20) ಬೆಳಗ್ಗೆ 11 ಗಂಟೆಗೆ '69ನೇ ಅಖಿಲ ಭಾರತ ಸಹಕಾರ ಸಪ್ತಾಹ–2022' ನಡೆಯಲಿದೆ. ವಸತಿ ಮತ್ತು ಮೂಲ ಸೌಕರ್ಯ ಸಚಿವ ವಿ.ಸೋಮಣ್ಣ ಧ್ವಜಾರೋಹಣ ನೆರವೇರಿಸಲಿದ್ದು, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ ವಸ್ತು ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ.

ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಹಾಗೂ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷರಾದ ಜಿ.ಡಿ. ಹರೀಶ್‌ಗೌಡ, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಮೇಯರ್ ಶಿವಕುಮಾರ್ ಸೇರಿದಂತೆ ಸ್ಥಳೀಯ ಶಾಸಕರು, ಸಂಸದರು, ನಿಗಮ ಮಂಡಳಿ ಅಧ್ಯಕ್ಷರು, ಸಹಕಾರಿ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಇಂದಿರಾಗಾಂಧಿ ಹುಟ್ಟುಹಬ್ಬ ಆಚರಣೆ

ಮೈಸೂರು, ನ.19 (ಆರ್‌ಕೆಬಿ)–ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಪ್ರಧಾನಿ ದಿವಂಗತ ಇಂದಿರಾ ಗಾಂಧಿ ಅವರ ಹುಟ್ಟುಹಬ್ಬವನ್ನು ಕಾಂಗ್ರೆಸ್ ವತಿಯಿಂದ ಆಚರಿಸಲಾಯಿತು.



ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ವಿಜಯಕುಮಾರ್, ನಗರಾಧ್ಯಕ್ಷ ಮೂರ್ತಿ ಇತರರು ಇಂದಿರಾ ಗಾಂಧಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ನಂತರ ಮಾತನಾಡಿದ ಮಾಜಿ ಶಾಸಕ ವಾಸು, ಇಂದಿರಾ ಗಾಂಧಿ ಅವರು ನಿಷ್ಠೂರವಾದಿಯಾಗಿ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದರು. ದಲಿತರು, ಬಡ ವರ್ಗದ ಜನರು, ರೈತರು, ಕಾರ್ಮಿಕರು, ಸಾರ್ವ ಜನಿಕರಿಗಾಗಿ ವಿಶೇಷ ಜನಪರ ಯೋಜನೆಗಳ ಮೂಲಕ ವಿಶ್ವದ ಜನಪ್ರಿಯ ನಾಯಕಿಯಾಗಿ ಹೊರಹೊಮ್ಮಿ ದವರು. ದೇಶಕ್ಕಾಗಿ ಮತ್ತು ಪಕ್ಷಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡರು ಎಂದು ಸ್ಮರಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ತಮ್ಮ ಆಡಳಿತದ ಅವಧಿಯಲ್ಲಿ ಬಡವರ ಅನುಕೂಲಕ್ಕಾಗಿ ಸ್ಥಾಪಿಸಿದ ಸಾರ್ವಜನಿಕ ಉದ್ದಿಮೆಗಳನ್ನು ಇಂದು ಅಧಿಕಾರದಲ್ಲಿರುವವರು ಖಾಸಗಿಯವರಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ತಮ್ಮ ಆಡಳಿತದ ಕಷ್ಟಕರ ಪರಿಸ್ಥಿತಿಯಲ್ಲೂ ದೇಶ ಉಳಿಸುವ ಕೆಲಸ ಮಾಡಿದ ಇಂದಿರಾಗಾಂಧಿ ಅವರು ಸ್ವಲ್ಪ ಸಡಿಲ ಬಿಟ್ಟಿದ್ದರೆ ಪಂಜಾಬ್ ದೇಶದಿಂದ ಕೈಬಿಟ್ಟು ಹೋಗುತ್ತಿತ್ತು. ಆದರೆ ಇಂದು ಬಿಜೆಪಿ ನಾಯಕರು ಅನಗತ್ಯವಾಗಿ ನೆಹರು, ಇಂದಿರಾ ಗಾಂಧಿ ಅವರನ್ನು ಟೀಕಿಸುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಆದರೆ ಅವರ ಕೊಡುಗೆಗಳು ಅವರಿಗೆ ಕಾಣುತ್ತಿಲ್ಲ. ಇಂದಿರಾಗಾಂಧಿ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಧೀರ ಮಹಿಳೆ ಎಂದರು.

ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಮಾತನಾಡಿ, ಇಂದಿರಾ ನೆನಪು ಮಾಡುವ ದಿನವಿದು. ಜೀವನದುದ್ದಕ್ಕೂ ಮತ್ತು ತಮ್ಮ ಆಡಳಿತದ ಉದ್ದಕ್ಕೂ ದೇಶದ ಭವಿಷ್ಯದ ಬಗ್ಗೆಯೇ ಚಿಂತನೆ ನಡೆಸಿದವರು. ಬಡತನ ನಿರ್ಮೂಲನೆಗೆ ಶ್ರಮಿಸಿ, ಅನೇಕ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಜನಮನ್ನಣೆ ಗಳಿಸಿದವರು ಎಂದು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ನಗರ ಕಾಂಗ್ರೆಸ್ ಕಾರ್ಯದರ್ಶಿ ಶಿವಣ್ಣ ಇನ್ನಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಹಿತೈಷಿ : ನೀವು ಬರೆದ ಗ್ರಂಥವನ್ನು ನಿಮ್ಮ ಹೆಂಡತಿಗೆ ಸಮರ್ಪಣೆ ಮಾಡಿದ್ದೀರಿ, ವಿಶೇಷ ಏನು?"

ಅವರು : ಯಾಕೆಂದರೆ ಅವಳು ವರ್ಷಕ್ಕೆ ಒಂಭತ್ತೂ ತಿಂಗಳು ತವರು ಮನೆಗೆ ಹೋಗದಿದ್ದರೆ ಈ ಪುಸ್ತಕ ಬರೆಯಲು ಸಾಧ್ಯವಾಗುತ್ತಿರಲಿಲ್ಲ.

ಮೈಸೂರು ಮಿತ್ರ

ಭಾನುವಾರ, 20 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಉಪಾಯದಿಂದ ಕೆಲಸಗಳನ್ನು ಮಾಡಿದರೆ ಕಠಿಣವಾದ ಕೆಲಸಗಳೂ ಸುಲಭವಾಗುತ್ತವೆ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು
{ಎಂದೂ ಇಲ್ಲದೋನು ಎಲೆ ತ್ವಾಟ ಮಾಡಿ
ಒಂದೂ ಇಲ್ಲದಂಗೆ ಚಿಗುಟಿಕೊಂಡ

ನಿಮ್ಮ ಪತ್ರಗಳು

ಶಾಲಾ–ಕಾಲೇಜಿಗೆ ಮೂಲ ಸೌಕರ್ಯ ಒದಗಿಸಲಿ

ಮಾನ್ಯರೆ,

ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಈ ಮೂಲಕ ವಿವೇಕ ಯೋಜನೆ ಅಡಿ "ಕೇಸರಿ ಬಣ್ಣ" ವನ್ನು ಶಾಲೆಯ ಗೋಡೆಗಳಿಗೆ ಬಳಿಸುವ ಯೋಚನೆ ಮಾಡುತ್ತಿದೆ. ಇದರ ಬದಲು ರಾಜ್ಯದ ಸರ್ಕಾರಿ ಶಾಲೆಗಳಲ್ಲಿರುವ ಅನೇಕ ಸಮಸ್ಯೆಗಳನ್ನು ಬಗೆಹರಿಸಲಿ. ಅನೇಕ ಶಾಲೆಗಳಲ್ಲಿ ಮೇಲ್ಛಾವಣಿ ಕುಸಿದು ಮಳೆ ಬಂದರೆ ತರಗತಿಗಳ ಒಳಗೆ ಬರುವ ಸ್ಥಿತಿ ಇದೆ. ಕೊಠಡಿಯ ಸಮಸ್ಯೆಗಳಿವೆ. ಶಾಲೆಯಲ್ಲಿ ನಿರ್ಮಾಣ ಮಾಡಿರುವ ಶೌಚಾಲಯಗಳಲ್ಲಿ ನೀರಿಲ್ಲದೆ ಉಪಯೋಗಕ್ಕೆ ಬಾರದಂತಿವೆ. ಕೆಲವು ಶಾಲೆಗಳಲ್ಲಿ ಶೌಚಾಲಯಗಳು ಬಳಕೆಯಲ್ಲಿದ್ದರೂ ಮಕ್ಕಳಿಗೆ ಬಳಸಲು ಬಿಡದೆ ಶಿಕ್ಷಕರು ಬಳಸುತ್ತಿದ್ದಾರೆ. ಇನ್ನೂ ಅನೇಕ ವಿಷಯಗಳಲ್ಲಿ ಶಿಕ್ಷಕರ ಕೊರತೆ ಇದೆ. ಇದರಿಂದ ವಿದ್ಯಾರ್ಥಿಗಳಿಗೆ ಪಾಠ–ಪ್ರವಚನಗಳು ಸರಿಯಾಗಿ ನಡೆಯುತ್ತಿಲ್ಲ. ಪರೀಕ್ಷೆಯು ಹತ್ತಿರ ಬರುತ್ತಿದ್ದು, ಪೋಷಕರು ತಮ್ಮ ತಮ್ಮ ಮಕ್ಕಳ ಭವಿಷ್ಯದ ಚಿಂತನೆಯಲ್ಲಿದ್ದಾರೆ. ಸರ್ಕಾರ ಮತ್ತು ಶಿಕ್ಷಣ ಸಚಿವರು ಮೊದಲು ಶಾಲೆಗಳಿಗೆ ಬೇಕಾದ ಮೂಲಭೂತ ಸೌಕರ್ಯ ಒದಗಿಸಿ ಆನಂತರ ಮುಂದಿನ ಯೋಜನೆಯ ಬಗ್ಗೆ ಯೋಚಿಸುವುದು ಸೂಕ್ತವೆನಿಸುತ್ತದೆ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಬಸ್ ಸೌಕರ್ಯವಿಲ್ಲದೆ ವಿದ್ಯಾರ್ಥಿಗಳಿಗೆ ಸಮಸ್ಯೆ

ಮಾನ್ಯರೆ

ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಬೆಳ್ಳೂರು ಹೋಬಳಿ ಭೈರಸಂದ್ರ ಗ್ರಾಮಕ್ಕೆ ಬಸ್ ಸೌಕರ್ಯವಿಲ್ಲದೆ ಗ್ರಾಮಸ್ಥರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತಿದೆ. ಅಲ್ಲಿನ ಮಕ್ಕಳು ಶಾಲಾ–ಕಾಲೇಜುಗಳಿಗೆ ಹೋಗಬೇಕಾದರೆ 3 ಕಿ.ಮೀ ನಡೆದುಕೊಂಡು ಹೋಗಬೇಕು. ಅಲ್ಲಿನ ಜನರು ಆಸ್ಪತ್ರೆ, ಸಂತೆ, ಬ್ಯಾಂಕ್ ಎಲ್ಲಿಗೆ ಹೋಗಬೇಕೆಂದರೂ ಸ್ವಂತ ವಾಹನಗಳಲ್ಲಿ ಅಥವಾ ಖಾಸಗಿ ವಾಹನಗಳಲ್ಲಿ ಹೋಗಬೇಕು. ಇಲ್ಲಿ ಪ್ರಸಿದ್ಧ ಹದ್ದಿನಕಲ್ಲು ಹನುಮಂತರಾಯಸ್ವಾಮಿಯ ಬೆಟ್ಟವಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಭಕ್ತರು ಬರುತ್ತಾರೆ. ಸಾರಿಗೆ ಸೌಲಭ್ಯ ಇಲ್ಲದಿರುವ ಕಾರಣ ಅವರಿಗೂ ತೊದರೆಯಾಗುತ್ತಿದೆ. ಸಂಬಂಧಿಸಿದ ಅಧಿಕಾರಿಗಳು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

–ಅನುಷ.ಬಿ.ಆರ್, ಪತ್ರಿಕೋದ್ಯಮ ವಿದ್ಯಾರ್ಥಿನಿ,
ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು.

ಏಕೆ, ಈ ತರದ ವರ್ತನೆ

ಮಾನ್ಯರೆ,

ಹರಿಟೇಜ್ ಕಟ್ಟಡಗಳ ದುರ್ಬಲ ಸ್ಥಿತಿಯ ಬಗ್ಗೆ ವಿದ್ವಾಂಸರು 'ಅವಿದ್ಯಾ'ವಂತರು, ಹೆರಿಟೇಜ್ ತಜ್ಞರೆಂದು ಕರೆಯಲ್ಪಡುವವರು ಸತ್ಯ–ಅಸತ್ಯಗಳ ನಡುವೆ ಇರುವ 'ಸತ್' ಧಾತುವನ್ನು ಅರ್ಥ ಮಾಡಿಕೊಳ್ಳಲಾರರೆ? ಲಲಿತ ಮಹಲ್ ಪ್ಯಾಲೇಸಿಗೂ, ಮಾರ್ಕೆಟ್, ಲ್ಯಾನ್ಸ್‌ಡೌನ್‌ಗೂ ಇರುವ ವ್ಯತ್ಯಾಸವನ್ನು ತಿಳಿಯದವರು, ಸಿಂಹ–ಗ್ರಾಮ ಸಿಂಹ ಪ್ರಾಣಿಗಳ ನಡುವೆ ಇರುವ ಶಬ್ದಸ್ಥಕ ಶಬ್ದಾತೀತ ಜ್ಞಾನವನ್ನು ತಿಳಿದಿಲ್ಲ.

ಲ್ಯಾನ್ಸ್‌ಡೌನ್ ಕಟ್ಟಡವನ್ನು ಕೆಡವಿ ಯಥಾವತ್ ರೂಪವನ್ನು ಕೊಡಬಹುದು. ಮಾರ್ಕೆಟ್ ಕಟ್ಟಡವನ್ನು ಕೆಡವಿ ಯಥಾವತ್ ಬಾಹ್ಯರೂಪವನ್ನು ಕೊಟ್ಟು (ವಿಸ್ತರಿಸುವ ಅವಶ್ಯಕತೆಯೂ ಇದೆ). ಇನ್‌ಫ್ರಾಸ್ಟ್ರಕ್ಚರನ್ನು ಇಂದಿನ ಅಗತ್ಯಕ್ಕೆ ತಕ್ಕಂತೆ ಸಮಗ್ರವಾಗಿ ಪುನಾರಚಿಸಿ ಒಂದು ಎಂಟ್ರೆನ್ಸ್ ಮೂಲಕ ಒಳಹೊಕ್ಕ ಗ್ರಾಹಕ ಕ್ರಿಸ್–ಕ್ರಾಸ್ ಆಡುವ ನರಿನಾಯಿಯಂತಾಗದೆ ವಿಧ ವಿಧದ ಗ್ರೋಸರಿ, ತರಕಾರಿ, ತರತರದ ವಸ್ತು ಪದಾರ್ಥಗಳನ್ನು ಶೇಖರಿಸಿಕೊಳ್ಳುವ ನಡುವೆ ಅನಿವಾರ್ಯತೆಗಳಿಗೂ ಅಹಿಂಸೆಯಿಂದ ನಡೆ ಮಾಡಿ, ಪರಿಶುದ್ಧ ಪರಿಸರದಲ್ಲಿ ಮುಂದು ಮುಂದಕ್ಕೆ ಸಾಗಿ ಹೊರಗೆ ಬರುವ ಗಿರಾಕಿಗಳು ಸಮಾಧಾನದಿಂದ ಇರಬೇಕು. ಒಳ ಬರುವ ವಸ್ತುಗಳಿಗೆ (ದೊಡ್ಡ ಪ್ರಮಾಣದಲ್ಲಿ) ಸೂಕ್ತ ಏರ್ಪಾಡಿರಬೇಕು. ಆರ್ಕಿಟೆಕ್ಟ್‌ಗೆ ಇದು ತಿಳಿದಿರುತ್ತದೆ. ಈಗ ಮಾರ್ಕೆಟ್ ಇರುವ ಇನ್‌ಫ್ರಾಸ್ಟ್ರಕ್ಚರನ್ನು, ಅತ್ಯಂತ ಕೆಟ್ಟ, ದನ ಜಾತ್ರೆಯ ಸಂತೆಯಂತಿದೆ. ಕುಸಿದು ಜನ ಸಾಯುವ ಮೊದಲು ಹೊಸತು ಬರಲಿ. ಅದುವರೆಗೆ ನಂಜರಾಜ ಛತ್ರ ಬಳಸಲಿ.

–ಕಳಕಳಿಯುಳ್ಳ ಮೈಸೂರಿಗ.

ಈ ಬಸ್ ಮಾರ್ಗಗಳು ಮರು ಸಂಚಾರ ಮಾಡಲಿ

ಮಾನ್ಯರೆ,

ಹಲವಾರು ವರ್ಷಗಳಿಂದ ಮೈಸೂರು ನಗರ ಸಾರಿಗೆ ಬಸ್ ನಂ. 72 ಮೇಟಗಳ್ಳಿ, ಬಿಇಎಂಎಲ್ ಲೇಔಟ್. ಬಸ್ ನಂ. 135 ಸಿಬಿಎಸ್– ಸಿಬಿಎಸ್ ವಯಾ ಲಕ್ಷ್ಮೀ ಟಾಕೀಸ್, ಕುವೆಂಪುನಗರ, ರಾಮಕೃಷ್ಣನಗರ, ಶಾರದಾದೇವಿನಗರ, ಎಸ್‌ಜೆಸಿಇ ಕಾಲೇಜು, ವಿವಿ ಪುರಂ ಮಾರ್ಗವಾಗಿ ಸಿಬಿಎಸ್‌ಗೆ ಹಿಂದಿರುಗುತ್ತಿತ್ತು. ಈ ಬಸ್‌ಗಳಿಂದ ಶಾಲಾ ವಿದ್ಯಾರ್ಥಿಗಳಿಗೆ, ಕಾರ್ಮಿಕರಿಗೆ, ಜಯದೇವ ಆಸ್ಪತ್ರೆಗೆ, ಇಎಸ್‌ಐ ಆಸ್ಪತೆಗೆ ತೆರಳುವ ರೋಗಿಗಳಿಗೆ, ಹಿರಿಯ ನಾಗರಿಕರಿಗೆ ಸಮಯ ಮತ್ತು ಹಣದ ಉಳಿತಾಯವಾಗುತ್ತಿತ್ತು. ಸನ್ಮಾನ್ಯ ಶಾಸಕ ಎಲ್. ನಾಗೇಂದ್ರ ಅವರು ಈ ಬಸ್‌ಗಳನ್ನು ಮರು ಸಂಚಾರ ಮಾಡಲು ಸಾರಿಗೆ ಅಧಿಕಾರಿಗಳಿಗೆ ಸೂಚನೆ ನೀಡುವಂತೆ ಮನವಿ.

–ನೊಂದ ಪ್ರಯಾಣಿಕರು, ಕುವೆಂಪುನಗರ, ಮೈಸೂರು.

ಬುದ್ಧನಿಗೆ

ವೈಶಾಖ ಶುಕ್ಲ ಪೂರ್ಣಿಮೆಯಿರುಳು ಬಿಳಿಮುಗಿಲು
ಇಳೆಗಿಳಿದು ಬಂದುದೆನೆಹಾಲ ತೊರೆಯಲಿ ಮಿಂದು,
ನೀ ಬಂದೆ! ಜಗವೆಲ್ಲ ಮೌಢ್ಯರೂತಿಮಿರದೊಳಿರಲು,
ದಿವ್ಯ ಜ್ಞಾನಾಂಜನ ಶಲಾಕಾ ಪುರುಷನಾಗಿ,
ರೆಯಿಸಿದೆ ಕಣ್ಣ, ಹೇ ಬುದ್ಧ: ಕರುಣಾಸಿಂಧು!
ಸತಿ ಯಶೋಧರೆಗಾದ ನಷ್ಟ ಲೋಕದ ಲಾಭ.
ನವಧರ್ಮ ಚಕ್ರ ಪ್ರವರ್ತಕನೆ, ಅಮಿತಾಭ,
ಅಮೃತವಾಯಿತು ತಿರೆಯ ಬಾಳು; ಜಲ ತಿಳಿಯಾಗಿ,
ಗಾಳಿ ನಿರ್ಮಲವಾಗಿ, ದಿಕ್ಕುದೆಸೆ ಹೊಳ ಹಾಗಿ,
ಸರ್ವೋದಯದ ಪರ್ವವಂದು ಕಾಲೂರಿತ್ತು
ಹಳೆಯ ಕಥೆಯಿದು. ಎಲ್ಲಿ ಹೋದುದಾ ನಿನ್ನ ಪಥ?
ಅಂಯ್ಯೊ! ಮತ್ತಿಂದು ಲೋಕದಲಿ ಓಕುಳಿಯಿಹುದು
ನೆತ್ತರಿನ ಕತ್ತಲೆಯ ಮೊತ್ತ ದಶದಿಶೆಗಳಲಿ
ಮುತ್ತಿಹುದು ! ಮತ್ತೊಮ್ಮೆ ಬಾ ನೀನು, ಸಿದ್ಧಾರ್ಥ,
ಅರ್ಥಕಾಮವ ನುಳಿದು ಭೂಮಿ ಧರ್ಮಪ್ರೇಮಿ–
ಯಾಗುವೊಲು; ಸರ್ವಕಂಠಾಭರಣವಾಗಲಿದು.
ಬುದ್ಧಂ ಶರಣಂ ಗಚ್ಛಾಮಿ!

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ರಷ್ಯಾ–ಉಕ್ರೇನ್ ಯುದ್ಧ: ವಿಶ್ವಕ್ಕೆ ಭಾರತದ ಪ್ರತಿಷ್ಠೆ ಮನವರಿಕೆ!

ಅಮೆರಿಕ ತನ್ನದು ಪ್ರಬುದ್ಧ ಪ್ರಜಾಪ್ರಭುತ್ವವೆನ್ನುತ್ತದೆ. ಜಗತ್ತಿನ ಯಾವುದೇ ದೇಶದಲ್ಲಿರುವ ಸರ್ವಾಧಿಕಾರಿ, ನಿರಂಕುಶ ಪ್ರಭುತ್ವದ ವಿರುದ್ಧ ಹೋರಾಡುವವರಿಗೆ ಎಲ್ಲ ರೀತಿಯ ಬೆಂಬಲ ನೀಡುತ್ತೇನೆ ಎನ್ನುತ್ತದೆ. ಆದರೆ ತನ್ನ ಸ್ವಾರ್ಥ ಸಾಧನೆಗಾಗಿ ಇಂತಹ ಘೋಷಣೆ ಮಾಡುತ್ತಿದೆಯೇ ವಿನಃ ಸದುದ್ದೇಶದಿಂದಲ್ಲ ಎಂಬುದನ್ನು ಅಮೇರಿಕವು ಕೆಲವು ದೇಶಗಳಲ್ಲಿ ನಡೆದ ಬೆಳವಣಿಗೆಯಿಂದ ತಿಳಿಯಬಹುದು. ಅಮೆರಿಕದ ಮಾತಿಗೂ, ಕೃತಿಗೂ ಭಾರೀ ಅಂತರವಿರುವುದನ್ನು ಗಮನಿಸಬಹುದು. ಇರಾನ್‌ನಲ್ಲಿ ಸುದೀರ್ಘ ಕಾಲದವರೆಗೆ ಸರ್ವಾಧಿಕಾರಿಯಂತೆ ಆಳಿದ ಷಾ ಮಹ್ಮದ್ ರೇಜಾ ಪಪ್ಲವಿಯವರನ್ನು ಬೆಂಬಲಿಸಿತು. ಆರಂಭದಲ್ಲಿ ಇರಾಕ್‌ನ ಸರ್ವಾಧಿಕಾರಿ ಸದ್ದಾಂ ಹುಸೇನ್‌ರನ್ನು ಬೆಂಬಲಿಸಿತು. ಅಫ್ಘಾನಿಸ್ತಾನದಿಂದ ರಷ್ಯಾವನ್ನು ಹೊರದಬ್ಬಲು ಮೂಲಭೂತವಾದಿ ತಾಲಿಬಾನ್‌ಗೆ ಬೆಂಬಲ ನೀಡಿತು. ಪಾಕಿಸ್ತಾನದಲ್ಲಿ ಸತತವಾಗಿ ಸರ್ವಾಧಿಕಾರಿಗಳು ಅಥವಾ ಸೇನೆಯ ಕೈಗೊಂಬೆ ಸರಕಾರಗಳಿದ್ದರೂ, ಭಯೋತ್ಪಾದನೆಯ ವಿರುದ್ಧ ಹೋರಾಡುವ ನೆಪದಲ್ಲಿ ಪಾಕ್‌ಗೆ ಎಲ್ಲ ರೀತಿಯ ನೆರವು ನೀಡಿತು. ವಾಸ್ತವದಲ್ಲಿ ಭಾರತವನ್ನು ದುರ್ಬಲಗೊಳಿಸುವುದು ಅಮೇರಿಕದ ಉದ್ದೇಶವಾಗಿತ್ತು. ಅಮೇರಿಕ ಹಾಗೂ ಯುರೋಪ್ ದೇಶಗಳ ಮೊಂಡುತನದಿಂದ ರಷ್ಯಾ–ಉಕ್ರೇನ್ ಯುದ್ಧ ಇದುವರೆಗೆ ನಿಂತಿಲ್ಲ.

ಈ ವರ್ಷ ಫೆಬ್ರವರಿ 24ರಂದು ರಷ್ಯಾವು ಉಕ್ರೇನ್ ಮೇಲೆ ಆಕ್ರಮಣ ಮಾಡಿತು. ಇದಾದ ಕೇವಲ ನಾಲ್ಕು ದಿನದಲ್ಲಿ ಬೆಲಾರೂಸ್‌ನ ಗೊಮೆಲ್ ಪಟ್ಟಣದಲ್ಲಿ ಎರಡೂ ದೇಶಗಳ ರಾಜತಾಂತ್ರಿಕರು ಕದನ ವಿರಾಮಕ್ಕಾಗಿ ಆರಂಭಿಸಿದ ಮಾತುಕತೆ ವಿಫಲವಾಯಿತು. ಕೊನೆಯದಾಗಿ ಟರ್ಕಿ ಅಧ್ಯಕ್ಷ ಎರ್ಡೋಗಂರ ಆಸಕ್ತಿಯಿಂದ ರಷ್ಯಾ–ಉಕ್ರೇನ್ ಹಿರಿಯ ಅಧಿಕಾರಿಗಳು ಟರ್ಕಿಯ ಇಸ್ತಾಂಬುಲ್‌ನಲ್ಲಿ ಮಾತುಕತೆ ನಡೆಸಿದರು. ಮಾರ್ಚ್ 29ರಂದು ಟರ್ಕಿ ವಿದೇಶಾಂಗ ಸಚಿವ ಮೆವ್‌ಲಟ್ ಕಾಪುರವರು "ಎರಡೂ ಪಕ್ಷಗಳ ನಡುವೆ ಪ್ರತಿ ಹಂತದಲ್ಲಿ ಬಿಗು ಕಡಿಮೆಯಾಗಿ ಸೌಹಾರ್ದತೆ ಮೂಡಿರುವುದರಿಂದ ನಾವು ಸಂತಸಗೊಂಡಿದ್ದೇವೆ". ಏಪ್ರಿಲ್‌ನಲ್ಲಿ ಮಧ್ಯಂತರ ಸಂಧಾನದ ಸಾಧ್ಯತೆ ಇದೆಯೆಂದು ಸುದ್ದಿಯಾಯಿತು.

ಇದಕ್ಕೆ ಪೂರಕವಾಗಿ ಏಪ್ರಿಲ್‌ನಲ್ಲಿ ರಷ್ಯನ್ ಪಡೆಗಳಿಂದ ಉಕ್ರೇನ್‌ನ ರಾಜಧಾನಿ ಕೀವ್‌ನ ಸುತ್ತ ನಡೆಯುತ್ತಿದ್ದ ಸೇನಾ ಕಾರ್ಯಾಚರಣೆ ಸ್ಥಗಿತಗೊಳಿಸಲಾಯಿತು. ಅಮೇರಿಕ ಮತ್ತು ಬ್ರಿಟನ್ ಉದ್ದೇಶಪೂರ್ವಕವಾಗಿ ಇದು ರಷ್ಯಾ ಸೇನೆಯ ವೈಫಲ್ಯವೆಂದು ಪ್ರಚಾರ ಮಾಡಿದವು. ಇದಕ್ಕೆ ಪ್ರತಿಯಾಗಿ ರಷ್ಯಾವು ಮಧ್ಯಂತರ ಒಪ್ಪಂದಕ್ಕನುಗುಣವಾಗಿದೆಯೆಂದು ತಿಳಿಸಿತು.

ಈ ಒಪ್ಪಂದ ಅನುಷ್ಠಾನಕ್ಕೆ ಮುಂಚಿತವಾಗಿ ಬ್ರಿಟನ್ ಪ್ರಧಾನಿ ಬೊರಿಸ್ ಜಾನ್ಸನ್‌ರು ಕೀವ್‌ಗೆ



ಆಗಮಿಸಿದರು. ಉಕ್ರೇನ್‌ನ ಪತ್ರಿಕೆ ಪ್ರಾವ್ದಾದ ವರದಿಯಂತೆ ಜಾನ್ಸನ್ ಎರಡು ಸಂದೇಶಗಳನ್ನು ಅಧ್ಯಕ್ಷ ಜೆಲೆನ್‌ಸ್ಕಿಗೆ ರವಾನಿಸಿದ್ದರು. ಮೊದಲ ಸಂದೇಶದಲ್ಲಿ ರಷ್ಯಾ ಅಧ್ಯಕ್ಷರು ಸಂಧಾನಕ್ಕೆ ಬರದಂತೆ ಒತ್ತಡ ಹೇರುವುದು. 2ನೇಯದಾಗಿ ಕೀವ್–ಕ್ರೆಮ್ಲಿನ್ ಮಧ್ಯೆ ಒಪ್ಪಂದವಾದರೂ ಯುರೋಪ್ ಒಪ್ಪುವುದಿಲ್ಲವೆಂದು ತಿಳಿಸಿತ್ತು. ಆ ನಂತರ ದ್ವಿಪಕ್ಷೀಯ ಮಾತುಕತೆ ಸ್ಥಗಿತಗೊಂಡಿತು. ಈ ಸಂದೇಶಗಳು ಅಮೆರಿಕ ಮತ್ತದರ ಮಿತ್ರ ರಾಷ್ಟ್ರಗಳ ಧೂರ್ತತನವನ್ನು ಸ್ಪಷ್ಟಪಡಿಸುತ್ತದೆ. ಕೆಲವು ವಾರಗಳ ನಂತರ ಅಮೆರಿಕದ ಕಾರ್ಯದರ್ಶಿ ಎಂಟನಿ ಬ್ಲಿಂಕೆನ್ ಮತ್ತು ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್‌ರು ಕೀವ್‌ಗೆ ಭೇಟಿ ನೀಡಿದರು. ಆಸ್ಟಿನ್ ಒಂದು ವಾರ್ತಾಗೋಷ್ಠಿಯಲ್ಲಿ 'ನಾವು ರಷ್ಯಾ ದುರ್ಬಲವಾಗುವುದನ್ನು ಎದುರು ನೋಡುತ್ತಿದ್ದೇವೆ' ಎಂದು ಸ್ಪಷ್ಟಪಡಿಸಿದ್ದು, ಗಮನಾರ್ಹ ಸಂಗತಿಯಲ್ಲವೆ?

ಬಿಡೆನ್ ಆಡಳಿತದ ಹಿರಿಯ ಅಧಿಕಾರಿಗಳು ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿ ಅಮೆರಿಕದ ನೀತಿಯನ್ನು ವಿವರಿಸುತ್ತಾ "ಈ ಯುದ್ಧವು ರಷ್ಯಾಕ್ಕೆ ಆರ್ಥಿಕವಾಗಿ ದುಬಾರಿಯಾಗಬೇಕು. ಅದೇ ರೀತಿ ರಷ್ಯಾವನ್ನು ನಿರಂತರವಾಗಿ ಸೋಲಿಸಲು ಸಾಧ್ಯವಾಗುವಂತೆ ಉಕ್ರೇನ್‌ಗೆ ಮಿಲಿಟರಿ ಸಹಾಯ ನೀಡುವುದು". ಇದರ ಉದ್ದೇಶ ರಷ್ಯಾವನ್ನು ಸೋಲಿಸಿ ಪುಟಿನ್‌ರನ್ನು ಪದಚ್ಯುತಗೊಳಿಸಿ, ಅಲ್ಲಿ ಕೈಗೊಂಬೆ ಸರಕಾರ ಸ್ಥಾಪಿಸುವ ಮೂಲಕ ಅಲ್ಲಿನ ಹೇರಳ ಕಚ್ಚಾತೈಲ ಹಾಗೂ ಪ್ರಾಕೃತಿಕ ಸಂಪತ್ತನ್ನು ಲೂಟಿ ಹೊಡೆಯುವುದು ಅಮೆರಿಕ ಹಾಗೂ ಅದರ ಮಿತ್ರ ದೇಶಗಳ ಗುಪ್ತ ಕಾರ್ಯಸೂಚಿಯನ್ನು ಸ್ಪಷ್ಟಪಡಿಸುತ್ತದೆ.

ಉಕ್ರೇನ್ ಮೇಲೆ ರಷ್ಯಾ ಆಕ್ರಮಣದ ಮೊದಲೇ 2014 ರಿಂದ ಅಮೇರಿಕದ ಸೇನೆ ಉಕ್ರೇನ್ ಸೈನಿಕರಿಗೆ ತರಬೇತಿ ಮತ್ತು ಶಸ್ತ್ರಾಸ್ತ್ರಗಳನ್ನು ನೀಡಲು 19 ಬಿಲಿಯನ್ ಡಾಲರ್ ಖರ್ಚು ಮಾಡಿತ್ತು. ಆಕ್ರಮಣದ ನಂತರ 17.6 ಬಿಲಿಯನ್ ಡಾಲರ್ ನೀಡಿದೆ. ಅಮೆರಿಕದ 2022ರ ಬಜೆಟ್ 3.12 ಬಿಲಿಯನ್ ಡಾಲರ್‌ಗಿಂತ ಅನೇಕ ಪಟ್ಟು ಹೆಚ್ಚು ಉಕ್ರೇನ್‌ಗೆ ಖರ್ಚು ಮಾಡಿದೆ.


ಉಕ್ರೇನ್‌ನಲ್ಲಿ 2019ರಲ್ಲಿ ನಡೆದ ಚುನಾವಣೆಯಲ್ಲಿ ಯುರೋಪಿಯನ್ ದೇಶಗಳ ಬೆಂಬಲವಿದ್ದ ಪೆಟ್ರೊ ಪೋರ್ಶೆಂಕೊ ಎದುರು ಶೇ.73 ಮತ ಪಡೆದು ಜೆಲೆನ್‌ಸ್ಕಿ ವಿಜಯಿಯಾಗಿದ್ದರು. ಜೆಲೆನ್‌ಸ್ಕಿ ಅಧ್ಯಕ್ಷರಾಗುವ ಮೊದಲು "ನಾವು ರಷ್ಯಾ–ಉಕ್ರೇನ್ ನಡುವೆ ಮಾತುಕತೆಯನ್ನು ನಿರಾಕರಿಸುವಂತಿಲ್ಲ" ಎಂದು ಅಭಿಪ್ರಾಯಪಟ್ಟಿದ್ದರು. 2019, ಡಿಸೆಂಬರ್‌ನಲ್ಲಿ ಪ್ಯಾರಿಸ್‌ನಲ್ಲಿ ಜೆಲೆನ್‌ಸ್ಕಿಯವರು ಜರ್ಮನಿಯ ಆಗಿನ ಛಾನ್ಸಿಲರ್ ಅಂಜೆಲಾ ಮರ್ಕೆಲ್ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮಾನ್ಯುಯೆಲ್ ಮ್ಯಾಕ್ರೊನ್ ಉಪಸ್ಥಿತಿಯಲ್ಲಿ ಪುಟಿನ್‌ರನ್ನು ಭೇಟಿ ಮಾಡಿದ್ದರು. ಈ ಭೇಟಿಯ ಹಿಂದೆಯೇ ಮ್ಯಾಕ್ರೊನ್‌ರವರು "ಯುರೋಪ್‌ಗೆ ಇದು ಪುನರಾಲೋಚನೆ ಮಾಡಬೇಕಾದ ಕಾಲ". ರಷ್ಯಾವನ್ನು ಯುರೋಪ್‌ನಿಂದ ಹೊರಗಿಡುವುದು ಗಂಭೀರ ವ್ಯೂಹಾತ್ಮಕ ತಪ್ಪು" ಎಂದಿದ್ದರು. 2015ರಲ್ಲಿ ಬೆಲಾರೂಸ್‌ನ ರಾಜಧಾನಿ ಮಿನ್‌ಸ್ಕ್‌ನಲ್ಲಾದ ಒಪ್ಪಂದ ಆಧಾರದಲ್ಲಿ ಮುಂದಿನ ಒಂದು ವರ್ಷದಲ್ಲಿ ಸಮಸ್ಯೆ ಪರಿಹಾರವಾಗಬಹುದು ಎಂದು 2020ರಲ್ಲಿ ಜೆಲೆನ್‌ಸ್ಕಿ ವಿಶ್ವಾಸ ವ್ಯಕ್ತಪಡಿಸಿದ್ದರು. 'ಈ ಒಪ್ಪಂದ ತಿರಸ್ಕರಿಸಿದಲ್ಲಿ ವಿನಾಶವಾಗುಹುದು. ಶೀಘ್ರದಲ್ಲಿ ಶಸ್ತ್ರ ಸಜ್ಜಿತ ಸೈನಿಕರು ಕಣ್ಮರೆಯಾಗುತ್ತಾರೆ. ಗುಂಡಿನ ಹಾರಾಟವು ನಿಲ್ಲುತ್ತದೆ' ಎಂದು ಜೆಲೆನ್‌ಸ್ಕಿ ಹೇಳಿಕೆ ನೀಡಿದ್ದರು. 2019ರಲ್ಲಿ ಪುಟಿನ್ ಒಂದು ಪತ್ರಿಕಾಗೋಷ್ಠಿಯಲ್ಲಿ "ಮಿನ್‌ಸ್ಕ್ ಒಪ್ಪಂದಕ್ಕಿಂತ ಬೇರಾವುದು ಮಹತ್ವದ್ದಲ್ಲ" ಎಂದಿದ್ದರು. ಎರಡೂ ನಾಯಕರಿಗೆ ಯುದ್ಧ ಬೇಕಾಗಿರಲಿಲ್ಲ ಎಂಬುದು ಇವರ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ.

ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಪಾತ್ರ: 2020ರಲ್ಲಿ ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್‌ರು ರಷ್ಯಾ–ಉಕ್ರೇನ್ ನಡುವಿನ ಸಂಧಾನವು ಕೇವಲ ಮಿನ್‌ಸ್ಕ್ ಒಪ್ಪಂದ ಹಾಗೂ ಉಕ್ರೇನ್‌ಗೆ ಸೀಮಿತವಾಗಬಾರದು. ಯುರೋಪ್ ಹೊಸ ಭದ್ರತಾ ವ್ಯವಸ್ಥೆ ರಚಿಸಬೇಕು. ಈ ವ್ಯವಸ್ಥೆಯಲ್ಲಿ ರಷ್ಯಾ ಯುರೋಪ್‌ನಿಂದ ಪ್ರತ್ಯೇಕವಾಗಿ ಏಕಾಂಗಿಯಾಗದಂತೆ ಹಾಗೂ ಅಮೆರಿಕಕ್ಕೆ ಉಪಯುಕ್ತವಾಗದಂತೆ ಇರಬೇಕು ಎಂಬ ಎರಡು ಅಂಶ ಪ್ರಸ್ತಾಪಿಸಿದರು. ಓರ್ವ ಯುರೋಪಿಯನ್‌ನಾಗಿ ತಾನು ಯುರೋಪಿಯನ್ ಒಕ್ಕೂಟ ಹಾಗೂ ರಷ್ಯಾ ನಡುವೆ ಮುಕ್ತ ಮಾತುಕತೆ ಬಯಸುತ್ತೇನೆ ಎಂದು ಹೇಳಿದರು. ಆದರೆ ಮ್ಯಾಕ್ರನ್ ಸದುದ್ದೇಶದಿಂದ ಮಾಡಿದ ಪ್ರಸ್ತಾಪಗಳು ರಷ್ಯಾದ ಹಿಂಜರಿಕೆ ಹಾಗೂ ಅಮೆರಿಕ ಹಾಗೂ ಮಿತ್ರ ದೇಶಗಳ ನಕಾರಾತ್ಮಕ ಧೋರಣೆಯಿಂದ ವಿಫಲವಾದವು.

2021, ಡಿಸೆಂಬರ್ 7ರಂದು ಪುಟಿನ್–ಬಿಡೆನ್ ಮಧ್ಯೆ ನಡೆದ ವಿಡಿಯೋ ಮಾತುಕತೆಯಲ್ಲಿ ಬಿಡೆನ್‌ಗೆ ಸ್ಪಷ್ಟವಾಗಿ "ರಷ್ಯಾವು ನ್ಯಾಟೊದಿಂದ ವಿಶ್ವಾಸಾರ್ಹ, ಕಾನೂನುಬದ್ಧ ಸ್ಪಷ್ಟ ಖಾತರಿ ಬಯಸುತ್ತದೆ. ನ್ಯಾಟೊ ಪೂರ್ವದತ್ತ ವಿಸ್ತರಿಸುವುದನ್ನು ನಿಲ್ಲಿಸಬೇಕು ಹಾಗೂ ನ್ಯಾಟೊ ದೇಶಗಳ ಗಡಿಗಳಲ್ಲಿ ರಷ್ಯಾವನ್ನು ಗುರಿ ಮಾಡಿ ಸ್ಥಾಪಿಸಿರುವ ಕ್ಷಿಪಣಿಗಳನ್ನು ಹಿಂತೆಗೆಯಬೇಕೆಂದು ಆಗ್ರಹಿಸುತ್ತೆ" ಎಂದು ಸ್ಪಷ್ಟಪಡಿಸಿದರು. ಆದರೆ ಅಮೆರಿಕವು ಯಾವುದೇ ರೀತಿಯ ಖಾತರಿ ನೀಡಲು ನಿರಾಕರಿಸಿತು.

ದಾಖಲೆಗಳ ಪ್ರಕಾರ ರಷ್ಯಾ ಆಕ್ರಮಣ ಆರಂಭವಾಗುವ ನಾಲ್ಕು ದಿನ ಹಿಂದಿನವರೆಗೆ ಬಿಗು ಕಡಿಮೆ ಮಾಡುವ ಮ್ಯಾಕ್ರಾನ್‌ರ ಉಪಕ್ರಮ ಹಾಗೂ ಪುಟಿನ್–ಜೆಲೆನ್‌ಸ್ಕಿ ನಡುವಿನ ರಾಜತಾಂತ್ರಿಕ ಮಾತುಕತೆ ಎರಡನ್ನೂ ಅಮೆರಿಕ ತಿರಸ್ಕರಿಸಿತು.

2014 ರಿಂದ 2022ರವರೆಗೆ ನಡೆದ ಸಂಧಾನದ ಯತ್ನಗಳು ಅಮೆರಿಕ ಹಾಗೂ ಕೆಲವು ಇ.ಯು. ರಾಷ್ಟ್ರಗಳ ಮೊಂಡುತನದಿಂದ ವಿಫಲವಾದವು. ಈ ವೈಫಲ್ಯಕ್ಕೆ ರಷ್ಯಾ ಮತ್ತು ಉಕ್ರೇನ್ ಭಾರೀ ಬೆಲೆ ತೆರುತ್ತಿವೆ. ಈ ಯುದ್ಧ ಜಗತ್ತಿನ ಆರ್ಥಿಕತೆ ಮೇಲೆ ಭಾರೀ ಹೊಡೆತ ನೀಡಿದೆ. ರಷ್ಯಾ ತನ್ನಲ್ಲಿ ಹೇರಳವಾಗಿರುವ ಹಾಗೂ ಯುರೋಪ್ ದೇಶಗಳಿಗೆ ಅತ್ಯಾವಶ್ಯಕವಾಗಿರುವ ಕಚ್ಚಾತೈಲ ಹಾಗೂ ಗ್ಯಾಸೂಲಿನ್ ಬೆಲೆಯನ್ನು ಹೆಚ್ಚಿಸಿರುವುದರಿಂದ ಹಾಗೂ ಪೂರೈಕೆ ಕಡಿತಗೊಳಿಸಿರುವುದರಿಂದ ಉಂಟಾಗಿರುವ ಹಣದುಬ್ಬರ ಹಾಗೂ ಆರ್ಥಿಕ ಸಂಕಷ್ಟಗಳಿಂದ ಯುರೋಪಿಯನ್ ದೇಶಗಳ ಜನರು ತಮ್ಮ ಸರಕಾರಗಳ ವಿರುದ್ಧ ಬೀದಿಗಿಳಿದಿದ್ದಾರೆ ಅಮೆರಿಕಾ ಹಾಗೂ ಯುರೋಪಿಯನ್ ನಾಯಕರ ದುರಾಗ್ರಹದಿಂದ ಕುಟಿಲ ರಾಜಕೀಯ ಉದ್ದೇಶ ಅರಿತ ರಷ್ಯಾ ಯುದ್ಧ ಮುಂದುವರಿಸಿದೆ. ಈ ರಾಷ್ಟ್ರಗಳ ಧೋರಣೆಯನ್ನು ಅರಿತ ಭಾರತವು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ರಷ್ಯಾ ಪರ ಅಥವಾ ತಟಸ್ಥ ನಿಲುವು ತಾಳಿದೆ. ಭಾರತವು ರಷ್ಯಾ ಪರ ತಳೆದ ನಿಲುವಿಗಾಗಿ ರಷ್ಯಾವು ಕಡಿಮೆ ಬೆಲೆಯಲ್ಲಿ ಭಾರತಕ್ಕೆ ಕಚ್ಚಾತೈಲ ಪೂರೈಸುತ್ತಿದೆ. ಇದರಿಂದಾಗಿ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ತೈಲ ಬೆಲೆ ಗಗನಕ್ಕೇರಿದರೆ, ಭಾರತದಲ್ಲಿ ಸ್ಥಿರವಾಗಿದ್ದು, ಹಣದುಬ್ಬರ ನಿಯಂತ್ರಣದಲ್ಲಿದೆ. ಪ್ರಸ್ತುತ ಯುದ್ಧದಿಂದಾಗಿ ಭಾರತವು ಇ.ಯು. ದೇಶಗಳಿಗೆ ಮಾರ್ಗದರ್ಶಕವಾಗಿಯೂ, ರಷ್ಯಾಕ್ಕೆ ಆಪ್ತಾಗಿಯೂ ಪ್ರಬುದ್ಧ, ಚಾಣಾಕ್ಷ ವಿದೇಶಾಂಗ ನೀತಿಯನ್ನು ಅನುಸರಿಸಿ ಜಗತ್ತಿನ ಗೌರವಕ್ಕೆ ಪಾತ್ರವಾಗಿದೆ.



ವಾರಭವಿಷ್ಯ

20.11.2022 ರಿಂದ 26.11.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಶ್ಚಿಕ, ಚಂದ್ರ–ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಕುಜ–ವೃಷಭ, ಬುಧ–ವೃಶ್ಚಿಕ, ಗುರು–ಮೀನ, ಶುಕ್ರ–ವೃಶ್ಚಿಕ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ.
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದ ಆದಿಗೆ ನೂತನ ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಸಿದ್ಧರಾಗಿರಿ. ದಾಸ್ತಾನು ಮಾರಾಟದಿಂದ ಹೆಚ್ಚಿನ ಧನ ಲಾಭವಾಗಲಿದೆ. ಕೆಲವರಿಗೆ ವಿದೇಶಿ ಉದ್ಯೋಗ ಲಭ್ಯವಾಗುವ ಸಾಧ್ಯತೆ. ಭರಣಿ ನಕ್ಷತ್ರದವರಿಗೆ ಎಲ್ಲಾ ಸ್ತರಗಳಲ್ಲೂ ಸಮಸ್ಯೆಗಳು ಎದುರಾಗುವುದು. ಜನ್ಮಸ್ಥ ರಾಹುವಿನಿಂದ ಎಲೆಕ್ಟ್ರಿಕ್ ಉಪಕರಣಗಳಿಂದ ತೊಂದರೆ ಆಗಬಹುದು. 'ಮಾತೇ ಮುತ್ತು' ದುಡುಕಿ ಮಾತನಾಡದಿರಿ. ಶ್ರೀ ಗಣಪತಿ ಉಪಾಸನೆ. ಶುಭ ಸಂಖ್ಯೆ–3

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ವಾರದ ಆದಿಗೆ ದುಡುಕಿನ ನಿರ್ಧಾರಗಳು ನಿಮಗೆ ಮುಳುವಾದೀತು. ದೈವ ಸಹಾಯವಿಲ್ಲದೆ ಜಯ ದೊರಕದು, ಸ್ವಪ್ರಯತ್ನವಿಲ್ಲದೆ ದೈವ ಸಹಾಯವೂ ದೊರಕದು. ವಾರ ಮಧ್ಯೆ ಹಣಕಾಸಿನ ಪರಿಸ್ಥಿತಿಯು ಸುಧಾರಿಸುವುದು. ವಿದ್ಯಾರ್ಥಿಗಳು ಅಭ್ಯಾಸದ ಕಡೆ ಹೆಚ್ಚಿನ ಶ್ರಮ ವಹಿಸಬೇಕು, ಅನ್ಯಥಾ ಅಸಫಲತೆಯನ್ನು ಕಾಣಬೇಕಾದೀತು. ಈ ವಾರ ಹೀಗೆ ಆಗಬೇಕೆಂದು ಬಯಸದೆ, ಆಗಿದ್ದನ್ನು ಒಪ್ಪಿಕೊಳ್ಳಿ. ಶ್ರೀ ದುರ್ಗಾಸ್ತುತಿ ಶುಭ ಸಂಖ್ಯೆ–8.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ರಫ್ತು ವ್ಯಾಪಾರದಿಂದ ಹಣ ಗಳಿಕೆ. ಸುವರ್ಣ, ರಜತ ಪದಾರ್ಥಗಳ ಖರೀದಿ. ಶುಭ ಗುರುವಿನ ಕಾರಣ ಸಾಮಾಜಿಕ ಜೀವನದಲ್ಲಿ ಎದುರಾಗುವ ಆತಂಕಗಳು ಸೂರ್ಯನೆದುರಲಿ ಮಂಜು ಕರಗಿದಂತೆ ಅದೃಶ್ಯವಾಗುವುದು. ವಿವಾಹ ಯೋಗ್ಯರಿಗೆ ಸೂಕ್ತ ವಧು–ವರರು ದೊರೆಯುವರು. ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳವಾಗಲಿದೆ. ನರ ಸಂಬಂಧಿ ಕಾಯಿಲೆ ಕಾಡಬಹುದು. ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–2.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಸೂತ್ರ ಚೆನ್ನಾಗಿದ್ದರೆ ಎಲ್ಲವೂ ಸುಸೂತ್ರ ಎಂಬಂತೆ ಈ ವಾರ ಗ್ರಹಬಲ ಚೆನ್ನಾಗಿದೆ. ಹೊಸ ಉದ್ಯಮ, ಹೊಸ ವೃತ್ತಿ ಪ್ರಾರಂಭಿಸಲು ಸಮಯ ಚೆನ್ನಾಗಿದೆ. ನಿಮ್ಮ ನಿರಂತರ ಪರಿಶ್ರಮ. ಈಗ ಫಲ ಕೊಡುವ ಸಮಯ ಬಂದಿದೆ. ವಿದ್ಯಾರ್ಥಿಗಳಿಗೆ ಸಂಶೋಧಕರಿಗೆ ನಿಮ್ಮ ಸಾಧನೆಯ ಫಲ ದೊರಕುವುದು. ಸರ್ಕಾರಿ ನೌಕರರಿಗೆ ಬಡ್ತಿ ಸಮೇತ ವರ್ಗಾವಣೆ ಆಗಬಹುದು. ಅಜೀರ್ಣ ಹಾಗೂ ವಾಯು ಸಂಬಂಧಿ ವ್ಯತ್ಯಯ ಉಂಟಾದೀತು. ಶ್ರೀ ನರಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ–1.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ವ್ಯವಹಾರ ಕುಶಲತೆಯಿಂದ ಧನ ಸಂಪಾದನೆ ಆಗಲಿದೆ. ಈ ವಾರದಲ್ಲಿ ನೀವು ಬಹಳಷ್ಟು ಸಾಧಿಸುವವರಿದ್ದೀರಿ. ಬರುವ ಅವಕಾಶಗಳು ಕೈ ಜಾರದಂತೆ ನೋಡಿಕೊಳ್ಳಿ, ಎಲ್ಲರೂ ಸ್ನೇಹಕ್ಕೆ ಯೋಗ್ಯರೇ ಎಂದು ತಿಳಿದು ಮುಂದಡಿ ಇಡಿ. ಇದರಿಂದ ಕೆಟ್ಟ ಅಭ್ಯಾಸಗಳಿಗೆ ದಾಸರಾಗುವ ಸಾಧ್ಯತೆ ಇರುತ್ತದೆ. ಪಂಚಮದಲ್ಲಿ ಕೇತು ಇರುವ ಕಾರಣ ಸತಿ–ಸುತರು ಅಸಹಕಾರ ತೋರುವರು. ಕರುಳು ಸಂಬಂಧಿ ಕಾಯಿಲೆ ಕಾಡಬಹುದು. ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ನಾನಾ ಮಾರ್ಗಗಳಿಂದ ಹಣ ಗಳಿಕೆಯಾದರೂ ಮಾನಸಿಕ ಶಾಂತಿ ಸಿಗದು. ಇದು ನಿಮ್ಮ ತಪ್ಪನ್ನು ಅವಲೋಕಿಸಿಕೊಳ್ಳುವ ಸಮಯ. ಹಿಂದಾಗಿದ್ದಕ್ಕೆ ಚಿಂತಿಸುತ್ತಾ ಕೂರಬೇಡಿ, ಮುಂದಾಗಬೇಕಾಗಿರುವ ಸಾಧ್ಯತೆಯತ್ತ ನೋಡಿ. ಸರ್ಕಾರಿ ನೌಕರರು ಅಕ್ರಮ ಕಾರ್ಯ ಮಾಡಿ ತೊಂದರೆಗೆ ಸಿಲುಕುವರು. ವಾರಾಂತ್ಯಕ್ಕೆ ಚಂದ್ರ ನಿಮ್ಮ ರಾಶಿಗೆ ಬರುವುದರ ಫಲವಾಗಿ ನೆಮ್ಮದಿಯ ತಂಗಾಳಿ ಬೀಸುವುದು. ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–6.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಗುರು ಕೃಪೆಯ ಪರಿಣಾಮ ಎಡರು –ತೊಡರುಗಳನ್ನು ಮೀರಿ ಅಮೂಲ್ಯ ವಸ್ತು ಗಳಿಕೆ ಆಗಲಿದೆ. ವ್ಯವಹಾರಿಕವಾಗಿ ಚುರುಕು ಬುದ್ಧಿ ಕೆಲಸ ಮಾಡಲಿದೆ. ಚಂದ್ರಗ್ರಹ ಸಂಚಾರವೂ ಶುಭವಿದ್ದು, ಅದ್ಭುತ ಕ್ರಿಯಾಶಕ್ತಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಸಫಲತೆ ಉಂಟಾಗಲಿದೆ. ರಾಜಕಾರಣಿಗಳಿಗೆ ಅಪವಾದ ಅಂಟಿಕೊಳ್ಳುವುದು. ವಾರಾಂತ್ಯಕ್ಕೆ ಸ್ವೇಚ್ಛಾಚಾರದಿಂದ ಬಹಳಷ್ಟು ತೊಂದರೆಗಳನ್ನು ಅನುಭವಿಸಬೇಕಾದೀತು. ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–9.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದ ಪೂರ್ವಾರ್ಧದಲ್ಲಿ ಶುಭ ವಾರ್ತೆಗಳನ್ನು ನಿರೀಕ್ಷಿಸಬಹುದು. ಕೃಷಿಕರಿಗೂ, ಕೃಷಿ ಉಪಕರಣ ಮಾರಾಟಗಾರರಿಗೂ ಉತ್ತಮ ಆದಾಯ ದೊರೆಯುವುದು. ಹೊಸ ವೃತ್ತಿ, ವ್ಯಾಪಾರಗಳನ್ನು ಪ್ರಾರಂಭಿಸಲು ಸಮಯ ಪೂರಕವಾಗಿಲ್ಲ. ಗುರು–ಶನಿ ಗ್ರಹಗಳ ಗೋಚಾರ ಶುಭವಿಲ್ಲದ ಕಾರಣ, ಪ್ರಾರಬ್ಧ ಕರ್ಮವನ್ನು ಕಳೆಯಲು ಕರ್ತವ್ಯದಲ್ಲಿ ಭಗವಂತನನ್ನು ಕಾಣಿ. ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–3.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವಾರದ ಆದಿಗೆ ನಿಮ್ಮ ಉದಾರ ಗುಣ ಹಾಗೂ ಧರ್ಮ ಕಾರ್ಯಗಳನ್ನು ಮಾಡುವುದರಿಂದ ಪ್ರಸಿದ್ಧಿಗೆ ಬರುವಿರಿ. ನಿರ್ಮಲ ಚಿತ್ತರಾಗಿ ಕಾರ್ಯಗಳಲ್ಲಿ ತೊಡಗಿಸಿಕೊಂಡರೆ ಸಫಲತೆಯನ್ನು ಹೊಂದುವಿರಿ, ಜೊತೆಗೆ ಗುರು ದರ್ಶನದಿಂದ ಗುರಿ ಕಾಣುತ್ತದೆ. ಕೃತ್ರಿಮ ಗೆಳೆಯರಿದ್ದಾರೆ ಎಚ್ಚರವಾಗಿರಿ. ಶತ್ರುಗಳಿಂದ ಉಪದ್ರವ ಉಂಟಾಗಬಹುದು. ರಾಜಕೀಯದವರು ವಿರೋಧಿಗಳ ಟೀಕಾ ಪ್ರಹಾರಕ್ಕೆ ಗುರಿಯಾಗುವರು. ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ–4.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಮಾತಿಗಿಂತ ನಿಮ್ಮ ಕಾರ್ಯಗಳೇ ಹೆಚ್ಚು ಮಾತನಾಡುತ್ತವೆ. ಮನೆಯಲ್ಲಿ ಸಾಮರಸ್ಯ ಮರುಕಳಿಸಬಹುದು. ಇದು ನಿಮ್ಮ ಭಾವನೆಗಳನ್ನು ಶಕ್ತಿಯನ್ನಾಗಿ ಪರಿವರ್ತಿಸುವ ಸಮಯವಾಗಿದೆ. ಎಲ್ಲವೂ ಸರಿ ಎನಿಸಿದಾಗ, ಅವಸರದ ನಿರ್ಧಾರಗಳು ನಿಮಗೆ ಮುಳುವಾಗಬಹುದು. ಪ್ರೇಮಿಗಳ ನಡುವಿನ ವಿರಸಗಳು ನಿವಾರಣೆ ಆಗುವುದು. ಮನೆ ಮಂದಿಯೊಂದಿಗೆ ಪ್ರವಾಸಕ್ಕೆ ತೆರಳಬಹುದು. ಕ್ಷೇಮವಾಗಿ ವಾಹನ ಚಲಿಸಿ, ಇತರರೂ ಕ್ಷೇಮವಾಗಿರಲಿ. ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ–2.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಬಹು ನಿರೀಕ್ಷೆಯ ಫಲ ಮಧುರವೇ. ದೇವರಲ್ಲಿ ಪ್ರಾರ್ಥಿಸುವಾಗ ಪ್ರಸಾದದ ಚಿಂತೆ ಬೇಡ. ಚಂದ್ರಗ್ರಹ ಸಂಚಾರ ಶುಭವಿದೆ. ಕರ್ಮಕ್ಕೆ ತಕ್ಕಂತೆ ಫಲ ದೊರೆಯುವುದು. ಬೃಹತ್ ಕೈಗಾರಿಕಾ ಸಂಸ್ಥೆಗಳಿಗೆ ಮಾರಾಟ ಹೆಚ್ಚಳ ಹಾಗೂ ಹೇರಳ ಧನಲಾಭ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ವಧು–ವರ ನಿಶ್ಚಯವಾಗುವ ಸಾಧ್ಯತೆ. ದ್ವಿದಳ ಧಾನ್ಯ ಹಾಗೂ ಕಪ್ಪು ಎಳ್ಳು ಮಾರಾಟಗಾರರು ನಷ್ಟವನ್ನು ಅನುಭವಿಸುವರು. ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–5.


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ವಾರದಾರಂಭಕ್ಕೆ ಹರುಷ, ನಲಿವುಗಳು, ಗೆಳೆಯರ ಬಳಗದ ಮಿಲನ, ಸಂತೋಷ ಕೂಟಗಳು, ಕಳೆದುಕೊಂಡಿದ್ದನ್ನು ಮರಳಿ ಪಡೆಯುವಿರಿ. ವ್ಯಾಪಾರ–ವಹಿವಾಟುಗಳು ಪ್ರಗತಿಯ ಹಾದಿಯಲ್ಲಿ ಸಾಗುವುದು. ಧಾರ್ಮಿಕ ಕಾರ್ಯಗಳಲ್ಲಿ ವಿಘ್ನಗಳು ಉಂಟಾಗುವುದು. ದ್ವಿತೀಯ ರಾಹು ಮನೆಯಲ್ಲಿ ವಾದ–ವಿವಾದಗಳಿಗೆ ಕಾರಣಕರ್ತನಾದರೆ, ಅಷ್ಟಮ ಕೇತುವಿನಿಂದ ಅಪಘಾತಗಳ ಸಂಭವ. ಶ್ರೀ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ–5.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವಾರದ ಮಿತ್ರ

ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ
ಭಾನುವಾರ
20-11-2022



ಇಂದಿನಿಂದ ಫಿಫಾ ಫುಟ್ಬಾಲ್ ವಿಶ್ವಕಪ್





2010ರಲ್ಲಿ ಕತಾರ್‌ಗೆ ಫಿಫಾ ವಿಶ್ವಕಪ್ ಆತಿಥ್ಯ ವಹಿಸುವ ಅದೃಷ್ಟ ಒಲಿಯುತ್ತಿದ್ದಂತೆ ಈ ಪುಟ್ಟ ದೇಶ 220 ಮಿಲಿಯನ್ ಡಾಲರ್ (ಸುಮಾರು 17 ಲಕ್ಷ ಕೋಟಿ) ಖರ್ಚು ಮಾಡಿ, ಸರ್ವ ರೀತಿಯಲ್ಲಿ ಸಜ್ಜಾಗಿದೆ. ಕತಾರ್ ಭಾರತದ ತ್ರಿಪುರಾ ರಾಜ್ಯದಷ್ಟು ಭೂ ಪ್ರದೇಶ ಹೊಂದಿದ್ದು, 30 ಲಕ್ಷ ಜನ ಸಂಖ್ಯೆ ಹೊಂದಿದೆ. ಆದರೆ ಜಾಗತಿಕವಾಗಿ ಬೆಳಗಲು ತನಗೆ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಸರ್ವ ಸನ್ನದ್ಧವಾಗಿದೆ.

ಬಹುಮಾನದ ಮೊತ್ತ

ವಿನ್ನರ್ 42 ಮಿಲಿಯನ್
ರನ್ನರ್‌ಅಪ್ 30 ಮಿಲಿಯನ್
ಮೂರನೇ ಸ್ಥಾನ 27 ಮಿಲಿಯನ್
4ನೇ ಸ್ಥಾನ 25 ಮಿಲಿಯನ್
5ರಿಂದ 8ನೇ ಸ್ಥಾನ 17 ಮಿಲಿಯನ್
9ರಿಂದ 16ನೇ ಸ್ಥಾನ 13 ಮಿಲಿಯನ್
17 ರಿಂದ 32ನೇ ಸ್ಥಾನ 9 ಮಿಲಿಯನ್

ವಿಶ್ವಕಪ್ ವಿಜೇತರು

1930– ಉರುಗ್ವೆ
1934– ಇಟಲಿ
1938– ಇಟಲಿ
1950– ಉರುಗ್ವೆ
1954– ಜರ್ಮನಿ
1958– ಬ್ರೆಜಿಲ್
1962– ಬ್ರೆಜಿಲ್
1966– ಇಂಗ್ಲೆಂಡ್
1970– ಬ್ರೆಜಿಲ್
1974– ಜರ್ಮನಿ
1978– ಅರ್ಜೆಂಟಿನಾ
1982– ಇಟಲಿ
1986– ಅರ್ಜೆಂಟಿನಾ
1990– ಜರ್ಮನಿ
1994– ಬ್ರೆಜಿಲ್
1998– ಫ್ರಾನ್ಸ್
2002– ಬ್ರೆಜಿಲ್
2006– ಇಟಲಿ
2010– ಸ್ಪೇನ್
2014– ಜರ್ಮನಿ
2018– ಫ್ರಾನ್ಸ್
2022– ?

ಪ್ರತಿ 4 ವರ್ಷಗಳಿಗೊಮ್ಮೆ ನಡೆಯುವ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ 1942 ಮತ್ತು 1946ರಲ್ಲಿ ನಡೆದಿರಲಿಲ್ಲ.

ಫಿಫಾ ವಿಶ್ವಕಪ್ ಫುಟ್ಬಾಲ್–2022 ಕ್ರೀಡಾ ಜಾತ್ರೆ ಆರಂಭಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಈಗಾಗಲೇ ವಿಶ್ವದೆಲ್ಲೆಡೆ ಫುಟ್ಬಾಲ್ ಫೀವರ್ ಆರಂಭವಾಗಿದೆ. ಇಡೀ ವಿಶ್ವದಲ್ಲೇ ಅತೀ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಕ್ರೀಡೆ ಎಂದರೆ ಅದು ಫುಟ್ಬಾಲ್. ಹೀಗಾಗಿ ಪಂದ್ಯಾವಳಿ ವೀಕ್ಷಿಸಲು ಕಾತುರರಾಗಿದ್ದಾರೆ. ಅಲ್ಲದೇ ಟೂರ್ನಿಯು ವಿಶ್ವದ ಕ್ರೀಡಾಭಿಮಾನಿಗಳಿಗೆ ಮುಂದಿನ ಸುಮಾರು 1 ತಿಂಗಳ ಕಾಲ (ನ.20ರಿಂದ ಡಿ.18) ರಸದೌತಣ. ಇದೇ ಪ್ರಥಮ ಬಾರಿಗೆ ಫಿಫಾ ವಿಶ್ವಕಪ್ ಪಂದ್ಯಾವಳಿಗೆ ಗಲ್ಫ್ ರಾಷ್ಟ್ರ 'ಕತಾರ್' ಆತಿಥ್ಯ ವಹಿಸಿದ್ದು, ಟೂರ್ನಿ ಯಶಸ್ಸಿಗೆ ಬೇಕಾದ ಎಲ್ಲಾ ರೀತಿಯ ಸಿದ್ಧತೆಯನ್ನು ಕಳೆದ 12 ವರ್ಷದಿಂದ ಮಾಡಿಕೊಂಡಿದ್ದು, 22ನೇ ಆವೃತ್ತಿಯ ಫುಟ್ಬಾಲ್ ಕಾಲ್ಚೆಂಡಿನಾಟ ನಾಳೆಯಿಂದ (ನ.20) ಆರಂಭವಾಗಲಿದೆ.

ಪಂದ್ಯಾವಳಿಗೆ ದೋಹಾದ ಅಲ್ ಬೈತ್ ಕ್ರೀಡಾಂಗಣದಲ್ಲಿ ವರ್ಣರಂಜಿತ ಚಾಲನೆ ದೊರೆಯಲಿದ್ದು, ಉದ್ಘಾಟನಾ ಪಂದ್ಯದಲ್ಲಿ ಕತಾರ್ ಮತ್ತು ಈಕ್ವೆಡಾರ್ ಮುಖಾಮುಖಿಯಾಗಲಿವೆ. ಸಮಾರಂಭದಲ್ಲಿ ಕತಾರ್ ಸಂಸ್ಕೃತಿ ಅನಾವರಣ ಸೇರಿದಂತೆ ವಿವಿಧ ದೇಶಗಳ ಖ್ಯಾತ ಕಲಾವಿದರೂ ಭಾಗವಹಿಸುವ ನಿರೀಕ್ಷೆ ಇದೆ ಎನ್ನಲಾಗಿದೆ. ಒಟ್ಟು 64 ಪಂದ್ಯಗಳನ್ನು ಒಳಗೊಂಡ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ವಿಶ್ವದ ವಿವಿಧ ದೇಶಗಳ 32 ತಂಡಗಳು ಅರ್ಹತೆ ಪಡೆದಿವೆ. ತಂಡಗಳನ್ನು ಎ, ಬಿ, ಸಿ, ಡಿ, ಇ, ಎಫ್, ಜಿ, ಹೆಚ್ – ಹೀಗೆ 8 ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿ ಗುಂಪಿನಲ್ಲಿ 4 ತಂಡಗಳಿದ್ದು, ಲೀಗ್ ಹಂತದ ಪಂದ್ಯಗಳಲ್ಲಿ ಪ್ರತಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದ 2 ತಂಡಗಳು ರೌಂಡ್ 16 ಹಂತಕ್ಕೆ ಪ್ರವೇಶ ಪಡೆಯಲಿವೆ. ಕ್ವಾರ್ಟರ್ ಫೈನಲ್‌ನಲ್ಲಿ ಸೆಣಸಾಡಿ ವಿಜಯ ಸಾಧಿಸುವ 8 ತಂಡಗಳು ಸೆಮಿಫೈನಲ್ ತಲುಪಲಿವೆ. ಸೆಮೀಸ್‌ನಲ್ಲಿ 4 ತಂಡಗಳು ಕಾದಾಡಲಿವೆ. ಅಂತಿಮವಾಗಿ ಮೂರನೇ ಸ್ಥಾನಕ್ಕಾಗಿ ಪ್ಲೇ ಆಫ್ ಪಂದ್ಯ ನಡೆಯಲಿದ್ದು, ಸೆಮಿಫೈನಲ್‌ನಲ್ಲಿ ಜಯ ಸಾಧಿಸುವ ಅಂತಿಮ 2 ತಂಡಗಳು ಡಿ.18 ರಂದು ನಡೆಯುವ ಫೈನಲ್ ಪಂದ್ಯದಲ್ಲಿ ಚಾಂಪಿಯನ್ ಪಟ್ಟಕ್ಕಾಗಿ ಸೆಣಸಲಿವೆ.

ಭಾರೀ ಪೈಪೋಟಿ: ಕತಾರ್‌ನಲ್ಲಿ ಆರಂಭವಾಗುವ ಫುಟ್ಬಾಲ್ ಪಂದ್ಯಾವಳಿಯಲ್ಲಿ ಚಾಂಪಿಯನ್ ಪಟ್ಟಕ್ಕಾಗಿ ಭಾರೀ ಪೈಪೋಟಿ ನಡೆಯುವ ನಿರೀಕ್ಷೆ ಇದೆ. ಹಾಲಿ ಚಾಂಪಿಯನ್ ಫ್ರಾನ್ಸ್ ಚಾಂಪಿಯನ್‌ಪಟ್ಟ ತನ್ನಲ್ಲೇ ಉಳಿಸಿಕೊಳ್ಳುವ ತವಕದಲ್ಲಿದ್ದರೆ, ಸಾರ್ವಕಾಲಿಕ ಫೇವರೆಟ್‌ಗಳಾದ ಅರ್ಜೆಂಟಿನಾ, ಇಟಲಿ, ಬ್ರೆಜಿಲ್, ಜರ್ಮನಿ, ಇಂಗ್ಲೆಂಡ್, ಪೋರ್ಚುಗಲ್ ಸೇರಿದಂತೆ ಇನ್ನಿತರ ತಂಡಗಳು ಚಾಂಪಿಯನ್ ಪಟ್ಟದ ಮೇಲೆ ಕಣ್ಣಿಟ್ಟಿವೆ.

ಘಟಾನುಘಟಿಗಳ ಮೇಲೆ ಭಾರೀ ನಿರೀಕ್ಷೆ: ಪ್ರಸ್ತುತ ವಿಶ್ವ ಫುಟ್ಬಾಲ್‌ನಲ್ಲಿ ಧ್ರುವತಾರೆಗಳಾಗಿ ಮಿಂಚುತ್ತಿರುವ **ಅರ್ಜೆಂಟಿನಾದ ಲಿಯೋನಲ್ ಮೆಸ್ಸಿ, ಪೋರ್ಚುಗಲ್‌ನ ಕ್ರಿಸ್ಟಿಯಾನೋ ರೋನಾಲ್ಡೊ, ಬ್ರೆಜಿಲ್‌ನ ನೇಯ್ಮರ್, ಇಂಗ್ಲೆಂಡ್‌ನ ಹ್ಯಾರಿ ಕೇನ್ ಹಾಗೂ ಜರ್ಮನಿಯ ಮುಲ್ಲರ್** ಸೇರಿದಂತೆ ಘಟಾನುಘಟಿ ಆಟಗಾರರ ಮೇಲೆ ಭಾರೀ ನಿರೀಕ್ಷೆ ಇಡಲಾಗಿದ್ದು, ವಿಶ್ವಕಪ್ ಟೂರ್ನಿಯಲ್ಲಿ ತಮ್ಮ ತಂಡವನ್ನು ಚಾಂಪಿಯನ್ನಾಗಿ ಮಾಡಲು ಮೈದಾನದಲ್ಲಿ ಯಾವ ತಂತ್ರಗಾರಿಕೆ ಅನುಸರಿಸಲಿದ್ದಾರೆ ಹಾಗೂ ಕಾಲ್ಚಳಕ ತೋರಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ.

ಫುಟ್‌ಬಾಲ್ ಪಂದ್ಯಾವಳಿ ಗ್ರೂಪ್‌ಗಳು

ಕತಾರ್‌ನಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಗೆ ಅರ್ಹತೆ ಪಡೆದಿರುವ ತಂಡಗಳನ್ನು 8 ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

ಗ್ರೂಪ್ ಎ: ಕತಾರ್, ಈಕ್ವೆಡಾರ್, ಸೆನೆಗಲ್, ನೆದರ್‌ಲ್ಯಾಂಡ್
ಗ್ರೂಪ್ ಬಿ: ಇಂಗ್ಲೆಂಡ್, ಇರಾನ್, ಯುಎಸ್‌ಎ, ವೇಲ್ಸ್
ಗ್ರೂಪ್ ಸಿ: ಅರ್ಜೆಂಟಿನಾ, ಸೌದಿ ಅರೇಬಿಯಾ, ಮೆಕ್ಸಿಕೊ, ಪೋಲೆಂಡ್
ಗ್ರೂಪ್ ಡಿ: ಫ್ರಾನ್ಸ್, ಆಸ್ಟ್ರೇಲಿಯಾ, ಡೆನ್ಮಾರ್ಕ್, ಟುನಿಷಿಯಾ
ಗ್ರೂಪ್ ಇ: ಸ್ಪೇನ್, ಕೋಸ್ಟರಿಕಾ, ಜರ್ಮನಿ, ಜಪಾನ್
ಗ್ರೂಪ್ ಎಫ್: ಬೆಲ್ಜಿಯಂ, ಕೆನಡಾ, ಮೊರಾಕೊ, ಕ್ರೊವೇಷಿಯಾ
ಗ್ರೂಪ್ ಜಿ: ಬ್ರೆಜಿಲ್, ಸೈಬೀರಿಯಾ, ಸ್ವಿಡ್ಜರ್‌ಲ್ಯಾಂಡ್, ಕ್ಯಾಮರೂನ್
ಗ್ರೂಪ್ ಹೆಚ್: ಪೋರ್ಚುಗಲ್, ಘಾನಾ, ಉರುಗ್ವೆ, ಸೌತ್ ಕೊರಿಯಾ

ಗೋಲ್ಡನ್ ಬೂಟ್ ಪ್ರಶಸ್ತಿ ವಿಜೇತರ ಪಟ್ಟಿ

1930 ಗಿಲ್ಲೆರ್ಮೋ ಸ್ಟೆಬೈಲ್ (ಅರ್ಜೆಂಟೈನಾ) 8 ಗೋಲುಗಳು
1934 ಓಲ್ಡೆಚ್ ನೆಜೆಡ್ಲಿ (ಜೆಕೊಸ್ಲೋವಾಕಿಯಾ) 5 ಗೋಲುಗಳು
1938 ಲಿಯೊನಿಡಾಸ್ (ಬ್ರೆಜಿಲ್) 7 ಗೋಲುಗಳು
1950 ಅಡೆಮಿರ್ (ಬ್ರೆಜಿಲ್) 8 ಗೋಲುಗಳು
1954 ಸ್ಯಾಂಡರ್ ಕೊಕಾಕ್ಸ್ (ಹಂಗೇರಿ) 11 ಗೋಲುಗಳು
1958 ಜಸ್ಟ್ ಫಾಂಟೈನ್ (ಫ್ರಾನ್ಸ್) 13 ಗೋಲುಗಳು
1962 ಫ್ಲೋರಿಯನ್ ಆಲ್ಬರ್ಟ್ (ಹಂಗೇರಿ), ವ್ಯಾಲೆಂಟಿನ್ ಇವನೊವ್ (ರಷ್ಯಾ), ಗರಿಂಚಾ, ವಾವಾ (ಬ್ರೆಜಿಲ್), ಡ್ರಾಸನ್ ಡಿಜೆರ್ಕೋವಿಕ್ (ಕ್ರೊವೇಷಿಯಾ), ಲಿಯೋನೆಲ್ ಸ್ಯಾಂಚೆಜ್ (ಚಿಲಿ) 4 ಗೋಲುಗಳು
1966 ಇಸೆಬಿಯೊ (ಪೋರ್ಚುಗಲ್) 9 ಗೋಲುಗಳು
1970 ಗೆರಾಡ್ ಮುಲ್ಲರ್ (ಜರ್ಮನಿ) 10 ಗೋಲುಗಳು
1974 ಗ್ರ್ಜೆಗೋರ್ಜ್ ಲಾಟೊ (ಪೋಲೆಂಡ್) 7 ಗೋಲುಗಳು
1978 ಮಾರಿಯೋ ಕ್ಯಾಂಪ್ಸ್ (ಅರ್ಜೆಂಟೈನಾ) 6 ಗೋಲುಗಳು
1982 ಪಾವ್ಲೊಲೊ ರೊಸ್ಸಿ (ಇಟಲಿ) 6 ಗೋಲುಗಳು
1986 ಗ್ಯಾರಿ ಲಿನೆಕರ್ (ಇಂಗ್ಲೆಂಡ್) 6 ಗೋಲುಗಳು
1990 ಸಾಲ್ವಟೋರ್ ಸಿಲಾಚಿ (ಇಟಲಿ) 6 ಗೋಲುಗಳು
1994 ಒಲೆಗ್ ಸಲೆಂಕೊ (ರಷ್ಯಾ), ಹ್ರಿಸ್ಟೊ ಸ್ಟೊಯಿಚ್ಕೊವ್ (ಬಲ್ಗೇರಿಯಾ) 6 ಗೋಲುಗಳು
1998 ದಾವರ್ ಸುಕರ್ (ಕ್ರೊವೇಷಿಯಾ) 6 ಗೋಲುಗಳು
2002 ರೊನಾಲ್ಡೊ ನಜಾರಿಯೊ (ಬ್ರೆಜಿಲ್) 8 ಗೋಲುಗಳು
2006 ಮಿರೋಸ್ಲಾವ್ ಕ್ಲೋಸ್ (ಜರ್ಮನಿ) 5 ಗೋಲುಗಳು
2010 ಥಾಮಸ್ ಮುಲ್ಲರ್ (ಜರ್ಮನಿ) 6 ಗೋಲುಗಳು
2014 ಜೇಮ್ಸ್ ರೊಡ್ರಿಗಸ್ (ಕೊಲಂಬಿಯಾ) 6 ಗೋಲುಗಳು
2018 ಹ್ಯಾರಿ ಕೇನ್ (ಇಂಗ್ಲೆಂಡ್) 6 ಗೋಲುಗಳು.

ಫುಟ್ಬಾಲ್ ಹಬ್ಬಕ್ಕೆ 8 ಹೊಸ ಸ್ಟೇಡಿಯಂ


ಚೊಚ್ಚಲ ಫಿಫಾ ಫುಟ್ಬಾಲ್ ವಿಶ್ವಕಪ್ ಆತಿಥ್ಯಕ್ಕೆ ಗಲ್ಫ್ ರಾಷ್ಟ್ರ ಕತಾರ್ ಸತತ 12 ವರ್ಷದಿಂದ ಸಜ್ಜಾಗಿದ್ದು, ಪಂದ್ಯಾವಳಿ ನಡೆಯುವ ಕ್ರೀಡಾಂಗಣಗಳ ನಿರ್ಮಾಣಕ್ಕೆ ಸಾಮಗ್ರಿಗಳನ್ನು ಹೊತ್ತು ತಂದ ಹಡಗುಗಳ ಕಂಟೈನರ್‌ಗಳನ್ನೇ ಬಳಸಿ ಕ್ರೀಡಾಂಗಣವೊಂದನ್ನು ಕಟ್ಟಿದೆ. ಈ ಅದ್ಭುತದ ಜೊತೆಗೆ ಹೊಸದಾಗಿ 7 ಮೈದಾನಗಳ ನಿರ್ಮಾಣ ಮಾಡಿದ್ದು, ಒಟ್ಟು 8 ಮೈದಾನಗಳು 2022ರ ವಿಶ್ವಕಪ್‌ನ 64 ಪಂದ್ಯಗಳಿಗೆ ವೇದಿಕೆಯಾಗಲಿವೆ. ದೇಶದ 5 ನಗರಗಳು ವಿಶ್ವಕಪ್ ಸೆಣಸಾಟಕ್ಕೆ ಸಾಕ್ಷಿಯಾಗಲಿವೆ. ವಿಶೇಷ ಎಂದರೆ ಎಲ್ಲಾ 8 ಕ್ರೀಡಾಂಗಣಗಳಲ್ಲೂ ನಾಕೌಟ್ ಪಂದ್ಯಗಳು ನಡೆಯಲಿದ್ದು, ಕ್ರೀಡಾಂಗಣಗಳ ವಿಶೇಷತೆ, ಸಾಮರ್ಥ್ಯದ ವಿವರ ಇಲ್ಲಿದೆ.

ಲುಸೈಲ್ ಕ್ರೀಡಾಂಗಣ, ಲುಸೈಲ್




ಇದು ವಿಶ್ವಕಪ್‌ನ ಅತೀ ದೊಡ್ಡ ಕ್ರೀಡಾಂಗಣ. 80 ಸಾವಿರ ಆಸನ ಸಾಮರ್ಥ್ಯ ಹೊಂದಿದ್ದು, ಫೈನಲ್ ಪಂದ್ಯ ಇದೇ ಮೈದಾನದಲ್ಲಿ ನಡೆಯಲಿದೆ. ಕ್ರೀಡಾಂಗಣ, ಅರಬ್ ದೇಶಗಳಲ್ಲಿ ಜನಪ್ರಿಯವಾಗಿರುವ ಕೈಯ್ಯಲ್ಲಿ ತಯಾರಿಸಿದ ಬಟ್ಟಲಿನ ಆಕಾರ ಹೋಲುತ್ತದೆ. ಬಿಸಿಗಾಳಿ ತಡೆಯಲು ಹಾಗೂ ಪಿಚ್ ಮೇಲೆ ಸೀಮಿತ ಸೂರ್ಯನ ಕಿರಣಗಳು ಬೀಳುವಂತೆ ಮಾಡಲು ಪಾಲಿಟೆಟ್ರಾ ಫ್ಲೋರೋ ಎಥಲೀನ್ ಎನ್ನುವ ರಾಸಾಯನಿಕ ಬಳಸಲಾಗಿದೆ. **ಆಸನ ಸಾಮರ್ಥ್ಯ: 80 ಸಾವಿರ, ಇಲ್ಲಿ ನಡೆಯುವ ಒಟ್ಟು ಪಂದ್ಯಗಳು 10.**

ಅಹಮದ್ ಬಿನ್ ಅಲಿ ಸ್ಟೇಡಿಯಂ, ಅಲ್ ವಕ್ರಾ



ಮರುಭೂಮಿ ತುತ್ತ ತುದಿಯಲ್ಲಿರುವ ಕ್ರೀಡಾಂಗಣ. ಹಿಂದೆ ಇಲ್ಲಿದ್ದ ಕ್ರೀಡಾಂಗಣವನ್ನು 2015ರಲ್ಲಿ ನೆಲಸಮಗೊಳಿಸಿ ಹೊಸ ಕ್ರೀಡಾಂಗಣ ನಿರ್ಮಿಸಲಾಗಿದೆ. ಭಾರತೀಯ ಮೂಲದ ಎಲ್ ಅಂಡ್ ಟಿ ಕಂಪನಿ ಈ ಯೋಜನೆ ಪೂರ್ಣ ಗೊಳಿಸಿದೆ. ಇದೊಂದು ಓಪನ್ ಕ್ರೀಡಾಂಗಣ. ಹವಾ ನಿಯಂತ್ರಣ (ಎಸಿ) ವ್ಯವಸ್ಥೆ ಇದ್ದು, ಪಂದ್ಯಗಳ ವೇಳೆ 26 ಡಿಗ್ರಿ ಸಮತಾಪಮಾನ ಕಾಯ್ದುಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿದೆ. **ಆಸನ ಸಾಮರ್ಥ್ಯ: 44,740, ಇಲ್ಲಿ ನಡೆಯುವ ಒಟ್ಟು ಪಂದ್ಯ 7.**

ಅಲ್ ಜನೌಬ್ ಕ್ರೀಡಾಂಗಣ, ಅಲ್ ವಕ್ರಾ



ಈ ಕ್ರೀಡಾಂಗಣದ ವಿನ್ಯಾಸ ಸಾಂಪ್ರದಾಯಿಕ ಧೌ ದೋಣಿಗಳನ್ನು ಹೋಲುತ್ತದೆ. ಕ್ರೀಡಾಂಗಣಕ್ಕೆ ಹವಾ ನಿಯಂತ್ರಣ ವ್ಯವಸ್ಥೆ ಇದ್ದು, ಮೇಲ್ಛಾವಣಿ ಸಹ ಇದೆ. ಈ ಕ್ರೀಡಾಂಗಣದ ಸಾಮರ್ಥ್ಯವನ್ನೂ ವಿಶ್ವಕಪ್ ಬಳಿಕ 20 ಸಾವಿರಕ್ಕೆ ಇಳಿಸಲಾಗುತ್ತದೆ ಎಂದು ಫಿಫಾ ಹೇಳಿದೆ. **ಆಸನ ಸಾಮರ್ಥ್ಯ: 40,000, ಇಲ್ಲಿ ನಡೆಯುವ ಒಟ್ಟು ಪಂದ್ಯ: 7.**

ಅಲ್ ಬೇತ್ ಕ್ರೀಡಾಂಗಣ, ಅಲ್ ಖೋರ್



ಈ ವಿಶ್ವಕಪ್‌ನ ಉದ್ಘಾಟನಾ ಪಂದ್ಯಕ್ಕೆ ಆತಿಥ್ಯ ವಹಿಸಲಿರುವ ಕ್ರೀಡಾಂಗಣ. ರಾಜಧಾನಿ ದೋಹಾದಿಂದ 35 ಕಿಮೀ ದೂರದಲ್ಲಿದೆ. ಕ್ರೀಡಾಂಗಣ ಕತಾರ್‌ನಲ್ಲಿ ಅಲೆಮಾರಿ ಜನರು ಬಳಸುತ್ತಿದ್ದ ಟೆಂಟ್‌ಗಳ ಆಕಾರ ಹೋಲುತ್ತದೆ. **ಆಸನ ಸಾಮರ್ಥ್ಯ: 60,000, ಇಲ್ಲಿ ನಡೆಯುವ ಒಟ್ಟು ಪಂದ್ಯ: 9.**

ಅಲ್ ಥುಮಾಮ ಕ್ರೀಡಾಂಗಣ, ದೋಹಾ


ಅರಬ್ ಪ್ರಾಂತ್ಯದಲ್ಲಿ ಬಳಸುವ ಸಾಂಪ್ರದಾಯಿಕ ನೇಯ್ದ ಟೋಪಿ 'ಗಫ್ಫಿಯಾ' ಆಕಾರದಲ್ಲಿದೆ.



ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದಲ್ಲಿರುವ ಕ್ರೀಡಾಂಗಣವನ್ನು ಫಿಫಾ ವಿಶ್ವಕಪ್‌ಗೆಂದೇ ಹೊಸದಾಗಿ ನಿರ್ಮಿಸಲಾಗಿದೆ. ವಿಶ್ವಕಪ್ ಬಳಿಕ 40 ಸಾವಿರ ಇರುವ ಆಸನ ಸಾಮರ್ಥ್ಯವನ್ನು 20 ಸಾವಿರಕ್ಕೆ ಇಳಿಸಲಾಗುತ್ತದೆ. ಹೆಚ್ಚುವರಿ ಆಸನಗಳನ್ನು ಬಡ ರಾಷ್ಟ್ರಗಳಿಗೆ ಉಡುಗೊರೆಯಾಗಿ ನೀಡಲಾಗುತ್ತದೆ. ಖಾಲಿಯಾಗುವ ಜಾಗದಲ್ಲಿ ಹೈಟೆಕ್ ಹೋಟೆಲ್ ಕಟ್ಟುವುದಾಗಿ ಆಯೋಜಕರು ಹೇಳಿದ್ದಾರೆ. **ಆಸನ ಸಾಮರ್ಥ್ಯ: 40,000, ಇಲ್ಲಿ ನಡೆಯುವ ಒಟ್ಟು ಪಂದ್ಯ: 8.**

ಖಲೀಫಾ ಕ್ರೀಡಾಂಗಣ, ಅಲ್ ರಯ್ಯನ್

ಕತಾರ್‌ನ ಅತ್ಯಂತ ಹಳೆಯ ಕ್ರೀಡಾಂಗಣ ಗಳಲ್ಲಿ ಒಂದು.



1976 ರಲ್ಲಿ ಲೋಕಾರ್ಪಣೆಗೊಂಡ ಕ್ರೀಡಾಂಗಣವು 2006ರ ಏಷ್ಯನ್ ಗೇಮ್ಸ್ ಸೇರಿ ಹಲವು ಐತಿಹಾಸಿಕ ಕ್ರೀಡಾಕೂಟಗಳಿಗೆ ಸಾಕ್ಷಿಯಾಗಿದೆ. ವಿಶ್ವಕಪ್‌ಗೆಂದೇ ಹೊಸದಾಗಿ 10,450 ಆಸನಗಳನ್ನು ಅಳವಡಿಸಲಾಗಿದೆ. **ಆಸನ ಸಾಮರ್ಥ್ಯ: 45,416, ಇಲ್ಲಿ ನಡೆಯುವ ಒಟ್ಟು ಪಂದ್ಯ: 8.**

ಎಜುಕೇಷನ್ ಸಿಟಿ ಕ್ರೀಡಾಂಗಣ, ಅಲ್ ರಯ್ಯನ್

ಅಕ್ಕಪಕ್ಕದಲ್ಲಿ ವಿವಿಗಳು ಇರುವ ಕಾರಣಕ್ಕೆ ಕ್ರೀಡಾಂಗಣಕ್ಕೆ ಈ ಹೆಸರಿಡಲಾಗಿದೆ. ಕ್ರೀಡಾಂಗಣದ ಹೊರ ವಿನ್ಯಾಸ ತ್ರಿಕೋನ ಆಕಾರದಲ್ಲಿದ್ದು, ವಜ್ರದ ರೀತಿ ಕಾಣುತ್ತದೆ. ಸೂರ್ಯನ



ಕಿರಣಗಳು ಬಿದ್ದಾಗ ಹೊಳೆಯಲಿದೆ. ಕ್ರೀಡಾಂಗಣದಲ್ಲಿ ಡಿಜಿಟಲ್ ಲೈಟ್ ಶೋ ವ್ಯವಸ್ಥೆ ಇದ್ದು, ಪ್ರಮುಖ ಆಕರ್ಷಣೆ ಎನಿಸಿದೆ. ವಿಶ್ವಕಪ್ ಬಳಿಕ ಈ ಕ್ರೀಡಾಂಗಣದ ಮೇಲ್ಭಾಗದಲ್ಲಿರುವ ಆಸನಗಳನ್ನು ಬಿಚ್ಚಿ ಬಡ ರಾಷ್ಟ್ರಗಳಿಗೆ ಉಡುಗೊರೆ ನೀಡುವುದಾಗಿ ಫಿಫಾ ಹೇಳಿದೆ. ಜಾಗತಿಕ ಸುಸ್ಥಿರತೆಯ ಮೌಲ್ಯಮಾಪನ ವ್ಯವಸ್ಥೆ (ಜಿಎಸ್ ಎಎಸ್)ಯಲ್ಲಿ ಫೈವ್‌ಸ್ಟಾರ್ ರೇಟಿಂಗ್ ಹೊಂದಿರುವ ಕ್ರೀಡಾಂಗಣವಿದು. **ಆಸನ ಸಾಮರ್ಥ್ಯ: 45,350, ಇಲ್ಲಿ ನಡೆಯುವ ಒಟ್ಟು ಪಂದ್ಯ: 8.**

ಸ್ಟೇಡಿಯಂಗೆ 974 ಎಂಬ ಹೆಸರೇಕೆ?

ಕ್ರೀಡಾಂಗಣ ನಿರ್ಮಿಸಲು 974 ಕಂಟೈನರ್ ಬಳಸಲಾಗಿದೆ. ವಿಶೇಷ ಎಂದರೆ '974' ಕತಾರ್ ದೇಶದ ಅಂತರರಾಷ್ಟ್ರೀಯ ಡಯಲಿಂಗ್ ಕೋಡ್. ಅಂದರೆ ಹೇಗೆ ಭಾರತದೊಳಗೆ ಅಥವಾ ಭಾರತದಿಂದ ಯಾವುದೇ ದೂರವಾಣಿ ಕರೆ ಮಾಡಿದರೂ +91 ಎನ್ನುವ ಡಯಲಿಂಗ್ ಕೋಡ್ ಇರುತ್ತದೆಯೋ, ಅದೇ ರೀತಿ ಕತಾರ್‌ನ ಕೋಡ್ +974 ಆಗಿದೆ. **ಆಸನ ಸಾಮರ್ಥ್ಯ: 40,000, ಇಲ್ಲಿ ನಡೆಯುವ ಒಟ್ಟು ಪಂದ್ಯಗಳು: 7.**

ಸ್ಟೇಡಿಯಂಗೆ ನೈಸರ್ಗಿಕ ಎಸಿ!

ಕತಾರ್‌ನ ಸುಡು ಬಿಸಿಲಿನಲ್ಲೂ ಈ ಕ್ರೀಡಾಂಗಣಕ್ಕೆ ಹವಾ ನಿಯಂತ್ರಣ (ಏರ್ ಕಂಡೀಷನ್) ವ್ಯವಸ್ಥೆ ಅಳವಡಿಸಿಲ್ಲ. ಕ್ರೀಡಾಂಗಣದ ಆಕಾರ ಹಾಗೂ ನಡುವೆ ಅಂತರವಿರುವ ಕಾರಣ ಉತ್ತಮ ಗಾಳಿ–ಬೆಳಕಿನ ವ್ಯವಸ್ಥೆ ಇದೆ. ಅಲ್ಲದೇ ಕ್ರೀಡಾಂಗಣ ಸಮುದ್ರದ ಪಕ್ಕದಲ್ಲಿರುವ ಕಾರಣ ತಣ್ಣನೆಯ ಗಾಳಿ ಬೀಸಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.

974 ಕಂಟೈನರ್ ಬಳಸಿ ದೋಹಾದಲ್ಲಿ ಸ್ಟೇಡಿಯಂ ನಿರ್ಮಾಣ

ಫುಟ್ಬಾಲ್ ವಿಶ್ವಕಪ್‌ನಂತಹ ಜಾಗತಿಕ ಟೂರ್ನಿಗೆ ತಾತ್ಕಾಲಿಕ ಸ್ಟೇಡಿಯಂ. ಇದು ಆಧುನಿಕ ಜಗತ್ತಿನ ಇಂಜಿನಿಯರಿಂಗ್ ಅದ್ಭುತ. ಈ ಹಿಂದೆ ಕಂಡು–ಕೇಳರಿಯದ ಸಾಹಸವೊಂದನ್ನು ಕತಾರ್ ಮಾಡಿದ್ದು, ಆ ಸಾಹಸವು ಅನಾವರಣಗೊಳ್ಳುವ ಸಮಯ ಬಂದಿದೆ. ಕತಾರ್ ರಾಜಧಾನಿ ದೋಹಾದಲ್ಲಿ 974 ಕಂಟೈನರ್‌ಗಳನ್ನು ಬಳಸಿ ಫುಟ್ಬಾಲ್ ಕ್ರೀಡಾಂಗಣವೊಂದನ್ನು ನಿರ್ಮಿಸಲಾಗಿದೆ. ವಿಶ್ವಕಪ್ ಮುಕ್ತಾಯಗೊಂಡ ಬಳಿಕ ಈ ಕ್ರೀಡಾಂಗಣವನ್ನು ಬಿಚ್ಚಿ ಬೇರೆಡೆಗೆ ಕೊಂಡೊಯ್ಯಬಹುದು. ಮತ್ಯಾವುದೋ ದೇಶದಲ್ಲಿ ಕ್ರೀಡಾಂಗಣ ನಿರ್ಮಿಸಲು ಇಂತಹ ಕಂಟೈನರ್‌ಗಳು ಬಳಕೆಯಾಗಲಿವೆ.

ಪಂದ್ಯಾವಳಿ ವೇಳಾಪಟ್ಟಿ
ಲೀಗ್ ಹಂತದ ಪಂದ್ಯಗಳು

ನ.20, ಭಾನುವಾರ
ಕತಾರ್ vs ಈಕ್ವೆಡಾರ್ (21:30)

ನ.21, ಸೋಮವಾರ
ಇಂಗ್ಲೆಂಡ್ vs ಇರಾನ್ (18:30)
ಸೆನೆಗಲ್ vs ನೆದರ್‌ಲ್ಯಾಂಡ್ (21:30)

ನ.22, ಮಂಗಳವಾರ
ಯುಎಸ್‌ಎ vs ವೇಲ್ಸ್ (00:30)
ಅರ್ಜೆಂಟಿನಾ vs ಸೌದಿ ಅರೇಬಿಯಾ (21:30)
ಡೆನ್ಮಾರ್ಕ್ vs ಟುನಿಷಿಯಾ (00:30)
ಮೆಕ್ಸಿಕೊ vs ಪೋಲೆಂಡ್ (21:30)

ನ.23, ಬುಧವಾರ
ಫ್ರಾನ್ಸ್ vs ಆಸ್ಟ್ರೇಲಿಯಾ (00:30)
ಮೊರಾಕೊ vs ಕ್ರೊವೇಷಿಯಾ (15:30)
ಜರ್ಮನಿ vs ಜಪಾನ್ (18:30)
ಸ್ಪೇನ್ vs ಕೋಸ್ಟರಿಕಾ (21:30)

ನ.24, ಗುರುವಾರ
ಬೆಲ್ಜಿಯಂ vs ಕೆನಡಾ (00:30)
ಸ್ವಿಡ್ಜರ್‌ಲ್ಯಾಂಡ್ vs ಕ್ಯಾಮರೂನ್ (15:30)
ಉರುಗ್ವೆ vs ಸೌತ್ ಕೊರಿಯಾ (18:30)
ಪೋರ್ಚುಗಲ್ vs ಘಾನಾ (21:30)

ನ.25, ಶುಕ್ರವಾರ
ಬ್ರೆಜಿಲ್ vs ಸೈಬೀರಿಯಾ (00:30)
ವೇಲ್ಸ್ vs ಇರಾನ್ (15:30)
ಕತಾರ್ vs ಸೆನೆಗಲ್ (18:30)
ನೆದರ್‌ಲ್ಯಾಂಡ್ vs ಈಕ್ವೆಡಾರ್ (21:30)

ನ.26, ಶನಿವಾರ
ಇಂಗ್ಲೆಂಡ್ vs ಯುಎಸ್‌ಎ (00:30)
ಟುನಿಷಿಯಾ vs ಆಸ್ಟ್ರೇಲಿಯಾ (15:30)
ಪೋಲೆಂಡ್ vs ಸೌದಿ ಅರೇಬಿಯಾ (18:30)
ಫ್ರಾನ್ಸ್ vs ಡೆನ್ಮಾರ್ಕ್ (21:30)

ನ.27, ಭಾನುವಾರ
ಅರ್ಜೆಂಟಿನಾ vs ಮೆಕ್ಸಿಕೊ (00:30)
ಜಪಾನ್ vs ಕೋಸ್ಟರಿಕಾ (15:30)
ಬೆಲ್ಜಿಯಂ vs ಮೊರಾಕೊ (18:30)
ಕ್ರೊವೇಷಿಯಾ vs ಕೆನಡಾ (21:30)

ನ.28, ಸೋಮವಾರ
ಸ್ಪೇನ್ vs ಜರ್ಮನಿ (00:30)
ಕ್ಯಾಮರೂನ್ vs ಸೈಬೀರಿಯಾ (15:30)
ಸೌತ್ ಕೊರಿಯಾ vs ಘಾನಾ (18:30)
ಬ್ರೆಜಿಲ್ vs ಸ್ವಿಡ್ಜರ್‌ಲ್ಯಾಂಡ್ (21:30)

ನ.29, ಮಂಗಳವಾರ
ಪೋರ್ಚುಗಲ್ vs ಉರುಗ್ವೆ (00:30)
ನೆದರ್‌ಲ್ಯಾಂಡ್ vs ಕತಾರ್ (20:30)
ಈಕ್ವೆಡಾರ್ vs ಸೆನೆಗಲ್ (20:30)

ನ.30, ಬುಧವಾರ
ವೇಲ್ಸ್ vs ಇಂಗ್ಲೆಂಡ್ (00:30)
ಇರಾನ್ vs ಯುಎಸ್‌ಎ (00:30)
ಆಸ್ಟ್ರೇಲಿಯಾ vs ಡೆನ್ಮಾರ್ಕ್ (20:30)
ಟುನಿಷಿಯಾ vs ಫ್ರಾನ್ಸ್ (20:30)

ಡಿ.1 ಗುರುವಾರ
ಪೋಲೆಂಡ್ vs ಅರ್ಜೆಂಟಿನಾ (00:30)
ಸೌದಿ ಅರೇಬಿಯಾ vs ಮೆಕ್ಸಿಕೊ (00:30)
ಕ್ರೊವೇಷಿಯಾ vs ಬೆಲ್ಜಿಯಂ (20:30)
ಕೆನಡಾ vs ಮೊರಾಕೊ (20:30)

ಡಿ.2 ಶುಕ್ರವಾರ
ಜಪಾನ್ vs ಸ್ಪೇನ್ (00:30)
ಕೋಸ್ಟರಿಕಾ vs ಜರ್ಮನಿ (00:30)
ಘಾನಾ vs ಉರುಗ್ವೆ (20:30)
ಸೌತ್ ಕೊರಿಯಾ vs ಪೋರ್ಚುಗಲ್ (20:30)

ಡಿ.3 ಶನಿವಾರ
ಸೈಬೀರಿಯಾ vs ಸ್ವಿಡ್ಜರ್‌ಲ್ಯಾಂಡ್ (00:30)
ಕ್ಯಾಮರೂನ್ vs ಬ್ರೆಜಿಲ್ (00:30)

ಗ್ರೂಪ್ 16 ಹಂತದ ಪಂದ್ಯಗಳು

ಡಿ.3 ಶನಿವಾರ
1A vs 2B (20:30)

ಡಿ.4 ಭಾನುವಾರ
1C vs 2D (00:30)
1D vs 2C (20:30)

ಡಿ.5 ಸೋಮವಾರ
1B vs 2A (00:30)
1E vs 2F (20:30)

ಡಿ.6 ಮಂಗಳವಾರ
1G vs 2H (00:30)
1F vs 2E (20:30)

ಡಿ.7 ಬುಧವಾರ
1H vs 2G (00:30)

ಕ್ವಾರ್ಟರ್ ಫೈನಲ್ ಪಂದ್ಯಗಳು

ಕ್ವಾರ್ಟರ್ ಫೈನಲ್–1 ಡಿ.9 ಶುಕ್ರವಾರ (20:30)
ಕ್ವಾರ್ಟರ್ ಫೈನಲ್–2 ಡಿ.10 ಶನಿವಾರ (00:30)
ಕ್ವಾರ್ಟರ್ ಫೈನಲ್–3 ಡಿ.10 ಶನಿವಾರ (20:30)
ಕ್ವಾರ್ಟರ್ ಫೈನಲ್–4 ಡಿ.11 ಭಾನುವಾರ (00:30)

ಸೆಮಿಫೈನಲ್ ಪಂದ್ಯಗಳು

ಸೆಮಿ ಫೈನಲ್– 1 ಡಿ.14 ಬುಧವಾರ (00:30)
ಸೆಮಿ ಫೈನಲ್– 2 ಡಿ.15 ಗುರುವಾರ (00:30)

3ನೇ ಸ್ಥಾನದ ಪ್ಲೇ ಆಫ್ ಪಂದ್ಯ

ಡಿ.17 ಶನಿವಾರ (00:30)

ಫೈನಲ್ ಪಂದ್ಯ

ಡಿ.18 ಭಾನುವಾರ (00:30)

ಮೈಸೂರು ಮಿತ್ರ ಭಾನುವಾರ 20 ನವೆಂಬರ್ 2022

ವಾರದಲ್ಲಿ ಮಡಿಕೇರಿಯ ರಸ್ತೆ ದುರಸ್ತಿ ಕಾರ್ಯ ಆರಂಭ

ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿದ ಶಾಸಕ ಅಪ್ಪಚ್ಚು ರಂಜನ್ ಹೇಳಿಕೆ



ಮಡಿಕೇರಿ,ನ.19– ಮಡಿಕೇರಿ ನಗರ ಸೇರಿದಂತೆ ಮಡಿಕೇರಿ ಕ್ಷೇತ್ರಕ್ಕೆ ಒಳಪಡುವ ರಸ್ತೆಗಳ ದುರಸ್ತಿ ಕಾರ್ಯವನ್ನು ಮುಂದಿನ ಒಂದು ವಾರದ ಒಳಗೆ ಕೈಗೆತ್ತಿಕೊಳ್ಳಲಾಗುತ್ತದೆ ಎಂದು ಶಾಸಕ ಅಪ್ಪಚ್ಚು ರಂಜನ್ ಭರವಸೆ ನೀಡಿದ್ದಾರೆ.

ನಗರದ ರಸ್ತೆಗಳ ಅವ್ಯವಸ್ಥೆಗಳ ಕುರಿತು ಸಾರ್ವಜನಿಕರಿಂದ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ನಗರಸಭೆ ಸದಸ್ಯರು ಮತ್ತು ಅಧಿಕಾರಿಗಳನ್ನು ಒಳಗೊಂಡ ತಂಡದೊಂದಿಗೆ ಅಪ್ಪಚ್ಚು ರಂಜನ್ ವಿವಿಧ ವಾರ್ಡ್‌ಗಳಿಗೆ ತೆರಳಿ ಪರಿಶೀಲನೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಅಪ್ಪಚ್ಚು ರಂಜನ್, 15ನೇ ಹಣಕಾಸು ಯೋಜನೆ ಅಡಿಯಲ್ಲಿ ರಸ್ತೆಗಳ ಅಭಿವೃದ್ಧಿಗೆ 40 ಕೋಟಿ ರೂ. ಮೀಸಲಿಡಲಾಗಿದೆ. ನಗರದ ರಸ್ತೆಗಳಿಗಾಗಿ 3 ಕೋಟಿ ರೂ.ಗಳಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆಸಲಾಗಿದ್ದು, ಕೆಲವು ಕಡೆಗಳಲ್ಲಿ ರಸ್ತೆಗಳ ಡಾಂಬರೀಕರಣ ಮತ್ತೆ ಕೆಲವು ಕಡೆ ಕಾಂಕ್ರೀಟ್ ರಸ್ತೆಗಳ ನಿರ್ಮಾಣ ಮಾಡಲಾಗುತ್ತದೆ. ಕಾಮಗಾರಿಯ ಸಂದರ್ಭ ಗುಣಮಟ್ಟ ಕಾಪಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಮಳೆಯಿಂದ ವಿಳಂಬ: ಕಳೆದ 3 ದಿನಗಳಿಂದ ಬಿಸಿಲಿನ ವಾತಾವರಣ ಕಂಡು ಬರುತ್ತಿದೆ. ಮಳೆ ಇದ್ದ ಕಾರಣದಿಂದ ರಸ್ತೆಗಳ ದುರಸ್ತಿ ಕಾರ್ಯ ನಡೆಸಲು ವಿಳಂಬವಾಗಿದೆ. ಲೋಕೋಪಯೋಗಿ ಇಲಾಖೆ ರಸ್ತೆಗಳಿಗೆ 60 ಕೋಟಿ, ಜಿಪಂ ರಸ್ತೆಗಳ ಅಭಿವೃದ್ಧಿಗೆ 30 ಕೋಟಿ ಮೀಸಲಿದೆ. ತೀವ್ರ ಮಳೆಯಿಂದ ಕಳೆದ ಸಾಲಿನಲ್ಲಿ ಕೈಗೆತ್ತಿಕೊಳ್ಳಬೇಕಿದ್ದ ರಸ್ತೆಗಳ 15 ಕೋಟಿ ರೂ.ಗಳ ಅನುದಾನವೂ ಲಭ್ಯವಿದೆ. ಮುಂದಿನ ವಾರದಿಂದ ಮಡಿಕೇರಿ ಕ್ಷೇತ್ರದ ಎಲ್ಲಾ ರಸ್ತೆಗಳ ಅಭಿವೃದ್ಧಿ ಕಾರ್ಯ ನಡೆಸಲು ಸೂಚಿಸಲಾಗಿದೆ. ಹಾವೇರಿ, ಶಿವಮೊಗ್ಗ ಕಡೆಗಳಿಂದ ನುರಿತ ಕಾರ್ಮಿಕರ 15 ತಂಡಗಳನ್ನು ಬಳಸಿಕೊಂಡು ತ್ವರಿತಗತಿಯಲ್ಲಿ ಕಾಮಗಾರಿ ನಡೆಸಲು ತಿಳಿಸಲಾಗಿದೆ ಎಂದು ಶಾಸಕ ಅಪ್ಪಚ್ಚು ರಂಜನ್ ಮಾಹಿತಿ ನೀಡಿದರು.

ಈ ಸಂದರ್ಭ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷೆ ಸವಿತಾ ರಾಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಉಮೇಶ್ ಸುಬ್ರಮಣಿ, ಪೌರಾಯುಕ್ತ ವಿಜಯ, ನಗರ ಸಭಾ ಸದಸ್ಯರಾದ ಕೆ.ಎಸ್. ರಮೇಶ್, ಮಹೇಶ್ ಜೈನಿ ಮತ್ತಿತರರು ಹಾಜರಿದ್ದರು.

ಪೌತಿ ಖಾತೆ ಆಂದೋಲನ

ಮಡಿಕೇರಿ, ನ.19– ಪೊನ್ನಂಪೇಟೆ ತಾಲೂಕು ಪೊನ್ನಂಪೇಟೆ ಹೋಬಳಿಯ ಉಪ ತಹಶೀಲ್ದಾರರು ಹಾಗೂ ಕಂದಾಯ ಪರಿವೀಕ್ಷಕರ ಅಧ್ಯಕ್ಷತೆಯಲ್ಲಿ ಕಾನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕಾನೂರು, ನಿಡುಗುಂಬ, ಬೆಕ್ಕೆಸೊಡ್ಲೂರು ಗ್ರಾಮಗಳಿಗೆ ಸಂಬಂಧಿಸಿದಂತೆ ಪೌತಿ ಖಾತೆ ಆಂದೋಲನವು ಶನಿವಾರ ನಡೆಯಿತು. ಈ ಸಂದರ್ಭದಲ್ಲಿ ಪೊನ್ನಂಪೇಟೆ ಹೋಬಳಿಯ ಗ್ರಾಮ ಲೆಕ್ಕಿಗರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಇ–ಶ್ರಮ್ ಕಾರ್ಡ್ ವಿತರಣೆ

ಮಡಿಕೇರಿ, ನ.19– ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣದ ಪ್ಲಂಬರ್, ಬಾರ್ ಬೆಂಡರ್ ಮತ್ತು ಮೇಷನ್ ಕಾರ್ಮಿಕರಿಗೆ ನೋಂದಣಿ ಹಿರಿತನ ಆಧಾರದ ಮೇಲೆ ಪ್ಲಂಬಿಂಗ್, ಬಾರ್ ಬೆಂಡಿಂಗ್ ಮತ್ತು ಮೇಷನ್ ಟೂಲ್ ಕಿಟ್‌ಗಳನ್ನು ಶನಿವಾರ ವಿತರಿಸಲಾಯಿತು ಹಾಗೂ ಇ–ಶ್ರಮ್ ಕಾರ್ಡ್‌ಗಳನ್ನು ಸಹ ವಿತರಿಸಲಾಯಿತು. ಈ ಸಂದರ್ಭದಲ್ಲಿ ಇಲಾಖೆಯ ಸಿಬ್ಬಂದಿ ಹಾಜರಿದ್ದರು.

ಡಿ.30, ಅಂಚೆ ಅದಾಲತ್

ಮಡಿಕೇರಿ, ನ.19– ಕೊಡಗು ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಡಿ. 30 ರಂದು ಮಧ್ಯಾಹ್ನ 3 ಗಂಟೆಗೆ ಅಂಚೆ ದೂರುಗಳ ಸಂಬಂಧ ಅಂಚೆ ಅದಾಲತ್ ನಡೆಯಲಿದೆ. ಅಂಚೆಗೆ ಸಂಬಂಧಿಸಿದ ದೂರುಗಳು ಇದ್ದಲ್ಲಿ ಡಿ.28 ರೊಳಗೆ ಅಂಚೆ ಅಧೀಕ್ಷಕರು, ಕೊಡಗು ವಿಭಾಗ, ಮಡಿಕೇರಿ ಇಲ್ಲಿಗೆ ಸಲ್ಲಿಸಬಹುದು ಎಂದು ಕೊಡಗು ವಿಭಾಗದ ಅಂಚೆ ಅಧೀಕ್ಷಕರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಡಿಎಸ್ ಸೇರಿದ ಬಿಜೆಪಿ, ಕಾಂಗ್ರೆಸ್ ಕಾರ್ಯಕರ್ತರು



ವಿರಾಜಪೇಟೆ,ನ19– ವಿರಾಜಪೇಟೆ ತಾಲೂಕಿನ ಚೆನ್ನಯ್ಯನಕೋಟೆಯ ಗುಡ್ಲುರು ಗ್ರಾಮದಲ್ಲಿ ನಡೆದ ಜೆಡಿಎಸ್ ಕಾರ್ಯ ಕರ್ತರ ಸಭೆಯಲ್ಲಿ ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಅವರುಗಳನ್ನು ಜೆಡಿಎಸ್ ರಾಜ್ಯ ವಕ್ತಾರ ಹಾಗೂ ಕಾರ್ಯದರ್ಶಿ ಸಂಕೇತ್ ಪೂವಯ್ಯ ಮತ್ತು ವಿರಾಜಪೇಟೆ ತಾಲೂಕು ಅಧ್ಯಕ್ಷ ಪಿ.ಎ. ಮಂಜುನಾಥ್ ಅವರುಗಳು ಪಕ್ಷದ ಬಾವುಟ ನೀಡಿ ಬರಮಾಡಿಕೊಂಡರು.

ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಪಕ್ಷದ ತಾಲೂಕು ಸಮಿತಿಯ ಕಾರ್ಯದರ್ಶಿ ಟಿ.ಆರ್.ಹರ್ಷ, ಮುಖಂಡರಾದ ಕುಲ್ಲಚಂಡ ಕಾರ್ಯಪ್ಪ ವಿ.ಸಿ.ದೇವರಾಜ್ ಗೌಡ, ಜಿಪಂ ಮಾಜಿ ಸದಸ್ಯ ಗಣೇಶ್, ಒಳಮಾಳದ ರಾಜೇಶ್, ಭವ್ಯ ಕುಮಾರಿ, ಗುಡ್ಲೂರು ಸುರೇಶ್, ವಸಂತ, ಶಿವಣ್ಣ ಸುರೇಶ್, ಮುಸ್ತಾಫ್, ಅಣ್ಣು ಮತ್ತಿತರರು ಉಪಸ್ಥಿತರಿದ್ದರು. ಪಕ್ಷಕ್ಕೆ ಸೇರ್ಪಡೆಗೊಂಡ ಕಾರ್ಯಕರ್ತರನ್ನು ಅತಿಥಿಗಳು ಸನ್ಮಾನಿಸಿ, ಗೌರವಿಸಲಾಯಿತು.

ಕೊಡವ ನಮ್ಮೆಯಲ್ಲಿ ಯೋಧರಿಗೆ ಗೌರವ ನಮನ

ಮಡಿಕೇರಿ,ನ.19– ಬಾಳುಗೋಡುವಿನ ಕೊಡವ ಸಮಾಜಗಳ ಒಕ್ಕೂಟದ ವತಿಯಿಂದ ನಡೆಯುತ್ತಿರುವ 8ನೇ ವರ್ಷದ 'ಕೊಡವ ನಮ್ಮೆ'ಯ ಮೂರನೇ ದಿನವಾದ ಶನಿವಾರ ಬಾಳುಗೋಡುವಿನ ಫೆಡರೇಷನ್ ಆಫ್ ಕೊಡವ ಸಮಾಜದಲ್ಲಿರುವ ಹುತಾತ್ಮ ಚೌಕದಲ್ಲಿ ಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು. ಮೊದಲಿಗೆ ನೇವಲ್ ಕಮಾಂಡರ್ ಚೆಕ್ಕೆರ ಮಿನ್ನು ಬೆಳ್ಯಪ್ಪ ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸಿದರು. ನಂತರ ಮಾತನಾಡಿದ ಅವರು, ನೌಕಾಪಡೆಯಲ್ಲಿ ತಮ್ಮ 35 ವರ್ಷಗಳ ಸುದೀರ್ಘ ಸೇವೆಗಳ ಅನುಭವವನ್ನು ಹಂಚಿಕೊಂಡರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಫೋರಂನ ಅಧ್ಯಕ್ಷ ಕರ್ನಲ್ ಕಂಡ್ರತಂಡ ಸುಬ್ಬಯ್ಯ ಮಾತನಾಡಿ, ಭೂ ಸೇನೆ, ವಾಯುಸೇನೆ, ನೌಕಾಸೇನೆಯಿಂದ ದೇಶದ ಜನ ನೆಮ್ಮದಿಯಿಂದ ಜೀವನ ನಡೆಸುವಂತಾಗಿದ್ದು, ಪ್ರತಿದಿನ ಯೋಧರನ್ನು ಸ್ಮರಿಸುವಂತಾಗಬೇಕು ಎಂದರು.

ಫೆಡರೇಷನ್ ಆಫ್ ಕೊಡವ ಸಮಾಜಗಳ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ವೀರ ಮರಣ ಹೊಂದಿದ ಕೊಡಗಿನ ಸೈನಿಕರ ಮಾಹಿತಿಯನ್ನು ಹುತಾತ್ಮ ಚೌಕದಲ್ಲಿ ದಾಖಲಿಸಲಾಗಿದೆ. ಪ್ರತಿ ವರ್ಷ ಯೋಧರಿಗೆ ಗೌರವ ನಮನ ಸಲ್ಲಿಸುವ ಮೂಲಕ ಸಂತಾಪ ಸೂಚಿಸಲಾಗುತ್ತಿದೆ ಎಂದರು.

ಈ ಸಂದರ್ಭ ಸಮಾಜ ಸೇವಕಿ ಚೆಕ್ಕೆರ ಚಿರಿ ಬೆಳ್ಯಪ್ಪ ಫೆಡರೇಷನ್ ಆಫ್ ಕೊಡವ ಸಮಾಜಗಳ ಉಪಾಧ್ಯಕ್ಷರುಗಳಾದ ಮಂಡುವಂಡ ಮುತ್ತಪ್ಪ, ಮಲ್ಚೀರ ಬೋಸ್ ಚಿಟ್ಟಿಯಪ್ಪ, ಮಾಳೇಟಿರ ಅಭಿಮನ್ಯು ಕುಮಾರ್, ಖಜಾಂಚಿ ಚೆರಿಯಪಂಡ ಕಾಶಿಯಪ್ಪ ನಿಕಟಪೂರ್ವ ಅಧ್ಯಕ್ಷ ಮಲ್ಲೆಂಗಡ ದಾದ ಬೆಳ್ಯಪ್ಪ ಫೆಡರೇಷನ್ ಆಫ್ ಕೊಡವ ಸಮಾಜಗಳ ಪೊಮ್ಮಕ್ಕಡ ಒಕ್ಕೂಟದ ಅಧ್ಯಕ್ಷೆ ಚೆರಿಯಪಂಡ ಇಮ್ಮಿ ಉತ್ತಪ್ಪ ಹಾಗೂ ಹಲವು ನಿವೃತ್ತ ಸೇನಾಧಿಕಾರಿಗಳು, ನಿವೃತ್ತ ಯೋಧರು ಸೇರಿದಂತೆ ಹಲವು ಕೊಡವ ಸಮಾಜದ ಅಧ್ಯಕ್ಷರು, ಸದಸ್ಯರು ಪಾಲ್ಗೊಂಡು ಹುತಾತ್ಮ ಯೋಧರಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಸಂತಾಪ ಸೂಚಿಸಿದರು.



ಹೆದ್ದಾರಿ ಅಭಿವೃದ್ಧಿ ವೇಳೆ ಮೇಲುಕೋಟೆ ವ್ಯಾಪ್ತಿ ರಸ್ತೆಗಳು ಅಧ್ವಾನ

ರಸ್ತೆ ಅಭಿವೃದ್ಧಿಯಾಗದಿದ್ದರೆ ಪ್ರತಾಪ್ ಸಿಂಹ ಮನೆ ಮುಂದೆ ಧರಣಿ

ಶಾಸಕ ಸಿ.ಎಸ್.ಪುಟ್ಟರಾಜು ಎಚ್ಚರಿಕೆ



ಪಾಂಡವಪುರ, ನ.19– ಮೈಸೂರು–ಬೆಂಗಳೂರು ಹೆದ್ದಾರಿ ಅಭಿವೃದ್ಧಿ ವೇಳೆ ಅಧ್ವಾನಗೊಂಡಿರುವ ಮೇಲುಕೋಟೆ ಕ್ಷೇತ್ರ ವ್ಯಾಪ್ತಿಯ ರಸ್ತೆಗಳನ್ನು ಅಭಿವೃದ್ಧಿ ಪಡಿಸದಿದ್ದರೇ ಸಂಸದ ಪ್ರತಾಪ್ ಸಿಂಹ ಮನೆ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಶಾಸಕ ಸಿ.ಎಸ್.ಪುಟ್ಟರಾಜು ಎಚ್ಚರಿಕೆ ನೀಡಿದರು.

ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಅಪ್ಪು ನಮನ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು–ಮೈಸೂರು ಹೆದ್ದಾರಿ ನಿರ್ಮಾಣ ವೇಳೆ ಮಣ್ಣು, ಕಲ್ಲಿನ ಕಚ್ಚಾವಸ್ತುಗಳನ್ನು ಸಾಗಾಣೆ ಮಾಡಿರುವ ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲವು ರಸ್ತೆಗಳು ಅಧ್ವಾನಗೊಂಡಿವೆ. ಲಾರಿ ತಡೆದಂತಹ ಸಂದರ್ಭ ಸಂಸದ ಪ್ರತಾಪ್ ಸಿಂಹ ನನಗೆ ಕರೆ ಮಾಡಿ ಲಾರಿ ಸಂಚಾರದಿಂದ ಹಗದೆಟ್ಟ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದಾಗಿ ಭರವಸೆ ನೀಡಿ, ಅಗ್ರಿಮೆಂಟ್ ಮಾಡಿಕೊಟ್ಟಿದ್ದರು. ಇದೀಗ ಕಾಮಗಾರಿ ಪೂರ್ಣಗೊಳ್ಳುವ ಹಂತಕ್ಕೆ ಬಂದರೂ ರಸ್ತೆಗಳನ್ನು ಅಭಿವೃದ್ಧಿಪಡಿಸಿಲ್ಲ. ನಾನು ಸಂಸದನಾಗಿದ್ದಾಗ ಮೈಸೂರು–ಬೆಂಗಳೂರು ಹೆದ್ದಾರಿ ಅಭಿವೃದ್ಧಿಪಡಿಸುವಂತೆ ಸಂಸತ್‌ನಲ್ಲಿ ಪ್ರಸ್ತಾಪಿಸಿದ್ದೆ. ವಾರದೊಳಗೆ ಹದಗೆಟ್ಟ ರಸ್ತೆಗಳನ್ನು ಅಭಿವೃದ್ಧಿಪಡಿಸದಿದ್ದರೆ ಸಂಸದ ಪ್ರತಾಸ್ ಸಿಂಹ ಮನೆ ಎದುರು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಹೆದ್ದಾರಿ ಕಾಮಗಾರಿ ಅವೈಜ್ಞಾನಿಕ: ಮೈಸೂರು–ಬೆಂಗಳೂರು ಹೆದ್ದಾರಿ ಕಾಮಗಾರಿ ಅವೈಜ್ಞಾನಿಕವಾಗಿದೆ. ಈ ಕಾಮಗಾರಿಯಿಂದ ಮಂಡ್ಯ ಜನರ ವ್ಯಾಪಾರ ವಹಿವಾಟಿಗೆ ತೊಡಕಾಗಿದೆ. ಹೆದ್ದಾರಿ ಕಾಮಗಾರಿ ಸಾಕಷ್ಟು ಕಳಪೆಯಿಂದ ಕೂಡಿದೆ. ಎಸ್.ಎಂ.ಕೃಷ್ಣ ಕಾಲದಲ್ಲಿ ನಡೆದಿದ್ದ ಬೆಂಗಳೂರು–ಮೈಸೂರು ಮುಖ್ಯರಸ್ತೆ ಗುಣಮಟ್ಟದಷ್ಟು ಈ ಕಾಮಗಾರಿ ಗುಣಮಟ್ಟವಿಲ್ಲ ಎಂದು ಕಿಡಿಕಾರಿದರು.

2023ಕ್ಕೆ ಜೆಡಿಎಸ್ ಅಧಿಕಾರಕ್ಕೆ: 2023ಕ್ಕೆ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಶಾಸಕ ಸಿ.ಎಸ್.ಪುಟ್ಟರಾಜು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಜೆಡಿಎಸ್ ಪರ ಒಲವಿದೆ ಎನ್ನುವುದಕ್ಕೆ ಕೋಲಾರದಲ್ಲಿ ನಡೆದ ಪಂಚರತ್ನ ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮವೇ ಸಾಕ್ಷಿ. ಹೀಗಾಗಿ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗುವುದನ್ನು ಯಾರಿಂದಲು ತಡೆಯಲು ಸಾಧ್ಯವಿಲ್ಲ. ಪಕ್ಷ ಬಿಟ್ಟು ಹೋಗಿದ್ದ ನಾಯಕರೆಲ್ಲ ಮತ್ತೆ ಪಕ್ಷಕ್ಕೆ ವಾಪಸ್ಸಾಗುತ್ತಿದ್ದಾರೆ. ಜಿಲ್ಲೆಯ ಏಳೂ ಕ್ಷೇತ್ರದಲ್ಲಿ ಜೆಡಿಎಸ್ ಗೆಲುವು ಸಾಧಿಸಲಿದೆ ಎಂದರು. ಗೋಷ್ಠಿಯಲ್ಲಿ ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್, ಪುರಸಭೆ ಅಧ್ಯಕ್ಷೆ ಅರ್ಚನಾ, ಸದಸ್ಯರಾದ ಶಿವಣ್ಣ, ಬಾಬು, ಚಂದ್ರ, ಶಿವಕುಮಾರ್, ಇಮ್ರಾನ್, ಕಸಾಪ ಅಧ್ಯಕ್ಷ ಪ್ರಕಾಶ್, ಎಸ್.ನಾರಾಯಣಗೌಡ ಹಾಜರಿದ್ದರು.

ನ.25ರಿಂದ 3 ದಿನ ಅಪ್ಪು ನಮನ

ನಟ ಪುನೀತ್‌ರಾಜ್‌ಕುಮಾರ್ ಅಭಿಮಾನಿಗಳ ಒತ್ತಾಸೆ ಮೇರೆಗೆ ಪಾಂಡವಪುರದ ಪಾಂಡವ ಕ್ರೀಡಾಂಗಣದಲ್ಲಿ ನ.25, 26 ಮತ್ತು 27ರಂದು 3 ದಿನಗಳ ಕಾಲ ಅಪ್ಪು ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಚಿತ್ರನಟ, ನಟಿಯರು, ಗಾಯಕರು, ಹಾಸ್ಯ ನಟರು, ಸಂಗೀತ ನಿರ್ದೇಶಕರು ಭಾಗವಹಿಸಲಿದ್ದಾರೆ ಎಂದರು.

ಅಂದು ಸಂಜೆ ಆರಂಭಗೊಳ್ಳುವ ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ.ಎಂ.ಕೃಷ್ಣೇಗೌಡರನ್ನು ನಟ ನಿಖಿಲ್ ಕುಮಾರಸ್ವಾಮಿ ಅಭಿನಂದಿಸುವರು. ನಂತರ ಹಲವು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ ಎಂದರು.

ನ.26 ರಂದು ಸಂಜೆ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ, ನ.27ರಂದು ಖ್ಯಾತ ಗಾಯಕ ವಿಜಯ್ ಪ್ರಕಾಶ್ ತಂಡದ ಗಾಯನ ಕಾರ್ಯಕ್ರಮವಿದೆ. ಅಂದು ಡಾ.ಶಿವರಾಜ್‌ಕುಮಾರ್ ನೇತೃತ್ವದಲ್ಲಿ ಡಾ.ರಾಜ್‌ಕುಮಾರ್ ಕುಟುಂಬದ ಎಲ್ಲಾ ಸದಸ್ಯರು ಪಾಲ್ಗೊಳ್ಳಲಿದ್ದಾರೆ. ಅಪ್ಪು ಪೋಸ್ಟ್ ಇರುವ ವಾಹನಗಳ ಮೂಲಕ ಕಾರ್ಯಕ್ರಮದ ಪ್ರಚಾರ ನಡೆಸಲಾಗುವುದು. ಸಾರ್ವಜನಿಕರಿಗೆ ಆಸನದ ವ್ಯವಸ್ಥೆ, ಸ್ಕೂಟರ್, ಕಾರ್‌ಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಅಪ್ಪು ಅಭಿಮಾನಿಗಳು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಪಾಲಹಳ್ಳಿಯಲ್ಲಿ 30 ಜೊತೆ ಕುಸ್ತಿ ಪಂದ್ಯಾವಳಿ

ಪಾಲಹಳ್ಳಿ, ನ.19– ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಸೋಮವಾರ ಶ್ರೀಶಂಭುಲಿಂಗೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಅದ್ಧೂರಿಯಾಗಿ ನಡೆಯಲಿದ್ದು, ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಅಲ್ಲದೇ ಜಾತ್ರೆ ಅಂಗವಾಗಿ ನ.22 ರಂದು ಮಧ್ಯಾಹ್ನ 2 ಗಂಟೆಗೆ ಶ್ರೀಶಂಭುಲಿಂಗೇಶ್ವರಸ್ವಾಮಿ ಗೆಳೆಯರ ಬಳಗದಿಂದ 30 ಜೊತೆ ಕುಸ್ತಿ ಪಂದ್ಯಾವಳಿ ನಡೆಯಲಿದ್ದು, ಈ ವೇಳೆ ವಿವಿಧ ಪಕ್ಷಗಳ ಮುಖಂಡರು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ರೈತರ ಮಕ್ಕಳು ಉನ್ನತ ಹುದ್ದೆ ಅಲಂಕರಿಸಿ



ಮಂಡ್ಯ, ನ.19– ರೈತರ ಮಕ್ಕಳು ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಹರಿಸಿ ಉನ್ನತ ಹುದ್ದೆ ಅಲಂಕರಿಸಿ ಎಂದು ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ ತಿಳಿಸಿದರು.

ತಾಲೂಕಿನ ಶ್ರೀನಿವಾಸಪುರದ ಅಮರಾವತಿ ಹೋಟೆಲ್ ಸಭಾಂಗಣದಲ್ಲಿ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಹಾಗೂ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ಮತ್ತು ನೌಕರರ ಕಲ್ಯಾಣ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಹಾಗೂ ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದ ಜಿಲ್ಲೆಯ ಹಾಲು ಉತ್ಪಾದಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಹಾಲು ಒಕ್ಕೂಟದಿಂದ ಎಂಬಿಬಿಎಸ್ ಹಾಗೂ ಕೃಷಿ ಕೋರ್ಸುಗಳು ಹಾಗೂ ಪಶು ವೈದ್ಯಕೀಯ ಕೋರ್ಸ್ ಓದುವ ಉತ್ಪಾದಕರ ಮಕ್ಕಳಿಗೆ 20 ಸಾವಿರ ಪ್ರೋತ್ಸಾಹ ಧನ ಕೊಡಲಾಗುತ್ತದೆ ಎಂದರು.

ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಬ್ಯಾಂಕುಗಳಲ್ಲಿ ವಿದ್ಯಾಸಿರಿ ಯೋಜನೆಯಡಿ ವಿದ್ಯಾಭ್ಯಾಸದ ಸಾಲ ಕೊಡಲಾಗುತ್ತದೆ. ವ್ಯಾಸಂಗದ ಅನುಕೂಲಕ್ಕಾಗಿ ನಿಗದಿತ ಸಮಯವನ್ನು ಬ್ಯಾಂಕು ನೀಡುತ್ತದೆ. ಈ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ತಮಗೆ ಬೇಡಿಕೆ ಇರುವ ಕೋರ್ಸುಗಳನ್ನು ಇಷ್ಟಪಟ್ಟು ಓದಬೇಕು ಎಂದು ಸಲಹೆ ನೀಡಿದರು.

ಗ್ರಾಮೀಣ ಪ್ರದೇಶದ ಸಹಕಾರ ಸಂಘಗಳಲ್ಲಿ ಪ್ರತಿವರ್ಷ ನಡೆಯುವ ಸಾಮಾನ್ಯ ಸಭೆಯಲ್ಲಿ ಮೂವರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸಿದಾಗ ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆ ಸಿಗುತ್ತದೆ ಎಂದರು.

ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್ ಮಾತನಾಡಿ, ಹಾಲು ಉತ್ಪಾದಕರ ಮಕ್ಕಳನ್ನು ಪ್ರೋತ್ಸಾಹಿಸಿ ಅವರ ನೆರವಿಗೆ ನಿಲ್ಲಲು ಮಂಡ್ಯ ಜಿಲ್ಲಾ ಹಾಲು ಒಕ್ಕೂಟ ರೈತರ ಬೆನ್ನೆಲುಬಾಗಿ ಕೆಲಸ ಮಾಡುತ್ತಿದೆ. ರೈತರ ಸಮಸ್ಯೆಗಳಿಗೆ ಸ್ಪಂದಿಸುವ ಯಾವುದಾದರೂ ಸಂಸ್ಥೆ ಇದೆ ಎಂದರೆ ಅದು ಮಂಡ್ಯ ಜಿಲ್ಲಾ ಹಾಲು ಒಕ್ಕೂಟ ಎಂದರು.

ರೈತ ಇಂದು ಎಲ್ಲಾ ರಂಗದಲ್ಲೂ ವಿಫಲನಾಗಿದ್ದಾನೆ. ಆಳುವ ಸರ್ಕಾರಗಳು ರೈತ ಪರ ಯೋಜನೆ ಕೊಡುತ್ತಿಲ್ಲ. ಈ ನಿಟ್ಟಿನಲ್ಲಿ ಹಾಲು ಉತ್ಪಾದಕರ ಮಕ್ಕಳು ಉತ್ತಮವಾಗಿ ಓದಿ ಉನ್ನತ ಸ್ಥಾನ ಅಲಂಕರಿಸಿ ರೈತರ ಕಷ್ಟಗಳಿಗೆ ಸ್ಪಂದಿಸುವ ಮನೋಭಾವ ಬೆಳೆಸಿಕೊಳ್ಳಿ ಎಂದರು. ಮನ್‌ಮುಲ್ ಸಿಇಓ ಡಾ.ಪಿ. ಆರ್.ಮಂಜೇಶ್, ನಿರ್ದೇಶಕರಾದ ಬಿ. ಬೋರೇಗೌಡ, ಯು.ಸಿ.ಶಿವಕುಮಾರ್, ಕೆರವಿ, ಎಸ್.ಪಿ. ಸ್ವಾಮಿ, ಎಂ.ರೂಪ, ಕೆ.ರಾಮಚಂದ್ರ ಎಚ್.ಟಿ. ಮಂಜು, ರವಿ, ಸುಜಾತ ಕೃಷ್ಣ ಹಾಜರಿದ್ದರು.

ನಾಳೆ ಅಂಚೆ ಅದಾಲತ್

ಮಂಡ್ಯ, ನ.19– ಮಂಡ್ಯ ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನ.21 ರಂದು ಬೆಳಗ್ಗೆ 11 ಗಂಟೆಗೆ ಅಂಚೆ ಅದಾಲತ್ ಏರ್ಪಡಿಸಲಾಗಿದೆ. ಅಂಚೆ ಸೇವೆಗಳ ಬಗ್ಗೆ ಕುಂದು ಕೊರತೆಗಳಿದ್ದರೆ ನ.15 ರೊಳಗೆ ಅಂಚೆ ಅಧೀಕ್ಷಕರ ಕಚೇರಿಗೆ ಲಿಖಿತ ರೂಪದಲ್ಲಿ ತಲುಪಿಸುವಂತೆ ಕೋರಲಾಗಿದೆ.

ಜವರಪ್ಪ ನಾಯಕ ನಿಧನ



ಕೆ.ಆರ್.ಪೇಟೆ, ನ.19– ತಾಪಂ ಮಾಜಿ ಅಧ್ಯಕ್ಷೆ ಜಯಲಕ್ಷ್ಮಿ ಸ್ವಾಮಿನಾಯಕ ಅವರ ಮಾವ ಹಾಗೂ ಪೂವನಹಳ್ಳಿ ಗ್ರಾಮದ ಯಜಮಾನ ಜವರಪ್ಪ ನಾಯಕ(85) ಶನಿವಾರ ನಿಧನರಾದರು.

ಮೃತರು ಪತ್ನಿ ತಾಯಮ್ಮ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನ.20 ರಂದು ಬೆಳಗ್ಗೆ 10 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಲಿತ ಮಹಿಳೆ ನೀರು ಕುಡಿದ ತೊಂಬೆ ಗೋ ಮೂತ್ರದಲ್ಲಿ ಶುದ್ಧೀಕರಣ...!

ಚಾಮರಾಜನಗರ ಬಳಿ ಘಟನೆ: ವಿಡಿಯೋ ವೈರಲ್

ಚಾಮರಾಜನಗರ, ನ.19– ಶತಶತಮಾನಗಳು ಉರುಳಿದರೂ, ದೇಶ ಎಷ್ಟು ಮುಂದುವರೆದರೂ ಕೆಲವು ಕಂದಾಚಾರಗಳು ಇನ್ನೂ ಮುಂದುವರಿದುಕೊಂಡು ಬರುತ್ತಿವೆ.

ಗ್ರಾಮದ ಸಾರ್ವಜನಿಕ ತೊಂಬೆಯಲ್ಲಿ ದಲಿತ ಮಹಿಳೆ ನೀರು ಕುಡಿದರು ಎಂಬ ಕಾರಣಕ್ಕೆ ತೊಂಬೆಯಲ್ಲಿ ಸಂಗ್ರಹವಾಗಿದ್ದ ನೀರನ್ನು ಖಾಲಿ ಮಾಡಿ, ತೊಂಬೆ ಸುತ್ತಲೂ ಗೋಮೂತ್ರ ಹಾಕಿ ಶುದ್ಧೀಕರಣ ಮಾಡಿರುವ ಘಟನೆ ತಾಲೂಕಿನ ಹೆಗ್ಗೊಠಾರ ಗ್ರಾಮದಲ್ಲಿ ಶುಕ್ರವಾರ ನಡೆದಿದ್ದು, ಇದರ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಪರಿಶಿಷ್ಟ ಜಾತಿಗೆ ಸೇರಿದ ಯುವಕನೊಬ್ಬನ ಮದುವೆ ಗ್ರಾಮದಲ್ಲಿ ನಡೆಯುತ್ತಿತ್ತು. ವಧುವಿನ ಕಡೆಯವರು ಹೆಚ್.ಡಿ. ಕೋಟೆ ತಾಲೂಕಿನ ಸರಗೂರಿನಿಂದ ಬಂದಿದ್ದರು. ಮಧ್ಯಾಹ್ನ ಊಟ ಮಾಡಿದ ಮಹಿಳೆಯೊಬ್ಬರು ಗ್ರಾಮದ ತೊಂಬೆಯ ನಲ್ಲಿಯಲ್ಲಿ ನೀರು ಕುಡಿದರು ಎನ್ನಲಾಗಿದೆ. ಇದನ್ನು ನೋಡಿದ ತೊಂಬೆಯಿದ್ದ ಬೀದಿಯವರೊಬ್ಬರು ನೀರು ಕುಡಿದ ಮಹಿಳೆಯನ್ನು ಬೈದು ನಂತರ ತೊಂಬೆಯಲ್ಲಿ ಸಂಗ್ರಹವಾಗಿದ್ದ ನೀರನ್ನು ನಲ್ಲಿಗಳ ಮೂಲಕ ಖಾಲಿ ಮಾಡಿ ಗೋ ಮೂತ್ರ ಹಾಕಿ ಸ್ವಚ್ಛಗೊಳಿಸಲಾಗಿದೆ ಎನ್ನಲಾಗಿದೆ.

ಈ ದೃಶ್ಯವನ್ನು ವ್ಯಕ್ತಿಯೊಬ್ಬರು ವಿಡಿಯೋ ಮಾಡಿ ಫೇಸ್‌ಬುಕ್‌ನಲ್ಲಿ ಹಾಕಿದ್ದು, ಇದೀಗ ಇದು ವೈರಲ್ ಆಗಿದೆ. ವಿಷಯ ತಿಳಿದ ಕಂದಾಯ ನಿರೀಕ್ಷಕ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಶನಿವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಕುರಿತು ತಹಸೀಲ್ದಾರ್ ಬಸವರಾಜು ಪ್ರತಿಕ್ರಿಯಿಸಿದ್ದು, ಹೆಗ್ಗೊಠಾರದಲ್ಲಿ ನಡೆದಿರುವ ಘಟನೆ ಬಗ್ಗೆ ವರದಿ ಬಂದಿದೆ. ಈ ಬಗ್ಗೆ ಸಂಪೂರ್ಣ ಮಾಹಿತಿ ನೀಡುವಂತೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಸೂಚಿಸಿದ್ದೇನೆ ಎಂದರು.

ನಾಳೆಯಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ನ.19– ಕಾವೇರಿ ನೀರಾವರಿ ನಿಗಮ ವತಿಯಿಂದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಬೃಹತ್ ಕಾಮಗಾರಿ ವಿಭಾಗ ಏತ ನೀರಾವರಿ ಘಟಕದ ಕೋಡಿಮೋಳೆ ಟವರ್ ಕಾಮಗಾರಿಯನ್ನು ನ.21 ಮತ್ತು 23ರಂದು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಚಂದಕವಾಡಿ ಉಪಕೇಂದ್ರದಿಂದ ಹೊರಹೊಮ್ಮುವ ಫೀಡರ್‌ಗಳಲ್ಲಿ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನ.21ರಂದು ನವೋದಯ ಫೀಡರ್‌ನ ದಡದಹಳ್ಳಿ, ದೇವರಾಜಪುರ, ವೈ.ಆರ್.ಕೆ ಫ್ಯಾಕ್ಟರಿ, ಕಾಳಿಕಾಂಭ ಕಾಲೋನಿ, ಕುಂಭೇಶ್ವರ ಕಾಲೋನಿ ಗ್ರಾಮಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 3 ಗಂಟೆಯವರೆಗೆ ಹಾಗೂ ನ.23ರಂದು ಹಿರಿಕೆರೆ ಎನ್.ಜೆ.ವೈ ಫೀಡರ್‌ನ ಹೆಬ್ಬಸೂರು, ಅರಳೀಪುರ ಗ್ರಾಮಗಳಲ್ಲಿ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್‌ನ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಂತಲಾ ಕಲಾವಿದರು ಸಂಸ್ಥೆಗೆ ಸುವರ್ಣ ಮಹೋತ್ಸವ ಸಂಭ್ರಮ

ವರ್ಷಪೂರ್ತಿ ನಾಟಕ, ಸಾಂಸ್ಕೃತಿಕ ಕಾರ್ಯಕ್ರಮ, ಇಂದು ಉದ್ಘಾಟನೆ



ಚಾಮರಾಜನಗರ, ನ.19– ನಗರದ ರಂಗ ತಂಡ ಶಾಂತಲಾ ಕಲಾವಿದರು ಸಂಸ್ಥೆ ಸುವರ್ಣ ಮಹೋತ್ಸವ ವರ್ಷಕ್ಕೆ ಕಾಲಿಟ್ಟಿದ್ದು, ಒಂದು ವರ್ಷ ಕಾಲ ಪ್ರತಿ ತಿಂಗಳೂ ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದೆ. ಇದರ ಉದ್ಘಾಟನಾ ಕಾರ್ಯಕ್ರಮ ಭಾನುವಾರ (ನ.20) ನಡೆಯಲಿದೆ ಎಂದು ಶಾಂತಲಾ ಕಲಾವಿದರು ಸಂಸ್ಥೆಯ ಟ್ರಸ್ಟಿ ಕೆ. ವೆಂಕಟರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ–ಶಾಂತಲಾ ಕಲಾವಿದರು ರಂಗ ಸಂಸ್ಥೆ ಸ್ಥಾಪನೆಯಾಗಿ 2023ರ ಅಕ್ಟೋಬರ್ 10ಕ್ಕೆ 50 ವರ್ಷ ಪೂರ್ಣಗೊಳ್ಳಲಿದೆ. ಸುವರ್ಣ ಮಹೋತ್ಸವ ವರ್ಷಾಚರಣೆ ಅಂಗವಾಗಿ ನಾಟಕ ಮತ್ತು ಇತರೆ ಸಾಂಸ್ಕೃತಿಕ ಚಟುವಟಿಕೆ ಹಮ್ಮಿಕೊಳ್ಳುತ್ತಿದ್ದೇವೆ. ಇದರ ಉದ್ಘಾಟನಾ ಕಾರ್ಯಕ್ರಮ ನ. 20 ರಂದು ನಡೆಯಲಿದೆ ಎಂದರು.

ಅಂದು ಸಂಜೆ 6ಕ್ಕೆ ನಗರದ ಜೆಎಚ್ ಪಟೇಲ್ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮವನ್ನು ಖ್ಯಾತ ರಂಗ ನಿರ್ದೇಶಕ, ಪ್ರಸನ್ನ ಉದ್ಘಾಟಿಸಲಿದ್ದಾರೆ. ಕುತೂಹಲಿ– ಸ್ಕೋಪ್ ಸಂಚಾಲಕ, ವಿಜ್ಞಾನ ಲೇಖಕ ಕೊಳ್ಳೇಗಾಲ ಶರ್ಮ, ನಿವೃತ್ತ ಸಹ ಪ್ರಾಧ್ಯಾಪಕಿ ಡಾ. ಶೀಲಾ ಕುಮಾರಿ ಅತಿಥಿಗಳಾಗಿರುತ್ತಾರೆ. ಶಾಂತಲಾ ಟ್ರಸ್ಟ್ ಅಧ್ಯಕ್ಷ ಅಬ್ರಹಾಂ ಡಿಸಿಲ್ವ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಅವರು ತಿಳಿಸಿದರು.

ಕ್ಯೂಇಡಿ ನಾಟಕ ಪ್ರಯೋಗ: ಉದ್ಘಾಟನಾ ಕಾರ್ಯಕ್ರಮ ಮುಗಿದ ಬಳಿಕ, ನವದೆಹಲಿ ವಿಜ್ಞಾನ್ ಪ್ರಸಾರ್, ಕುತೂಹಲಿ ಸ್ಕೋಪ್ ಯೋಜನೆ ಪ್ರಾಯೋಜಕತ್ವದ, ವಿಜ್ಞಾನಿ ಡಾ. ರಿಚರ್ಡ್ ಫೈನ್ಮನ್ ಜೀವನಾಧಾರಿತ ಕನ್ನಡ ನಾಟಕ ಕ್ಯೂಇಡಿ ಪ್ರಯೋಗ ನಡೆಯಲಿದೆ. ಯತೀಶ್ ಎನ್.ಕೊಳ್ಳೇಗಾಲ ನಿರ್ದೇಶಿಸಿ, ಅಭಿನಯಿಸಿದ್ದಾರೆ. ಈ ನಾಟಕಕ್ಕೆ ಉಚಿತ ಪ್ರವೇಶವಿದೆ. ರಂಗಾಸಕ್ತರು ಆಗಮಿಸಬೇಕೆಂದು ಅವರು ಮನವಿ ಮಾಡಿದರು.

ಹೀಗೆ, ಪ್ರತಿ ತಿಂಗಳೂ ಒಂದು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ, 2023ರ ಅಕ್ಟೋಬರ್–ನವೆಂಬರ್‌ನಲ್ಲಿ ಎರಡು ಅಥವಾ ಮೂರು ದಿವಸ ಹಮ್ಮಿಕೊಳ್ಳಲು ಉದ್ದೇಶಿಸಿದ್ದೇವೆ ಎಂದರು.

ಶಾಂತಲಾ ಕಲಾವಿದರು ಸಂಸ್ಥೆ 1973ರ ಅಕ್ಟೋಬರ್ 10ರಂದು ಸ್ಥಾಪನೆಯಾಯಿತು. ಹೀಗಾಗಿ 2023ರ ಅ.10ಕ್ಕೆ ನಮ್ಮ ತಂಡಕ್ಕೆ 50 ವರ್ಷ. ಚಾಮರಾಜನಗರದಂಥ ಪ್ರದೇಶಗಳಲ್ಲಿ ನಾಟಕ ಪ್ರದರ್ಶನವೆಂದರೆ ತೀವ್ರ ಕಷ್ಟಕರ. ಹಣ ಹೊಂದಿಸುವುದು ತುಂಬ ಕಷ್ಟ ಈ ನಡುವೆಯೂ ನಾವು ಛಲ ಬಿಡದೇ ಉತ್ತಮ ನಾಟಕಗಳನ್ನು ಪ್ರದರ್ಶನ ಮಾಡಿದ್ದೇವೆ. ನಮ್ಮ ತಂಡದ ಪ್ರಥಮ ನಾಟಕ; ಬದುಕ ಮನ್ನಿಸ ಪ್ರಭುವೇ;. ಟಿ.ಎನ್. ಸೀತಾರಾಮ್ ಅವರ ನಾಟಕ. ಇದನ್ನು ಸುವರ್ಣ ಸಂಭ್ರಮ ಪ್ರದರ್ಶನ ಮಾಡಬೇಕೆಂಬ ಆಸೆ ಇದೆ ಎಂದರು. ನಮ್ಮ ತಂಡ ಈವರೆಗೆ ಅಂದಾಜು 70 ರಿಂದ 80 ನಾಟಕಗಳನ್ನು ಪ್ರದರ್ಶನ ಮಾಡಿದೆ. ಅಲ್ಲದೇ ನೀನಾಸಂ ತಿರುಗಾಟ ಹಾಗೂ ಇತರೆ ತಂಡಗಳ ನಾಟಕಗಳಿಗೆ ಪ್ರಾಯೋಜಕತ್ವ ವಹಿಸಿ, ಇಲ್ಲಿಗೆ ಕರೆತಂದು ನಾಟಕ ಆಡಿಸಿದೆ ಎಂದರು.

2013 ರಲ್ಲಿ ನಮ್ಮ ಶಾಂತಲಾ ಕಲಾವಿದರು ತಂಡವನ್ನು ಟ್ರಸ್ಟ್ ಆಗಿ ನೋಂದಣಿ ಮಾಡಿಸಲಾಗಿದೆ. ನಮ್ಮ ಟ್ರಸ್ಟ್‌ಗೆ ಚಾಮರಾಜನಗರ ಅಭಿವೃದ್ಧಿ ಪ್ರಾಕಾರದವರು 26ನೆಯ ವಾರ್ಡಿನಲ್ಲಿ ಒಂದು ಸಿ.ಎ. ನಿವೇಶನವನ್ನು ಗುತ್ತಿಗೆಯ ಆಧಾರದ ಮೇಲೆ ನೀಡಿದ್ದಾರೆ. ಅಲ್ಲಿ ತೆರೆದ ರಂಗ ವೇದಿಕೆ ಸಜ್ಜು ಮಾಡಿ, ಸುವರ್ಣ ಮಹೋತ್ಸವವನ್ನು ಅಲ್ಲೇ ಮಾಡಬೇಕೆಂಬುದು ನಮ್ಮ ಅಭಿಲಾಷೆ ಎಂದರು.

ಶಾಂತಲಾ ಕಲಾವಿದರು ಟ್ರಸ್ಟ್ ನ ಅಧ್ಯಕ್ಷ ಅಬ್ರಹಾಂ ಡಿಸಿಲ್ವಾ, ಟ್ರಸ್ಟಿಗಳಾದ ಪ್ರಕಾಶ್ ಬೆಲ್ಲದ್, ಕಲಾವಿದರಾದ ನಾಗೇಶ್, ದಾಕ್ಷಾಯಿಣಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಯುವಕ ನಾಪತ್ತೆ

ಚಾಮರಾಜನಗರ, ನ.19– ತಾಲೂಕಿನ ಬಸವಾಪುರ ಗ್ರಾಮದ ನಿವಾಸಿಯಾದ ಬಸವಣ್ಣ ಎಂಬುವವರು ಕಾಣೆಯಾಗಿದ್ದು ಇವರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ 28 ವರ್ಷದ ಬಸವಣ್ಣ 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈ ಬಣ್ಣ ದುಂಡು ಮುಖ, ಕಪ್ಪು ತಲೆ ಕೂದಲು ಹೊಂದಿದ್ದು, ಕೈಯಲ್ಲಿ ಅಮ್ಮ ಎಂದು ಹಚ್ಚೆ ಇರುತ್ತದೆ. ಕನ್ನಡ ಭಾಷೆ ಮಾತನಾಡುತ್ತಾರೆ.

ಇವರ ಸುಳಿವು ದೊರೆತಲ್ಲಿ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ದೂ.ಸಂ 08226–222243, ಪೂರ್ವ ಪೊಲೀಸ್ ಠಾಣೆ ದೂ.ಸಂ. 08226–222058, ಮೊ.ಸಂ.9480804648, ಜಿಲ್ಲಾ ನಿಯಂತ್ರಣ ಕೊಠಡಿ ದೂ.ಸಂ.08226–222383 ಸಂಪರ್ಕಿಸುವಂತೆ ಪೂರ್ವ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ನಗರದಲ್ಲಿ ವಾರ್ಷಿಕ ಪೊಲೀಸ್ ಕ್ರೀಡಾಕೂಟ

ಚಾಮರಾಜನಗರ, ನ.19– ಚಾಮರಾಜನಗರ ಜಿಲ್ಲಾ ವಾರ್ಷಿಕ ಪೊಲೀಸ್ ಕ್ರೀಡಾಕೂಟವು ನ.20 ರಿಂದ 22ರವರೆಗೆ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ನಡೆಯಲಿದೆ. ನ.20ರಂದು ಬೆಳಿಗ್ಗೆ 8 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿ ಸಮಾರಂಭ ನಡೆಯಲಿದ್ದು, ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್. ಭಾರತಿ ಅವರು ಸಮಾರಂಭ ಉದ್ಘಾಟಿಸಲಿದ್ದಾರೆ.

ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಕೆ.ಎಂ. ಗಾಯತ್ರಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ನ.22ರಂದು ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಮೈಸೂರು ದಕ್ಷಿಣ ವಲಯದ ಪೊಲೀಸ್ ಮಹಾ ನಿರೀಕ್ಷಕರಾದ ಪ್ರವೀಣ್ ಮಧುಕರ್ ಪವಾರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಬಹುಮಾನ ವಿತರಣೆ ಮಾಡುವರು.

ಬಂಡೀಪುರದ ಹುಲಿ ಯೋಜನೆ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರಾದ ಡಾ.ಪಿ.ರಮೇಶ್‌ಕುಮಾರ್, ಕೊಳ್ಳೇಗಾಲ ಮಲೈಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಸಂತೋಷ್‌ಕುಮಾರ್, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರಾದ ದೀಪ ಜೆ ಕಂಟ್ರಾಕ್ಟರ್ ಅವರು ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ವಸತಿ ಶಾಲೆಗಳ ವಿದ್ಯಾರ್ಥಿಗಳು, ನೌಕರರಿಗೆ ಸಾಂಸ್ಕೃತಿಕ ಸ್ಪರ್ಧೆ

ಬೇಗೂರು(ಗುಂಡ್ಲುಪೇಟೆ), ನ.19– ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಗುಂಡ್ಲುಪೇಟೆ ತಾಲೂಕು ವಸತಿ ಶಾಲೆಗಳ ವಿದ್ಯಾರ್ಥಿಗಳು ಮತ್ತು ನೌಕರರ ತಾಲೂಕು ಮಟ್ಟದ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮವನ್ನು ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ನಂಜುಂಡೇಗೌಡ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಒತ್ತಡ ಮುಕ್ತರಾಗಲು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಅತ್ಯವಶ್ಯಕ ವಿದ್ಯಾರ್ಥಿಗಳು ಸದಾ ಕ್ರಿಯಾ ಶೀಲರಾಗಿರಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲೆ ಕವಿತಾ.ಎಸ್. ಮಾತನಾಡಿದರು. ವಸತಿ ಶಾಲೆಗಳ ಜಿಲ್ಲಾ ಸಮನ್ವಯ ಅಧಿಕಾರಿ ಮಾದೇವಪ್ರಸಾದ್ ವಿಜೇತರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಿಸಿದರು. ಶಾಲೆಯ ನಿಲಯಪಾಲಕ ಮಂಜುನಾಥ.ಹೆಚ್.ಎನ್., ಗರಗನಹಳ್ಳಿ ವಸತಿ ಶಾಲೆಯ ಪ್ರಾಂಶುಪಾಲ ಲೋಕೇಶ್, ಮೇಲುಕಾಮನಹಳ್ಳಿ ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯ ಪ್ರಾಂಶುಪಾಲ ಶಿವಕುಮಾರ್, ನಂಜುಂಡಸ್ವಾಮಿ, ತಾಲೂಕಿನ 6 ವಸತಿ ಶಾಲೆಗಳ ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಡಿ.1 ರಿಂದ ಬೆಳಗಲಿವೆ ರಿಂಗ್ ರಸ್ತೆ ದೀಪಗಳು



ಕೇಬಲ್, ಬಲ್ಬ್ ಅಳವಡಿಕೆ ಕಾರ್ಯ ಬಹುತೇಕ ಪೂರ್ಣ; ಸಂಸದ ಪ್ರತಾಪ ಸಿಂಹರಿಂದ ಕಾಮಗಾರಿ ಪ್ರಗತಿ ಪರಿಶೀಲನೆ

ಮೈಸೂರು, ನ. 19 (ಆರ್‌ಕೆ)– ಮೈಸೂರಿನ ರಿಂಗ್ ರಸ್ತೆ ದೀಪಗಳು ಡಿಸೆಂಬರ್ 1 ರಿಂದ ಬೆಳಗಲಿವೆ ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದ್ದಾರೆ.

ಇನ್ಸುಲೇಟೆಡ್ ಕೇಬಲ್ ಅಳವಡಿಸಿ ಎಲ್‌ಇಡಿ ಬಲ್ಬ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ತ್ವರಿತವಾಗಿ ಕಾರ್ಯ ಕೈಗೊಳ್ಳುವಂತೆ ಗುತ್ತಿಗೆದಾರರು ಹಾಗೂ ಮೇಲ್ವಿಚಾರಣೆ ನಡೆಸುತ್ತಿರುವ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ.


ನವೆಂಬರ್ 30ರೊಳಗೆ ಯುಜಿ ಕೇಬಲಿಂಗ್ ಮತ್ತು ಎಲ್‌ಇಡಿ ಬಲ್ಬ್ ಅಳವಡಿಸುವ ಕೆಲಸ ಮುಕ್ತಾಯಗೊಳ್ಳಲಿದ್ದು, ಡಿಸೆಂಬರ್ 1 ರಂದು ಮೈಸೂರು ರಿಂಗ್ ರಸ್ತೆ ದೀಪಗಳ ಸ್ವಿಚ್ ಆನ್ ಮಾಡುವ ಕಾರ್ಯಕ್ರಮ ಏರ್ಪಡಿಸಲಾಗುವುದು. ಅದೇ ದಿನ ರಿಂಗ್ ರಸ್ತೆಯ ಎಲ್ಲಾ ಜಂಕ್ಷನ್‌ಗಳಿಗೂ ಅಳವಡಿಸಲಿರುವ ಹೈಮಾಸ್ಟ್ ಲೈಟ್‌ಗಳಿಗೂ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ನಗರ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತರೆಡ್ಡಿ ಮತ್ತು ಅಧಿಕಾರಿಗಳೊಂದಿಗೆ ರಿಂಗ್ ರಸ್ತೆಯಲ್ಲಿ ನಡೆಯುತ್ತಿರುವ ಭೂಗತ ಕೇಬಲಿಂಗ್ ಮತ್ತು ಕಂಬಗಳಿಗೆ ವೈಯರ್, ಎಲ್‌ಇಡಿ ಬಲ್ಬ್ ಅಳವಡಿಸುವ ಕಾಮಗಾರಿಯನ್ನು ಪರಿಶೀಲಿಸಿದ ಸಂಸದರು, ನಾಳೆ (ನ.20) ಯಿಂದ ಹೆಚ್ಚು ಮಂದಿ ಕಾರ್ಮಿಕರನ್ನು ನಿಯೋಜಿಸಿ, ತ್ವರಿತವಾಗಿ ಕೆಲಸ ಮಾಡಿಸುವಂತೆ ಗುತ್ತಿಗೆದಾರ ಹಾಗೂ ನಗರ ಪಾಲಿಕೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

42.5 ಕಿ.ಮೀ. ರಿಂಗ್ ರಸ್ತೆಯ ಎರಡೂ ಬದಿಯಲ್ಲಿ ಸರ್ವೀಸ್ ರಸ್ತೆಗೆ ಹೊಂದಿಕೊಂಡಂತಿರುವ ಮೀಡಿಯನ್‌ನಲ್ಲಿ ದೀಪಗಳಿಗೆ ಅಳವಡಿಸಿದ್ದ ಕೇಬಲ್ ಅನ್ನು ಇಲಿ–ಹೆಗ್ಗಣಗಳು ತುಂಡರಿಸಿದ್ದವು. ಕೆಲವೆಡೆ ಕಳವು ಮಾಡಲಾಗಿತ್ತು. ಹೀಗಾಗಿ ಒಂದು ವರ್ಷದಿಂದ ರಿಂಗ್ ರಸ್ತೆ ಕಗ್ಗತ್ತಲಲ್ಲಿ ಮುಳುಗಿತ್ತು. ಹೊಸದಾಗಿ ಭೂಗತ ಕೇಬಲ್ ಹಾಕಿ, ಎಲ್‌ಇಡಿ ಬಲ್ಬ್ ಅಳವಡಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) 12 ಕೋಟಿ ರೂ. ಅನುದಾನ ಮಂಜೂರು ಮಾಡಿದೆ. ಆ ಅನುದಾನದಲ್ಲಿ ಕಾಮಗಾರಿ ಪೂರ್ಣಗೊಳಿಸಿ ನಂತರ ರಿಂಗ್ ರಸ್ತೆ ದೀಪಗಳನ್ನು ಅಳವಡಿಸಿ, ನಿರ್ವಹಿಸುವುದು ಹಾಗೂ ಮಾಸಿಕ ವಿದ್ಯುತ್ ಬಿಲ್ ಪಾವತಿಸುವ ಜವಾಬ್ದಾರಿಯನ್ನು ಮೈಸೂರು ಮಹಾನಗರ ಪಾಲಿಕೆಗೆ ವಹಿಸಲಾಗಿದೆ. 2014 ರಲ್ಲಿ ರಿಂಗ್ ರಸ್ತೆ ಉನ್ನತೀಕರಿಸುವಾಗ ಮುಡಾ 2135 ಕಂಬಗಳನ್ನು ಅಳವಡಿಸಿ, 4818 ಬಲ್ಬ್‌ಗಳನ್ನು ಅಳವಡಿಸಿತ್ತು. ಸರಿಯಾಗಿ ನಿರ್ವಹಣೆ ಮಾಡದ ಕಾರಣ ಕೇಬಲ್ ತುಂಡಾಗಿ ಕಳೆದ ಹಲವು ವರ್ಷಗಳಿಂದ ರಿಂಗ್ ರಸ್ತೆಯಲ್ಲಿ ಕತ್ತಲೆ ಆವರಿಸಿತ್ತು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ ಅವರು ಆಸಕ್ತಿ ವಹಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಿಂದ ಅನುದಾನ ಪಡೆದು ಕಾಮಗಾರಿಗೆ ಚಾಲನೆ ಕೊಡಿಸಿದ್ದರ ಫಲವಾಗಿ ಈಗ ರಿಂಗ್ ರಸ್ತೆಯಲ್ಲಿ ಮತ್ತೆ ಬೆಳಕು ಮೂಡುವ ದಿನ ಸಮೀಪಿಸುತ್ತಿದೆ. ಮೈಸೂರು ರಿಂಗ್ ರಸ್ತೆಯನ್ನು ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಹಿಸಲಾಗಿದೆಯಾದರೂ, ಅವರು ಕೇವಲ ರಸ್ತೆ ಮಾತ್ರ ನಿರ್ವಹಣೆ ಮಾಡುತ್ತಾರೆ. ಆದ ಕಾರಣ ಮೈಸೂರು ಮಹಾನಗರ ಪಾಲಿಕೆಗೆ ದೀಪಗಳ ನಿರ್ವಹಣೆಯನ್ನು ವಹಿಸಲಾಗಿದೆ. ದೀಪಗಳಿಲ್ಲದೆ ಕತ್ತಲೆಯಿಂದ ಕೂಡಿದ ರಿಂಗ್ ರಸ್ತೆಯಲ್ಲಿ ಸಾಕಷ್ಟು ಅಪಘಾತಗಳು ಸಂಭವಿಸುತ್ತಿದ್ದು, ಅನೈತಿಕ ಚಟುವಟಿಕೆಗಳ ತಾಣವಾಗಿದೆಯಲ್ಲದೆ ರಾತ್ರಿ ವೇಳೆ ಕೊಲೆ, ಸುಲಿಗೆ, ದರೋಡೆಯಂತಹ ಅಪರಾಧ ಕೃತ್ಯಗಳು ವ್ಯಾಪಕವಾಗಿ ನಡೆಯುತ್ತಿರುವುದರಿಂದ ಸಂಚರಿಸುವುದೇ ದುಸ್ತರವಾಗಿತ್ತು. ಸಾರ್ವಜನಿಕರು ಈ ಬಗ್ಗೆ ಆಡಳಿತ ವ್ಯವಸ್ಥೆಗೆ ಹಿಡಿಶಾಪ ಹಾಕುತ್ತಿದ್ದರು.

ಮತದಾರರ ಪಟ್ಟಿ ಪರಿಷ್ಕರಣೆ ಅಕ್ರಮ ಆರೋಪಕ್ಕೆ ತಲೆಕೆಡಿಸಿಕೊಳ್ಳುವುದಿಲ್ಲ



ಮಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮ ಆರೋಪದ ಬಗ್ಗೆ ತನಿಖೆಯಾಗಲಿದೆ. ಕಾಂಗ್ರೆಸ್‌ನವರ ಆರೋಪಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ, ಹೀಗಾಗಿ ಕಾಂಗ್ರೆಸ್ ನಾಯಕರ ಆರೋಪಕ್ಕೆ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮಂಗಳೂರಿನಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು. ವೋಟರ್ ಅಕ್ರಮ ಆರೋಪದ ಬಗ್ಗೆ ತನಿಖೆಯಾಗಲಿದೆ. ಮತದಾರರ ಗುರುತಿನ ಚೀಟಿಯಲ್ಲಿ ಸೇರ್ಪಡೆ ಮಾಡುವುದು, ಹೆಸರು ತೆಗೆಯುವುದು, ತಿದ್ದುಪಡಿ ಮಾಡುವುದನ್ನು ಚುನಾವಣಾ ಆಯೋಗ ಮಾಡುತ್ತಿರುತ್ತದೆ. ಮತದಾರರ ಪರಿಷ್ಕರಣೆಯನ್ನು ಆಯೋಗ ಪ್ರತಿವರ್ಷ ಮಾಡುತ್ತದೆ. ನಾಗರಿಕರು ವಿದೇಶಕ್ಕೆ ಹೋಗಿರುತ್ತಾರೆ, ಬೇರೆಡೆಗೆ ವಾಸ್ತವ್ಯ ವರ್ಗಾವಣೆಯಾಗಿರುತ್ತದೆ. ಎರಡೆರಡು ಕಡೆ ಹೆಸರು ನಮೂದು ಆಗಿರುತ್ತದೆ, ಆಗ ಅವರ ಗುರುತಿನ ಚೀಟಿಯ ಪರಿಷ್ಕರಣೆ ಮಾಡಬೇಕಾಗುತ್ತದೆ, ಅದರಲ್ಲೇನೂ ವಿಶೇಷವಿಲ್ಲ ಎಂದರು. ಮತದಾರರ ಪಟ್ಟಿ ಪರಿಷ್ಕರಣೆಗೆ ಕಾನೂನುಬದ್ಧವಾಗಿ ನೀಡಿದ ಕಂಪೆನಿ ಮಾಡಿರುವ ತಪ್ಪಿನ ಬಗ್ಗೆ ತನಿಖೆಯಾಗುತ್ತದೆ.

ವೋಟರ್ ಐಡಿ ಪರಿಷ್ಕರಣೆಯಲ್ಲಿ ಅಕ್ರಮ ಆರೋಪ: ಚಿಲುಮೆ ಮುಖ್ಯಸ್ಥ ರವಿಕುಮಾರ್ ಪತ್ನಿ, ಕೃಷ್ಣೇಗೌಡರ ಪತ್ನಿ ಪೊಲೀಸರ ವಶಕ್ಕೆ

ಬೆಂಗಳೂರು: ವೋಟರ್ ಐಡಿ ಪರಿಷ್ಕರಣೆಯಲ್ಲಿ ಅಕ್ರಮ ಆರೋಪಕ್ಕೆ ಸಂಬಂಧಿಸಿ 'ಚಿಲುಮೆ' ಮುಖ್ಯಸ್ಥ ರವಿಕುಮಾರ್ ಪತ್ನಿ, ಕೃಷ್ಣೇಗೌಡರ ಪತ್ನಿಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆಂದು ತಿಳಿದುಬಂದಿದೆ.

ಚಿಲುಮೆ ಸಂಸ್ಥೆ ನಿರ್ದೇಶಕಿ ಆಗಿರುವ ರವಿಕುಮಾರ್ ಪತ್ನಿ ಐಶ್ವರ್ಯ ಹಾಗೂ ಟಿ.ಬೇಗೂರು ತೋಟದ ಮನೆಗೆ ದಾಖಲಾತಿ ಸಾಗಿಸಿದ್ದ ಕೃಷ್ಣೇಗೌಡರ ಪತ್ನಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮಾಹಿತಿ ಆಧರಿಸಿ ನಿನ್ನೆ ರಾತ್ರಿ ಕಾರ್ಯಾಚರಣೆ ನಡೆಸಿದ್ದ ಹಲಸೂರು ಗೇಟ್ ಪೊಲೀಸರು ನಾಲ್ವರನ್ನು ವಶಕ್ಕೆ ಪಡೆದಿದ್ದರು. ಇಂದು ಬೆಂಗಳೂರಿನ 1ನೇ ಎಸಿಎಂಎಂ ನ್ಯಾಯಾಲಯಕ್ಕೆ ಆರೋಪಿಗಳನ್ನ ಹಾಜರುಪಡಿಸಿದ್ದಾರೆ.

ಮೈಸೂರು ವಿವಿ ಕುಲಸಚಿವರಾಗಿ ವಿ.ಆರ್.ಶೈಲಜ ನಿಯೋಜನೆ



ಮೈಸೂರು,ನ.19–ಹಿರಿಯ ಕೆಎಎಸ್ ಅಧಿಕಾರಿ ವಿ.ಆರ್.ಶೈಲಜ ಅವರನ್ನು ಮೈಸೂರು ವಿವಿ ಕುಲಸಚಿವ(ಆಡಳಿತ)ರನ್ನಾಗಿ ನಿಯೋಜಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ವಿ.ಅಶೋಕ್ ಆದೇಶಿಸಿದ್ದಾರೆ.

ಬೆಂಗಳೂರಿನ ರಾಜೀವ್ ಗಾಂಧಿ ವಸತಿ ನಿಗಮದ ಕಂದಾಯ ಕೋಶದ ಮುಖ್ಯಸ್ಥರಾಗಿ ವರ್ಗಾವಣೆ ಮಾಡಿದ್ದ ಆದೇಶವನ್ನು ಮಾರ್ಪಡಿಸಿ ಸಾರ್ವಜನಿಕ ಮತ್ತು ಆಡಳಿತಾ ತ್ಮಕ ಹಿತದೃಷ್ಟಿಯಿಂದ ಮೈಸೂರು ವಿವಿ ಕುಲಸಚಿವ (ಆಡಳಿತ) ಸ್ಥಾನಕ್ಕೆ ವರ್ಗಾವಣೆ ಮಾಡಲಾಗಿದೆ.

ನಾಳೆ ಪ್ರತಿಭಟನೆ

ಮೈಸೂರು, ನ.19– ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ ಎಂದು ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಮಿಕ ವಿಭಾಗದ ವತಿಯಿಂದ ನ.21ರಂದು ಶಾಂತಿಯುತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಅಂದು ಮಧ್ಯಾಹ್ನ 1ಕ್ಕೆ ಕಾಂತರಾಜ ಅರಸ್ ರಸ್ತೆಯಲ್ಲಿನ ಕಾರ್ಮಿಕ ಇಲಾಖೆ ಅಧಿಕಾರಿಗಳ ಕಚೇರಿ ಬಳಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಹಾಗೂ ಕಾರ್ಮಿಕ ವಿಭಾಗದ ಅಧ್ಯಕ್ಷ ಮಂಜುನಾಥ್ ಕೋಟೆ ನೇತೃತ್ವದಲ್ಲಿ ಪ್ರತಿಭಟನೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೂರು ಹಸುಗಳು ಅನುಮಾನಾಸ್ಪದ ಸಾವು

ಮೈಸೂರು, ನ.19– ಜಿಲ್ಲೆಯ ಹುಲ್ಲಹಳ್ಳಿ ಸಮೀಪದ ದುಗ್ಗಳ್ಳಿ ಗ್ರಾಮದಲ್ಲಿ ಮೇಯಲು ಬಿಟ್ಟಿದ್ದ ಮೂರು ಹಸುಗಳು ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ರೈತರಲ್ಲಿ ಆತಂಕ ಸೃಷ್ಟಿಸಿದೆ.

ಹಳಾಪುರ ಕೆಂಪಣ್ಣ ಮತ್ತು ಸಿದ್ದಪ್ಪ ಎಂಬುವರಿಗೆ ಸೇರಿದ ಹಸುಗಳು ಎನ್ನಲಾಗಿದ್ದು, ಮೇಯಲು ಬಿಟ್ಟಿದ್ದಾಗ ಇದ್ದಕ್ಕಿದ್ದಂತೆ ಹಸುಗಳು ಅಸ್ವಸ್ಥಗೊಂಡು ನರಳಾಡುತ್ತಿದ್ದನ್ನು ನೋಡಿದ ಗ್ರಾಮಸ್ಥರು ತಕ್ಷಣವೇ ವೈದ್ಯರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಕೂಡಲೇ ಸ್ಥಳಕ್ಕಾಗಮಿಸಿದ ವೈದ್ಯರು ಹಸುಗಳಿಗೆ ಔಷಧಿ ನೀಡಿ ಉಪಚರಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಮೂರು ಹಸುಗಳು ಸಾವನ್ನಪ್ಪಿವೆ.

ಶುಂಠಿ ಬೆಳೆಗೆ ಸಿಂಪಡಿಸಿದ್ದ ಔಷಧಿಯಿಂದಾಗಿ ಹಸುಗಳು ಮೃತಪಟ್ಟಿವೆ ಎಂದು ಗ್ರಾಮಸ್ಥರು ಆರೋಪಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇನ್ನು ಮುಂದೆ ಶುಂಠಿ ಬೆಳೆಗಾರರು ಔಷಧಿ ಸಿಂಪಡಿಸುವಾಗ ಎಚ್ಚರಿಕೆ ವಹಿಸುವಂತೆ ಸೂಚನೆ ನೀಡಬೇಕು. ಹಾಗೆಯೇ ಹಸುಗಳ ಸಾವಿನಿಂದಾಗಿ ಜೀವನಾಧಾರ ಕಳೆದುಕೊಂಡಿರುವ ರೈತರಿಗೆ ಸರ್ಕಾರವು ಸಹಾಯ ನೀಡಬೇಕೆಂದು ಆಗ್ರಹಿಸಿದ್ದಾರೆ.

ಸುದ್ದಿ ತಿಳಿದು ಗ್ರಾಮಕ್ಕೆ ಆಗಮಿಸಿದ ಬಿಜೆಪಿ ಗ್ರಾಮಾಂತರ ತಾಲೂಕು ಅಧ್ಯಕ್ಷ ಹೊರಳವಾಡಿ ಮಹೇಶ್, ಮೃತಪಟ್ಟ ಹಸುಗಳ ಮಾಲೀಕರಿಗೆ ಸರ್ಕಾರದಿಂದ ಬರುವ ಪರಿಹಾರವನ್ನು ಕೊಡಿಸುವ ಭರವಸೆ ನೀಡಿದ್ದಾರೆ.

'ಟಿಪ್ಪು ನಿಜ ಕನಸುಗಳು' ಇಂದು ಪ್ರಥಮ ಪ್ರದರ್ಶನ

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ರಚನೆ, ನಿರ್ದೇಶನ



ಮೈಸೂರು, ನ.19(ಪಿಎಂ)– ರಂಗಾಯಣ ನಿರ್ದೇಶಕ ಅಡ್ಡಂಡ ಸಿಕಾರ್ಯಪ್ಪ ರಚನೆ ಮತ್ತು ನಿರ್ದೇಶನದ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಕ್ಕೆ ಮೈಸೂರು ರಂಗಾಯಣ ಸಕಲ ಸಿದ್ಧತೆ ಮಾಡಿಕೊಂಡಿದ್ದು, ನಾಳೆ (ನ.20) ಸಂಜೆ 6ಕ್ಕೆ ರಂಗಾಯಣದ ಭೂಮಿಗೀತ ಸಭಾಂಗಣದಲ್ಲಿ ಪ್ರಥಮ ಪ್ರದರ್ಶನ ನಡೆಯಲಿದೆ.

ಅಲ್ಲದೆ, ನ.21, 24, 26, 27, 30, ಡಿ. ಹಾಗೂ ಡಿ.4ರಂದು ಸದರಿ ನಾಟಕವು ಸಂಜೆ 6ಕ್ಕೆ ಭೂಮಿಗೀತದಲ್ಲೇ ಪ್ರದರ್ಶನಗೊಳ್ಳಲಿದೆ. 3 ಗಂಟೆ 20 ನಿಮಿಷದ ಈ ನಾಟಕದ ಮಧ್ಯೆ 10 ನಿಮಿಷ ವಿರಾಮವಿದೆ. ಶಶಿಧರ ಅಡಪ ಅವರ ರಂಗವಿನ್ಯಾಸವಿದ್ದು, ಪ್ರಮೋದ್ ಶಿಗ್ಗಾಂವ್ ಅವರು ವಸ್ತ್ರಪರಿಕರ ವಿನ್ಯಾಸ ನೀಡಿದ್ದಾರೆ. ಸುಬ್ರಹ್ಮಣ್ಯ, ಧನಂಜಯ ಸಂಗೀತ ಸಂಯೋಜಿಸಿದ್ದು, ಮಹೇಶ್ ಕಲ್ಲತ್ತಿ ಬೆಳಕಿನ ವಿನ್ಯಾಸ ಮಾಡಿದ್ದಾರೆ.

ನಾಟಕಕ್ಕೆ ಕೆಲವು ಹಾಡುಗಳನ್ನು ಎಸ್.ರಾಮನಾಥ ಬರೆದಿದ್ದಾರೆ. ರಂಗಾಯಣ ರೆಪರ್ಟರಿಯ 15 ಕಲಾವಿದರೊಂದಿಗೆ 10 ಅತಿಥಿ ಕಲಾವಿದರು ಹಾಗೂ ಸಂಗೀತ, ರಂಗಹಿನ್ನೆಲೆಯವರು ಸೇರಿದಂತೆ ಒಟ್ಟು 30 ಕಲಾವಿದರ ತಂಡ ಪ್ರದರ್ಶನ ನೀಡಲಿದೆ.

ನಿರ್ಬಂಧ: ಪ್ರೇಕ್ಷಕರಿಗೆ ಯಾವುದೇ ಕಿರಿಕಿರಿಯಾಗದಿರಲಿ ಎಂಬ ಕಾರಣಕ್ಕೆ ನಾಳೆಯ ಪ್ರದರ್ಶನದಲ್ಲಿ ಫೋಟೋ ಮತ್ತು ವಿಡಿಯೋ ಚಿತ್ರೀಕರಣಕ್ಕೆ ನಿರ್ಬಂಧ ವಿಧಿಸಲಾಗಿದೆ. ಮಾಧ್ಯಮಗಳಿಗೂ ರಂಗಾಯಣವೇ ಫೋಟೋ ಕಳುಹಿಸಿಕೊಡಲಿದೆ ಎಂದು ರಂಗಾಯಣದ ಪ್ರಕಟಣೆ ತಿಳಿಸಿದೆ. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅಡ್ಡಂಡ ಸಿ.ಕಾರ್ಯಪ್ಪ, ನಾಟಕ ಪ್ರದರ್ಶನಕ್ಕೆ ಸಕಲ ಸಿದ್ಧತೆ ಮಾಡಿಕೊಂಡಿದ್ದೇವೆ. ಯಾವುದೇ ಸಭೆ–ಸಮಾರಂಭ ಇಲ್ಲದೇ ನೇರವಾಗಿ ನಾಟಕವು ಪ್ರದರ್ಶನ ಕಾಣಲಿದೆ. ನಾಳೆ (ನ.20) ಮತ್ತು ನಾಳಿದ್ದರ (ನ.21) ಪ್ರದರ್ಶನಗಳಿಗೆ ಎಲ್ಲಾ ಟಿಕೆಟ್‌ಗಳು ಬಿಕರಿಯಾಗಿವೆ. ಭೂಮಿಗೀತ ಸಭಾಂಗಣವು ಒಟ್ಟು 209 ಆಸನ ಸಾಮರ್ಥ್ಯ ಹೊಂದಿದೆ ಎಂದರು.

ಪ್ರಥಮ ಪ್ರದರ್ಶನಕ್ಕೆ ಸಂಬಂಧಿಸಿದಂತೆ 100 ಪಾಸ್ ವ್ಯವಸ್ಥೆ ಮಾಡಿದ್ದು, ಈ ಪಾಸ್‌ಗಳನ್ನು ಆಸಕ್ತರು, ಗಣ್ಯರಿಗೆ ನೀಡಲಾಗಿದೆ. ಉಳಿದಂತೆ 109 ಟಿಕೆಟ್‌ಗಳು ಬಿಕರಿಯಾಗಿವೆ. ಉಳಿದ ಯಾವುದೇ ಪ್ರದರ್ಶನಕ್ಕೂ ಪಾಸ್ ವ್ಯವಸ್ಥೆ ಇಲ್ಲ ಎಂದರು.

ನಾಟಕಕ್ಕೆ ತಡೆಯಾಜ್ಞೆ ?

'ಟಿಪ್ಪು ನಿಜ ಕನಸುಗಳು' ನಾಟಕ ಸಂಬಂಧ ಪರ–ವಿರೋಧ ಚರ್ಚೆ ನಡೆಯುತ್ತಿದೆ. ಈ ನಡುವೆ ಕಾನೂನು ಹೋರಾಟದ ಮೂಲಕ ಸದರಿ ನಾಟಕ ಪ್ರದರ್ಶನ ಹಾಗೂ ಕೃತಿಗೆ ತಡೆಯಾಜ್ಞೆ ತರುವುದಾಗಿ ಶಾಸಕ ತನ್ವೀರ್‌ಸೇಠ್ ಮಾಧ್ಯಮಗಳಿಗೆ ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ನಾಳೆಯ ಪ್ರಥಮ ಪ್ರದರ್ಶನದತ್ತ ಎಲ್ಲರ ಚಿತ್ತ ಮನೆ ಮಾಡಿದೆ. ಈ ಸಂಬಂಧ ತನ್ವೀರ್‌ಸೇಠ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಯತ್ನಿಸಲಾಯಿತಾದರೂ, ಅವರು ಲಭ್ಯವಾಗಲಿಲ್ಲ.

ಯುವರಾಜ ಕಾಲೇಜು ಪ್ರಾಂಶುಪಾಲರ ಬದಲಾವಣೆ ವಿರೋಧಿಸಿ

ಮೈಸೂರು ವಿವಿ ಸಂಶೋಧಕರ ಸಂಘದಿಂದ ಪ್ರತಿಭಟನೆ



ಮೈಸೂರು,ನ.19(ಪಿಎಂ)– ಮೈಸೂರು ವಿವಿ ಅಧೀನದ ಯುವರಾಜ ಕಾಲೇಜಿನ ಪ್ರಾಂಶುಪಾಲರಾದ ಪ್ರೊ ಯಶೋಧ ಅವರನ್ನು ಕಾನೂನುಬಾಹಿರವಾಗಿ ಬದಲಾವಣೆ ಮಾಡಲಾಗಿದೆ ಎಂದು ದೂರಿ, ಮೈಸೂರು ವಿವಿಯ ಸಂಶೋಧಕರ ಸಂಘದ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಮಾನಸ ಗಂಗೋತ್ರಿಯ ಗ್ರಂಥಾಲಯ ಎದುರಿನ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ದಲಿತ ಮಹಿಳೆ ಪ್ರೊಯಶೋಧ ಅವರನ್ನು ಏಕಾಏಕಿ ಪ್ರಾಂಶುಪಾಲರ ಹುದ್ದೆಯಿಂದ ಕೈಬಿಡುವ ಮೂಲಕ ಆಡಳಿತಾತ್ಮಕ ಅಸ್ಪೃಶ್ಯತೆ ಆಚರಿಸಲಾಗುತ್ತಿದೆ ಎಂದು ಆರೋಪಿಸಿದರು.

ಕಾನೂನುಬಾಹಿರವಾಗಿ ಪ್ರಾಂಶುಪಾಲರ ಹುದ್ದೆಯಿಂದ ಪ್ರೊಯಶೋಧ ಅವರನ್ನು ಏಕಾಏಕಿ ಬದಲಾಯಿಸಿ ಆ ಸ್ಥಾನಕ್ಕೆ ಅವರಿಗಿಂತಲೂ ಸೇವಾ ಕಿರಿತನವಿರುವ ಪ್ರೊದೇವರಾಜೇಗೌಡ ಅವರನ್ನು ನೇಮಿಸಲಾಗಿದೆ. ಅಲ್ಲದೆ, ಆಡಳಿತಾಧಿಕಾರಿ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳನ್ನು ಹೊರತುಪಡಿಸಿ ಉಳಿದೆಲ್ಲಾ ಆಯಕಟ್ಟಿನ ಹುದ್ದೆಗಳಿಗೆ ಪ್ರಬಲ ಜಾತಿಯವರನ್ನು ನೇಮಿಸುವ ಮೂಲಕ ಆಡಳಿತಾತ್ಮಕ ಅಸ್ಪೃಶ್ಯತೆ ಆಚರಿಸಲಾಗುತ್ತಿದೆ ಎಂದು ದೂರಿದರು.

ಪ್ರೊ. ಯಶೋಧ ಅವರ ನಿವೃತ್ತಿಗೆ ಕೇವಲ ಮೂರು ತಿಂಗಳು ಮಾತ್ರ ಇದ್ದು, ಈ ಸಂದರ್ಭದಲ್ಲಿ ಅವರನ್ನು ಪ್ರಾಂಶುಪಾಲರ ಸ್ಥಾನದಿಂದ ತೆಗೆದಿರುವುದು ಸರಿಯಲ್ಲ. ಕೂಡಲೇ ಈ ಆದೇಶ ವಾಪಸ್ ಪಡೆದು, ಯಥಾಸ್ಥಿತಿ ಕಾಯ್ದುಕೊಳ್ಳಬೇಕು ಎಂದು ಆಗ್ರಹಿಸಿದರು. ಸಂಘದ ಗೌರವಾಧ್ಯಕ್ಷ ಮಹೇಶ್ ಸೋಸ್ಲೆ, ಅಧ್ಯಕ್ಷ ನಟರಾಜ್ ಶಿವಣ್ಣ, ಕಾರ್ಯದರ್ಶಿ ಶಿವಮೂರ್ತಿ ಸೇರಿದಂತೆ ಗಂಗೋತ್ರಿ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರವಾಸದ ಹೆಸರಲ್ಲಿ ಮಂಚನೆ ಪ್ರಕರಣ: ಓಯಸಿಸ್ ಟೂರ್ಸ್ ಸ್ಪಷ್ಟನೆ

ಮೈಸೂರು,ನ.19–ಕ್ರೈಸ್ತ ಪುಣ್ಯಕ್ಷೇತ್ರಗಳ ವೀಕ್ಷಣೆಗಾಗಿ ವಿದೇಶಿ ಪ್ರವಾಸ ಆಯೋಜಿಸಿ ವಂಚಿಸಿರುವ ಆರೋಪಕ್ಕೆ ಒಳಗಾಗಿರುವ ಓಯಸಿಸ್ ಹಾಲಿಡೇ ಇಂಡಿಯಾ ಪ್ರೈ.ಲಿ.ಗೂ ತಮಗೂ ಯಾವುದೇ ಸಂಬಂಧವಿಲ್ಲವೆಂದು ಓಯಸಿಸ್ ಟೂರ್ಸ್ ಇಂಡಿಯಾ ಪ್ರೈ.ಲಿ. ಸ್ಪಷ್ಟಪಡಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಸಂಸ್ಥೆ ನಿರ್ದೇಶಕ ಜೋಸೆಫ್ ಥಾಮಸ್, ತಮ್ಮ ಸಂಸ್ಥೆಯ ಕೇಂದ್ರ ಕಚೇರಿ ನವದೆಹಲಿಯಲ್ಲಿದ್ದು, ಕಳೆದ 30 ವರ್ಷಗಳಿಂದ ರಾಷ್ಟ್ರೀಯ–ಅಂತರರಾಷ್ಟ್ರೀಯ ಮತ್ತು ಕ್ರೈಸ್ತ ಪುಣ್ಯಕ್ಷೇತ್ರಗಳ ಪ್ರವಾಸಗಳನ್ನು ಆಯೋಜಿಸುತ್ತಾ ಬಂದಿದೆ. ಮೈಸೂರಿನ ಕ್ರೈಸ್ತ ಬಾಂಧವರಿಗೆ ಅನುಕೂಲವಾಗಲೆಂದು ಇತ್ತೀಚೆಗೆ ಓಯಸಿಸ್ ಟ್ರಾವೆಲ್ ಎಕ್ಸ್‌ಪ್ರೆಸ್ ಎಂಬ ಹೆಸರಿನಲ್ಲಿ ಶಾಖೆಯನ್ನು ತೆರೆದಿದ್ದು, ಅದಕ್ಕೆ ನಿರ್ದೇಶಕರನ್ನಾಗಿ ಕ್ಯಾಪ್ಟನ್ ಗ್ಲಿಮ್‌ಸನ್ ಅವರನ್ನು ನೇಮಿಸಿದ್ದು, ಯಾರನ್ನೂ ಬಲವಂತದಿಂದ ವಿದೇಶ ಪ್ರವಾಸಕ್ಕೆ ಕರೆದೊಯ್ಯುವುದಿಲ್ಲ. ತಮ್ಮ ಸಂಸ್ಥೆಯ ಮೇಲೆ ವಿಶ್ವಾಸವಿದ್ದವರು ಪ್ರವಾಸಕ್ಕೆ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

ನ.23ರಂದು 'ಸ್ವಾಸ್ಥ್ಯಮಿತ್ರ' ಪ್ರಶಸ್ತಿ ಪ್ರದಾನ

ಮೈಸೂರು,ನ.19(ಪಿಎಂ)– ಮೈಸೂರಿನ ಸರ್ಕಾರಿ ಆಯುರ್ವೇದ ಕಾಲೇಜು ಮತ್ತು ಆರೋಗ್ಯ ಭಾರತಿ ಜಂಟಿ ಆಶ್ರಯದಲ್ಲಿ ಧನ್ವಂತರಿ ಜಯಂತಿ ಪ್ರಯುಕ್ತ ನ.23ರಂದು 'ಸ್ವಾಸ್ಥ್ಯಮಿತ್ರ' ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಸರ್ಕಾರಿಆಯುರ್ವೇದ ಕಾಲೇಜಿನಲ್ಲಿ ಅಂದು ಮಧ್ಯಾಹ್ನ 3ಕ್ಕೆ ಸಮಾರಂಭ ನಡೆಯಲಿದೆ. ಮೈಸೂರಿನ ರಾಮಕೃಷ್ಣ ಮಠದ ಅಧ್ಯಕ್ಷ ಶ್ರೀ ಸ್ವಾಮಿ ಮುಕ್ತಿದಾನಂದಾಜೀ ಸಾನ್ನಿಧ್ಯ ವಹಿಸಲಿದ್ದಾರೆ. ಆಯುರ್ವೇದ ವೈದ್ಯ ಸಂಘ ಅಧ್ಯಕ್ಷ ಡಾ.ಬಿ.ಗುರುಬಸವರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಯಾಗಿ ಸರ್ಕಾರಿ ಆಯುರ್ವೇದ ಕಾಲೇಜಿನ ಪ್ರಾಂಶುಪಾಲ ಡಾ.ಗಜಾನನ ಹೆಗಡೆ ಭಾಗವಹಿಸಲಿದ್ದಾರೆ. ಡಾ.ಪಿ.ಎನ್.ಶಶಿಧರ, ಡಾ.ಕೆ.ವಿ.ಮಮತ, ಡಾ.ಗೌರಿಶಂಕರ, ಡಾ.ಪದ್ಯಾನ ಸುಬ್ರಹ್ಮಣ್ಯ ಭಟ್ ಹಾಗೂ ಡಾ.ಬಿ.ಎಸ್.ಶ್ರೀಧರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

'ಕರುಳ ತೆಪ್ಪದ ಮೇಲೆ' ನಾಟಕ ಪ್ರದರ್ಶನ

ಮೈಸೂರು,ನ.19–ಮೈಸೂರು ಜಿಪಿಐಇಆರ್ ರಂಗ ತಂಡದ ವತಿಯಿಂದ ನಾಳೆ (ಭಾನುವಾರ) ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಖುಷ್ವಂತ್ ಸಿಂಗ್ ಅವರ 'ಟ್ರೈನ್ ಟು ಪಾಕಿಸ್ತಾನ್' ಕಾದಂಬರಿ ಆಧಾರಿತ ಕನ್ನಡ ನಾಟಕ 'ಕರುಳ ತೆಪ್ಪದ ಮೇಲೆ' ನಾಟಕ ಪ್ರದರ್ಶನವನ್ನು ಸಂಜೆ 6.30ಕ್ಕೆ ಏರ್ಪಡಿಸಲಾಗಿದೆ. **ಕನ್ನಡ ನಾಟಕ ರೂಪ:** ಚಿದಾನಂದ ಸಾಲಿ, **ಸಂಗೀತ:** ಶ್ರೀನಿವಾಸ್ ಭಟ್(ಚೀನಿ), ಹಿರಿಯ ರಂಗಕರ್ಮಿ ಮೈಮ್ ರಮೇಶ್ ಮಾರ್ಗದರ್ಶನದಲ್ಲಿ **ವಿನ್ಯಾಸ ಮತ್ತು ನಿರ್ದೇಶನ:** ಎಂ.ಪಿ.ಹರಿದತ್ತ ಅರಮನೆ ನಗರಿ.

ಇಂದು ಕನ್ನಡ ರಾಜ್ಯೋತ್ಸವ

ಮೈಸೂರು, ನ.19– ಮೈಸೂರಿನ ಶ್ರೀರಾಂಪುರ ಮಹದೇವಪುರದ ಟೋಲ್‌ಗೇಟ್ ಬಳಿ ಜೈ ಭುವನೇಶ್ವರಿ ಕನ್ನಡ ಯುವಕರ ಸಂಘದ ವತಿಯಿಂದ ನಾಳೆ(ನ.20) ಬೆಳಗ್ಗೆ 10.30ಕ್ಕೆ ಕನ್ನಡ ರಾಜ್ಯೋತ್ಸವ ಮತ್ತು ಶ್ರೀ ಕನಕದಾಸರ ಜಯಂತ್ಯೋತ್ಸವ ಏರ್ಪಡಿಸಲಾಗಿದೆ.

ಹಿರಿಯ ನಟಿ ತಬಸ್ಸುಮ್ ಹೃದಯಾಘಾತದಿಂದ ನಿಧನ



ಮುಂಬೈ: ಹಿರಿಯ ನಟಿ ತಬಸ್ಸುಮ್ ಅವರು ಶನಿವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 78 ವರ್ಷ ವಯಸ್ಸಾಗಿತ್ತು.

ಬಾಲ ಕಲಾವಿದೆಯಾಗಿ ಮತ್ತು ಜನಪ್ರಿಯ ದೂರದರ್ಶನ ಟಾಕ್ ಶೋ ಫೂಲ್ ಖಿಲೆ ಹೈ ಗುಲ್ಶನ್ ಗುಲ್ಶನ್ ನಿರೂಪಕಿಯಾಗಿ ಹೆಸರುವಾಸಿಯಾಗಿದ್ದ ತಬಸ್ಸುಮ್ ಹೃದಯಸ್ತಂಭನದ ನಂತರ ಸಾವನ್ನಪ್ಪಿದ್ದಾರೆ ಎಂದು ಅವರ ಪುತ್ರ ಹೋಶಾಂಗ್ ಗೋವಿಲ್ ತಿಳಿಸಿದ್ದಾರೆ. 1940ರ ದಶಕದ ಉತ್ತರಾರ್ಧದಲ್ಲಿ ನರ್ಗೀಸ್, ಮೇರಾ ಸುಹಾಗ್, ಮಂಜಧರ್ ಮತ್ತು ಬರಿ ಬೆಹೆನ್‌ನಂತಹ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಅವರು ದೂರದರ್ಶನದಲ್ಲಿ 1972ರಿಂದ 1993ರವರೆಗೆ ಫೂಲ್ ಖಿಲೆ ಹೈ ಗುಲ್ಶನ್ ಗುಲ್ಶನ್ ಎಂಬ ಪ್ರಸಿದ್ಧ ಟಾಕ್ ಶೋ ನಡೆಸಿಕೊಡುತ್ತಿದ್ದರು.

ಶಾಲೆಯ ಕಾರ್ಯದರ್ಶಿ ಸಹಿ ನಕಲಿ ಮಾಡಿ 40.54 ಲಕ್ಷ ವರ್ಗಾವಣೆ

ಮೈಸೂರು ಡಾ. ಎಂ.ದೇಜಮ್ಮ ಶಾಲೆ ಆಡಳಿತ ಅಧಿಕಾರಿಯಿಂದ 11 ಮಂದಿ ವಿರುದ್ಧ ದೂರು ದಾಖಲು

ಮೈಸೂರು, ನ.19–ಶಾಲೆ ನಿರ್ವಹಣೆ ವಹಿಸಿಕೊಂಡಿರುವ ಬೆಂಗಳೂರಿನ ಸಂಸ್ಥೆಗೆ ಸೇರಿದವರು ಮೈಸೂರಿನ ಬೃಂದಾವನ ಬಡಾವಣೆಯಲ್ಲಿರುವ ಡಾ. ಎಂ.ದೇಜಮ್ಮ ಮಹಾವೀರ್ ಶಾಲೆಯ ಕಾರ್ಯದರ್ಶಿಯ ಚೆಕ್‌ಗಳಿಗೆ ನಕಲಿ ಸಹಿ ಮಾಡಿ 40.54 ಲಕ್ಷ ರೂ.ಗಳನ್ನು ಬೇರೆ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿದ್ದಾರೆ ಎಂದು 11 ಮಂದಿ ವಿರುದ್ಧ ಶಾಲೆಯ ಆಡಳಿತಾಧಿಕಾರಿ ನೀಡಿದ ದೂರನ್ನು ವಿವಿ ಪುರಂ ಪೊಲೀಸರು ದಾಖಲಿಸಿದ್ದಾರೆ.

ವಿವರ: ಶ್ರೀಮತಿ ರೂಪಾ ಹುನಗುಂದ್ ಅವರು ಶಾಲೆಯ ಮುಖ್ಯಸ್ಥರು ಹಾಗೂ ಕಾರ್ಯದರ್ಶಿಯಾಗಿದ್ದು, ಇವರು ತಮ್ಮ ಶಾಲೆಯನ್ನು 2022–23ನೇ ಸಾಲಿನವರೆಗೆ ಶಾಲೆಯನ್ನು ನಡೆಸಿಕೊಂಡು ಹೋಗಲು ಮೇ 18ರಂದು ಬೆಂಗಳೂರಿನ ಜ್ಞಾನವಿರಕ್ಷಾ ಗ್ಲೋಬಲ್ ಬ್ಯುಜಿನೆಸ್ ಸೆಲ್ಯೂಷನ್ ಎಲ್‌ಎಲ್‌ಪಿ (ಜಿವಿಜಿಎಲ್‌ಎಲ್‌ಪಿ) ಅವರೊಂದಿಗೆ ಎಂಓಯು ಮಾಡಿಕೊಂಡಿದ್ದಾರೆ. ಹಾಲಿ ಅವರು ಅಮೆರಿಕಾದಲ್ಲಿ ನೆಲೆಸಿದ್ದಾರೆ ಎಂದು ಶಾಲೆಯ ಆಡಳಿತಾಧಿಕಾರಿ ಹೆಚ್.ಎನ್.ಛಾಯಾಬಾಯ್ (36) ಅವರು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಶಾಲೆಯ ಕಾರ್ಯದರ್ಶಿ ಅವರ ಗಮನಕ್ಕೆ ಬಾರದೇ ಅವರ ಕೊಠಡಿಯ ಬೀರುವಿನಲ್ಲಿಟ್ಟಿದ್ದ ಶಾಲೆಗೆ ಸಂಬಂಧಿಸಿದ ಚೆಕ್‌ಗಳನ್ನು ಜಿವಿಜಿಎಲ್‌ಎಲ್‌ಪಿ ಸಂಸ್ಥೆಯವರು ತೆಗೆದುಕೊಂಡಿದ್ದಾರೆ. ಕಾರ್ಯದರ್ಶಿ ರೂಪಾ ಹುನಗುಂದ್ ಅವರ ಸಹಿಯನ್ನು ನಕಲು ಮಾಡಿ 40,54,900 ರೂ.ಗಳನ್ನು ಬೇರೆ ಖಾತೆಗೆ ಅಕ್ರಮವಾಗಿ ವರ್ಗಾವಣೆ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿರುವ ಛಾಯಾಬಾಯ್, ಅಮೆರಿಕಾದಲ್ಲಿ ಇರುವ ಶಾಲೆಯ ಕಾರ್ಯದರ್ಶಿ ರೂಪಾ ಸೂಚನೆ ಮೇರೆಗೆ ತಾನು ದೂರು ದಾಖಲಿಸುತ್ತಿರುವುದಾಗಿ ತಿಳಿಸಿದ್ದಾರೆ. ಜಿವಿಜಿಎಲ್ ಎಲ್‌ಪಿ ಸಂಸ್ಥೆಯ ಅಧ್ಯಕ್ಷರು, ನಿರ್ದೇಶಕರಾದ ರವೀಂದ್ರನ್ ಕಿಶೋರ್, ರವೀಂದ್ರನ್ ಹ್ಯಾಂಡಿ ವೇಲಾಯುಧನ್, ಶಂಕರ್ ನಾಯರ್ ಉಷಾ, ರಾಘವೇಂದ್ರ ರಕ್ಷಾ, ಉದ್ಯೋಗಿಗಳಾದ ಬೇಬಿ, ಎಂ.ಆರ್.ಯೋಗೇಶ್, ಆನಂದ್, ಆರ್.ಜಗದೀಶ್, ಜಾರ್ಜ್ ಅಂತೋಣಿ ಅವರುಗಳನ್ನು ಆರೋಪಿಗಳಾಗಿ ತಮ್ಮ ದೂರಿನಲ್ಲಿ ಛಾಯಾಬಾಯ್ ಉಲ್ಲೇಖಿಸಿದ್ದು, ಇವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ವಿವಿ ಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ರಂಗ ಶಿಕ್ಷಣದಲ್ಲಿ ಡಾ.ಬಿ.ವಿ.ಕಾರಂತ ಸೇರಿದಂತೆ 'ಇತರೆ ಸಾಧಕ ರಂಗಕರ್ಮಿಗಳ ಪಠ್ಯ ಅಳವಡಿಸಿಲ್ಲ'

ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಬೇಸರ

ಮೈಸೂರು, ನ.19(ಎಸ್‌ಪಿಎನ್)– ಕರ್ನಾಟಕದ ಸಾಣೆಹಳ್ಳಿ ರಂಗಶಾಲೆ, ನಿನಾಸಂ ಹಾಗೂ ರಂಗಾಯಣದ ಭಾರತೀಯ ರಂಗ ಶಿಕ್ಷಣ ವಿದ್ಯಾಲಯ ಸೇರಿದಂತೆ ಇತರೆ ರಂಗ ಶಾಲೆಗಳಲ್ಲಿ ಹಿರಿಯ ರಂಗಕರ್ಮಿ ಡಾ.ಬಿ.ವಿ. ಕಾರಂತ ಸೇರಿದಂತೆ ಇತರೆ ಭಾರತೀಯ ರಂಗಕರ್ಮಿಗಳ ಸಾಧನೆ ಕುರಿತು ಪಠ್ಯ ಅಳವಡಿಸಿಲ್ಲ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಬೇಸರ ವ್ಯಕ್ತಪಡಿಸಿದರು.



ಮೈಸೂರು ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ರಂಗಾಯಣ ಮತ್ತು ಮೈಸೂರು ಕದಂಬ ರಂಗವೇದಿಕೆ ಸಹಯೋಗದೊಂದಿಗೆ ಹಿರಿಯ ರಂಗಕರ್ಮಿ ಎಲ್.ಕೃಷ್ಣಪ್ಪನವರಿಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ 'ಕೃಷ್ಣಗಾರುಡಿ' ಅಭಿನಂದನಾ ಗ್ರಂಥವನ್ನು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಬಿಡುಗಡೆಗೊಳಿಸಿದರು.

ಮೈಸೂರು ರಂಗಾಯಣ ಆವರಣದ ಬಿ.ವಿ. ಕಾರಂತ ರಂಗ ಚಾವಡಿಯಲ್ಲಿ ರಂಗಾಯಣ ಮತ್ತು ಮೈಸೂರು ಕದಂಬ ರಂಗವೇದಿಕೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಹಿರಿಯ ರಂಗಕರ್ಮಿ ಎಲ್. ಕೃಷ್ಣಪ್ಪನವರಿಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ 'ಕೃಷ್ಣಗಾರುಡಿ' ಅಭಿನಂದನಾ ಗ್ರಂಥ ಬಿಡುಗಡೆಗೊಳಿಸಿ ಅವರು, ಮಾತನಾಡಿದರು.

ಇದರಿಂದ ಭಾರತೀಯ ರಂಗಭೂಮಿ ಬೆಳೆಸಿದವರ ಬಗ್ಗೆ ಇಂದಿನ ವಿದ್ಯಾರ್ಥಿಗಳು ತಿಳಿದುಕೊಳ್ಳುವುದಾದರೂ ಹೇಗೆ?. ಕನ್ನಡ ಮತ್ತು ಭಾರತೀಯ ರಂಗಭೂಮಿಯಲ್ಲಿ ಹಿರಿಯ ರಂಗಕಲಾವಿದರ ಸಾಧನೆಗಳನ್ನು ಬಿಂಬಿಸುವ ದಾಖಲೆ ರೂಪದ ಪುಸ್ತಕಗಳು ಲಭ್ಯವಿಲ್ಲ. ಇದಕ್ಕೆ ಮೂಲ ಕಾರಣ ಕಲಾವಿದರು ದಾಖಲಾತಿ ಮಾಡುವಲ್ಲಿ ಸೋತಿದ್ದೇವೆ. ಇಲ್ಲವೇ ಹಿಂದಿನವರು ನಿರ್ಲಕ್ಷ್ಯವಹಿಸಿದ್ದಾರೆ ಎಂದರು.

ನಮ್ಮ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವ ವಿದೇಶಿ ಕಲಾವಿದರು, ನಿರ್ದೇಶಕರು ಹಾಗೂ ರಂಗಕರ್ಮಿಗಳ ಬಗ್ಗೆ ಸಾಕಷ್ಟು ಅಭಿಮಾನದಿಂದ ಹೇಳಿಕೊಂಡು ತಿರುಗಾಡುವುದಲ್ಲದೆ, ಅವರು ರಚಿಸಿದ ನಾಟಕಗಳನ್ನು ಹೆಮ್ಮೆಯಿಂದ ಯುವಕರಿಗೆ ಕಲಿಸಿ, ಪ್ರದರ್ಶಿಸಲು ಉತ್ಸುಕರಾಗುತ್ತಾರೆ. ಆದರೆ, ನಮ್ಮ ನೆಲದ ನಾಟಕಗಾರರ ಬಗ್ಗೆ ತಿಳಿದುಕೊಳ್ಳಲು ತಾತ್ಸಾರವೇಕೆ ಎಂದು ಉದಾಹರಣೆ ಸಮೇತ ಮಾಹಿತಿ ನೀಡಿದರು.

ರಂಗಭೂಮಿ, ಸಿನಿಮಾದಲ್ಲಿ ನಿರ್ದೇಶಕ, ಕಲಾವಿದರು ಮಾತ್ರ ಜನರ ಕಣ್ಣಿಗೆ ಬೀಳುತ್ತಾರೆ. ಆದರೆ, ರಂಗ ನೇಪಥ್ಯದಲ್ಲಿ ದುಡಿದ ಅನೇಕರು ಕಲಾವಿದರು ಇಂದಿಗೂ ಬೆಳಕಿಗೆ ಬಂದಿಲ್ಲ. ಕಾರಣ, ಅನೇಕ ಸಾಧಕರು ಇಂದಿಗೂ ಜನರ ನಡುವೆ ಗುರುತಿಸಿಕೊಂಡಿಲ್ಲ. ಕೆಲವರು ಅಭಿನಂದನಾ ಗ್ರಂಥ ಏಕೆ ಬೇಕು ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ನನ್ನ ಉತ್ತರ ಸಾಧಕರ ಬಗ್ಗೆ ತಿಳಿಸಿಕೊಡುವುದೇ ಈ ಅಭಿನಂದನಾ ಗ್ರಂಥಗಳು. ಇಲ್ಲವಾದರೆ, ಮುಂದಿನ ವರೆಗೆ ನಾವೇನು ಸಾಧನೆ ಮಾಡಿದ್ದೇವೆ ಎಂಬುದೇ ಪರಿಚಯವಿರುವುದಿಲ್ಲ. ಹಾಗಾಗಿ ಎಲ್.ಕೃಷ್ಣಪ್ಪ ಹೆಸರಿನಲ್ಲಿ ಕೃಷ್ಣಗಾರುಡಿ ಅಭಿನಂದನಾ ಗ್ರಂಥ ತಂದಿರುವುದು ಉತ್ತಮ ಸಂಗತಿ ಎಂದರು.

ಕನ್ನಡ ರಂಗಭೂಮಿಯಲ್ಲಿ ಅನೇಕ ನಿರ್ದೇಶಕರು ಒಳ್ಳೊಳ್ಳೆ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಅದರಲ್ಲಿ ಎಷ್ಟೋ ನಾಟಕಗಳು ಇಲ್ಲಿ ಪ್ರದರ್ಶನಗೊಂಡಿವೆ ಎಂದು ಹೇಳಲು ಒಂದು ದಾಖಲಾತಿ ಇರುವುದಿಲ್ಲ. ಹಾಗಾಗಿ ಕಲಾವಿದರು ತಮ್ಮ ಸಾಧನೆ ಬೇರೆಯವರು ತಿಳಿದುಕೊಳ್ಳಲು ದಾಖಲಾತಿ ಅವಶ್ಯ. ಭಾರತೀಯ ರಂಗಭೂಮಿಯಲ್ಲಿ ಗುರುತಿಸಿಕೊಂಡಿರುವ ಹೆಸರಾಂತ ರಂಗಕರ್ಮಿಗಳಾದ ಡಾ.ಬಿ.ವಿ.ಕಾರಂತ, ಮಹಮ್ಮದ್ ಪೀರ್, ಸುಬ್ಬಯ್ಯನಾಯ್ಡು, ನಾಗರತ್ನಮ್ಮ ಸೇರಿದಂತೆ ಇತರೆ ಸಾಧಕರ ಸಾಧನೆಗಳನ್ನು ನಾವು ದಾಖಲೆಗಳ ರೂಪದಲ್ಲಿ ತಂದರೆ, ಭಾರತೀಯ ರಂಗಭೂಮಿ ಇತಿಹಾಸ ತಿಳಿದುಕೊಳ್ಳಲು ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಈ ನಿಟ್ಟಿನಲ್ಲಿ ಹಿರಿಯ ರಂಗಕರ್ಮಿ ಎಲ್. ಕೃಷ್ಣಪ್ಪನವರು ಬೆಂಗಳೂರಿನ ರಂಗಭೂಮಿಯಲ್ಲಿ ಹಲವು ವರ್ಷಗಳಿಂದ ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಅವರಿಗೆ ದೇವರಲ್ಲಿ ಆಯುಷ್ಯ–ಆರೋಗ್ಯ ಕೊಡಲಿ ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ. ಏಕೆಂದರೆ ನಾನು ನಾಸ್ತಿಕನಲ್ಲ, ಆಸ್ತಿಕ. ಅದಕ್ಕಾಗಿ ಈ ರೀತಿ ಪ್ರಾರ್ಥಿಸುತ್ತೇನೆ. ಇತ್ತೀಚೆಗೆ ರಂಗಭೂಮಿಯಲ್ಲಿನ ಹಿರಿಯರು ನಾಸ್ತಿಕರ ಗುಂಪಿನಲ್ಲಿ ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆ. ಆದರೆ, ನಾನು ದೇವರನ್ನು ನಂಬುವ ಆಸ್ತಿಕರ ಗುಂಪಿನಲ್ಲಿ ಇರಲು ಇಷ್ಟಪಡುತ್ತೇನೆ ಎಂದು ಅಡ್ಡಂಡ ಕಾರ್ಯಪ್ಪ ಸ್ಪಷ್ಟಪಡಿಸಿದರು.

'ಕೃಷ್ಣಗಾರುಡಿ – ರಂಗಕರ್ಮಿ ಎಲ್.ಕೃಷ್ಣಪ್ಪ–75' ಅಭಿನಂದನಾ ಕೃತಿ ಬಿಡುಗಡೆಗೊಳಿಸಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ವಿ.ಶ್ರೀಧರಮೂರ್ತಿ ಮಾತನಾಡಿದರು. ಈ ವೇಳೆ ಮೈಸೂರು ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ್ ಕದಂಬ, ನಟಿ ಶ್ವೇತಾ ಶ್ರೀ ವಾತ್ಸವ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಇನ್ನಿತರರಿದ್ದರು.

ಯಾವುದೇ ಕಾರಣಕ್ಕೂ ಬಿಜೆಪಿ ಬಿಡಲ್ಲ



ಬೆಳಗಾವಿ: ಯಾವುದೇ ಕಾರಣಕ್ಕೂ ನಾನು ಬಿಜೆಪಿ ಬಿಡಲ್ಲ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ. ಬೆಳಗಾವಿ ತಾಲೂಕಿನ ಬೆಳಗುಂದಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಜೆಡಿಎಸ್ ಸೇರುತ್ತಾರೆ ಎಂಬ ಊಹಾಪೋಹಕ್ಕೆ ಪ್ರತಿಕ್ರಿಯಿಸಿದರು. ನನ್ನ ಮನಸಿಗೆ ಬೇಜಾರಾಗಿ ಒಂದು ವರ್ಷದಿಂದ ಮಾಧ್ಯಮದಿಂದ ದೂರವಿದ್ದೆ. ಅನಿವಾರ್ಯವಾಗಿ ಇಂದು ಒಂದೇ ಒಂದು ವಿಷಯ ಸ್ಪಷ್ಟಪಡಿಸುವೆ ಎಂದರು.

ಹೆಚ್.ಡಿ.ಕುಮಾರಸ್ವಾಮಿ ಜೊತೆ ನಾನು ಮಾತನಾಡಿದ್ದು ನಿಜ. ನನಗೆ ಸುಳ್ಳು ಹೇಳುವ ಚಟವಿಲ್ಲ. ದಿನನಿತ್ಯ ಕುಮಾರಸ್ವಾಮಿ ನನ್ನ ಜೊತೆ ಫೋನ್‌ನಲ್ಲಿ ಟಚ್ ಇದ್ದಾರೆ. ಆದರೆ ನಾನು ಬಿಜೆಪಿ ಬಿಡುವ ಪ್ರಶ್ನೆ ಇಲ್ಲ ಎಂದರು.

ಇಂದು ಅದ್ದೂರಿ ರಾಜ್ಯೋತ್ಸವ

ಮೈಸೂರು, ನ.19– ಕರ್ನಾಟಕ ವೀರ ಕೇಸರಿ ವೇದಿಕೆ, ದೊಡ್ಮನೆ ಅಭಿಮಾನಿಗಳ ಸೇವಾ ಟ್ರಸ್ಟ್ ಮತ್ತು ಜೈ ಭುವನೇಶ್ವರಿ ಆಟೋ ಚಾಲಕರ ಹಾಗೂ ಮಾಲೀಕರ ಸಂಘದ ಸಹಯೋಗದಲ್ಲಿ ಕೆ.ಟಿ.ಸ್ಟ್ರೀಟ್ ಗರ್ಗೇಶ್ವರಿ ಚೌಕದ ಆಟೋ ನಿಲ್ದಾಣದ ಬಳಿ ನ.20ರಂದು ಅದ್ದೂರಿ ಕನ್ನಡ ರಾಜ್ಯೋತ್ಸವ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 10.30ಕ್ಕೆ ಭುವನೇಶ್ವರಿ ದೇವಿಯ ಪ್ರತಿಷ್ಠಾಪನೆ ನಂತರ ವಿಶೇಷ ಪೂಜೆ, ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದ್ದು, ಮೇಯರ್ ಶಿವಕುಮಾರ್, ಡಿಸಿಪಿ ಪ್ರದೀಪ್ ಗುಂಟಿ, ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ ಮತ್ತಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಒಂದನೇ ಪುಟದಿಂದ

ಮತದಾನ ಹಕ್ಕಿಗೆ ಕತ್ತರಿ

ಆಯೋಗ ಒಂದು ಸಂವಿಧಾನಬದ್ಧವಾದ ಸಂಸ್ಥೆ, ಇದು ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತವಾಗಿ ಚುನಾವಣೆಯನ್ನು ನಡೆಸಬೇಕು. ಚುನಾವಣೆಯಲ್ಲಿ ಅವ್ಯವಹಾರಗಳು ನಡೆದರೆ ಅದು ಪ್ರಜಾ ಪ್ರತಿನಿಧಿಕ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ ಪ್ರಕಾರ ಶಿಕ್ಷಾರ್ಹ ಅಪರಾಧ. ಈ ಹಗರಣದಲ್ಲಿ ಅಬ್ಬೆಪಾರಿಗಳ ಮೇಲೆ ಮೊಕದ್ದಮೆ ದಾಖಲು ಮಾಡಿಕೊಂಡು ಬಂಧಿಸಿದರೆ ಅದರಿಂದ ಉಪಯೋಗ ಇಲ್ಲ ಎಂದರು. ನಾವು ದೂರು ನೀಡಿದ ನಂತರ ಕೆಲವರನ್ನು ಬಂಧಿಸಿದ್ದಾರೆ. ಈ ಬಂಧನಕ್ಕೊಳಗಾದ ಸಂಸ್ಥೆಗೂ, ಸಚಿವ ಡಾ. ಅಶ್ವತ್ಥ್‌ನಾರಾಯಣ್ ಅವರಿಗೂ ಸಂಬಂಧವಿದೆ. ಅವರ ಕಚೇರಿಯಲ್ಲೇ ಡಾ. ಅಶ್ವತ್ಥ್‌ನಾರಾಯಣ್ ಅವರ ಲೆಟರ್‌ಹೆಡ್ ಮತ್ತು ಇತರೆ ವಸ್ತುಗಳು ದೊರೆತಿವೆ.

ಮತದಾರರ ಹಕ್ಕು ಕಸಿಯುವ ಹಗರಣದಲ್ಲಿ ಈ ಸಚಿವರು ನೇರವಾಗಿ ಭಾಗಿಯಾಗಿದ್ದಾರೆ ಎಂದು ದೂರಿದರು. ಮುಖ್ಯಮಂತ್ರಿಯವರು ನಮ್ಮ ಆರೋಪಕ್ಕೆ ಸುಳ್ಳು ಉತ್ತರಗಳನ್ನು ನೀಡುತ್ತಿದ್ದಾರೆ. ಎಲ್ಲದಕ್ಕೂ ಹಿಂದಿನ ಸರ್ಕಾರ ಮಾಡಿಲ್ವಾ ಎಂದು ಕೇಳುತ್ತಿದ್ದಾರೆ.

2008 ರಿಂದ 2013ರವರೆಗೆ ಯಡಿಯೂರಪ್ಪ, ಸದಾನಂದಗೌಡ ಮತ್ತು ಜಗದೀಶ್ ಶೆಟ್ಟರ್ ಮುಖ್ಯಮಂತ್ರಿಯಾಗಿದ್ದಾಗ ನಾವು ವಿರೋಧ ಪಕ್ಷವಾಗಿ ಕೆಲವು ಪ್ರಕರಣಗಳನ್ನು ಸಿಬಿಐಗೆ ವಹಿಸುವಂತೆ ಒತ್ತಾಯ ಮಾಡಿದ್ದಕ್ಕೆ ಸಿಬಿಐ ಅನ್ನು ಕಾಂಗ್ರೆಸ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಎಂದು ಲೇವಡಿ ಮಾಡುತ್ತಿದ್ದರು. ಬಸವರಾಜ ಬೊಮ್ಮಾಯಿ ಅವರು ಒಂದು ತಪ್ಪನ್ನು ಮುಚ್ಚಿಕೊಳ್ಳಲು ನೂರು ಸುಳ್ಳುಗಳನ್ನು ಹೇಳುತ್ತಿದ್ದಾರೆ.

ನಾವು ಪೊಲೀಸರಿಗೆ ದೂರು ನೀಡಿದ್ದೇವೆ. ಕೇಂದ್ರ ಚುನಾವಣಾ ಆಯೋಗ, ರಾಜ್ಯ ಮುಖ್ಯ ಚುನಾವಣಾಧಿಕಾರಿ ಅವರಿಗೂ ದೂರು ನೀಡಿದ್ದೇವೆ. ನಾನು ಅವರ ಬಳಿ ಹೀಗೆ ಲಕ್ಷಾಂತರ ಜನ ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟಿದ್ದೀರಿ, ಇದಕ್ಕೆ ಕಾರಣ ಯಾರು? ಬಿಬಿಎಂಪಿ ಮಾಡಿರುವ ಬೂತ್ ಲೆವೆಲ್ ಆಫೀಸರ್‌ಗಳು ಯಾರೂ ಕೂಡ ಸರ್ಕಾರಿ ಅಧಿಕಾರಿಗಳಲ್ಲ, ಇವರು ಕಾನೂನಿಗೆ ವಿರುದ್ಧವಾಗಿ ಪರಿಷ್ಕರಣೆ ಮಾಡಿದ್ದಾರೆ. ಕೃಷ್ಣಪ್ಪ ರವಿಕುಮಾರ್ ಅವರ 'ಚಿಲುಮೆ' ಸಂಸ್ಥೆಯ ಮೇಲೆ ಈವರೆಗೆ ಕೇಸ್ ದಾಖಲಿಸಿ, ಅವರ ಬಂಧನ ಮಾಡಿಲ್ಲ ಏಕೆ, ಕಚೇರಿ ಸಿಬ್ಬಂದಿಗಳನ್ನು ಬಂಧಿಸಿಲ್ಲ ಏಕೆ, ಬಿಬಿಎಂಪಿ ಕಮಿಷನರ್ ಅವರ ಬಂಧನವಾಗಿಲ್ಲ ಏಕೆ, ರಾಜ್ಯ ಮುಖ್ಯಚುನಾವಣಾಧಿಕಾರಿ ಅವರು ಜಂಟಿ ಆಯುಕ್ತರ ಮೂಲಕ ತನಿಖೆ ಮಾಡಿಸುತ್ತೇನೆ ಎನ್ನುತ್ತಿದ್ದಾರೆ, ಓರ್ವ ಜಂಟಿ ಆಯುಕ್ತ ತನಗಿಂತ ಮೇಲಿನ ಅಧಿಕಾರದಲ್ಲಿ ಇರುವ ಮುಖ್ಯಮಂತ್ರಿಗಳ ಮೇಲೆ ತನಿಖೆ ಮಾಡಿ ಶಿಕ್ಷೆ ಕೊಡೋಕೆ ಆಗುತ್ತದಾ, ಇವರ ಹೇಳಿಕೆ ಎಷ್ಟು ಹಾಸ್ಯಾಸ್ಪದವಾಗಿದೆ ಅಲ್ಲವೇ, ಅದಕ್ಕೆ ನಾವು ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಮೇಲುಸ್ತುವಾರಿಯಲ್ಲಿ ಒಂದು ನ್ಯಾಯಾಂಗ ಸಮಿತಿ ರಚನೆ ಮಾಡಿ, ಅದರ ಮೂಲಕ ತನಿಖೆ ನಡೆಸಿ ಎಂದು ಒತ್ತಾಯ ಮಾಡಿದ್ದೇವೆ. ಆದರೆ ಬೊಮ್ಮಾಯಿ ಅವರು ಇದು ಆಧಾರರಹಿತ ಆರೋಪ, ಇದಕ್ಕೂ ತಮಗೂ ಸಂಬಂಧ ಇಲ್ಲ ಎನ್ನುತ್ತಾರೆ. ಇವು ಆಧಾರರಹಿತ ಆರೋಪಗಳಾಗಿದ್ದರೆ ಕೆಲವರ ಬಂಧನ ಯಾಕೆ ಆಗಿದೆ, ಮತ ಪಟ್ಟಿ ಪರಿಷ್ಕರಣೆಗೆ ನೀಡಿದ್ದ ಅನುಮತಿಯನ್ನು ರದ್ದು ಮಾಡಿದ್ದು ಯಾಕೆ, ಇಲ್ಲಿ ಸ್ಪಷ್ಟವಾಗಿ ಕಾನೂನಿನ ಉಲ್ಲಂಘನೆಯಾಗಿದೆ. ಇಷ್ಟೆಲ್ಲಾ ಆದ ಮೇಲೆ ಅವರು ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರೆಯಲು ಅರ್ಹರೇ, ಬಸವರಾಜ ಬೊಮ್ಮಾಯಿ ಅವರಿಗೆ ಕಾನೂನಿನ ಮೇಲೆ ಗೌರವ ಇದ್ದರೆ ತಕ್ಷಣ ರಾಜೀನಾಮೆ ನೀಡಬೇಕು. ಹಗರಣಗಳ ಮೇಲೆ ಹಗರಣ ಮಾಡಿ ಬಚಾವಾಗುತ್ತೇವೆ ಎಂದು ಬೊಮ್ಮಾಯಿ ಅವರು ಅಂದುಕೊಂಡಿದ್ದರೆ ಅದು ಸಾಧ್ಯವಿಲ್ಲ. ನಾವು ನೀಡಿರುವ ದೂರಿನಲ್ಲಿ ಮುಖ್ಯಮಂತ್ರಿಗಳು ಹಾಗೂ ಬಿಬಿಎಂಪಿ ಆಯುಕ್ತರ ವಿರುದ್ಧ ದೂರು ದಾಖಲಿಸಿ ಬಂಧಿಸುವಂತೆ ಒತ್ತಾಯ ಮಾಡಿದ್ದೇವೆ. ನಮ್ಮ ಪಕ್ಷದ ಹಲವು ಶಾಸಕರು ಇಂದು ಬಂದು ನಮ್ಮ ಕ್ಷೇತ್ರದಲ್ಲಿ ಯಾವ ರೀತಿ ಅನ್ಯಾಯ ಆಗಿದೆ ಎಂದು ಹೇಳಿದ್ದಾರೆ.

ಇಂದಿನಿಂದ ಫಿಫಾ ಫುಟ್ಬಾಲ್ ವಿಶ್ವಕಪ್

ಅಭಿಮಾನಿಗಳು ಸಾಕಷ್ಟು ನಿಷೇಧಗಳು ಮತ್ತು ಕಟ್ಟುನಿಟ್ಟಾದ ಮಾರ್ಗ ಸೂಚಿಗಳನ್ನು ಅನುಸರಿಸಬೇಕಾಗುತ್ತದೆ. ವಿಶ್ವಕಪ್ 2022ರ ಸಮಯದಲ್ಲಿ ಕತಾರ್‌ನಲ್ಲಿ ನಿಷೇಧಿಸಲಾದ ವಸ್ತುಗಳ ಪಟ್ಟಿ ಇಲ್ಲಿದೆ. ಯಾವುದೇ ಅಭಿಮಾನಿಗಳು ಲೈಂಗಿಕ ಆಟಿಕೆಗಳ ಜೊತೆಗೂಡಿ ಸಿಕ್ಕಿಬಿದ್ದರೆ, ಭಾರೀ ದಂಡ ಅಥವಾ ಜೈಲು ಶಿಕ್ಷೆಯಾಗಬಹುದು. ಈ ವಸ್ತುಗಳನ್ನು ಕತಾರ್‌ಗೆ ಸಾಗಿಸಲು ಅನುಮತಿಸಲಾಗುವುದಿಲ್ಲ. ನೀವು ಹಂದಿ ಮಾಂಸ ಭಕ್ಷಕರಾಗಿದ್ದರೆ ಕತಾರ್‌ನಲ್ಲಿ ಅದು ಸಿಗುವುದಿಲ್ಲ. ಕತಾರ್ ಇಸ್ಲಾಮಿಕ್ ದೇಶವಾಗಿರುವುದರಿಂದ ಹಂದಿಮಾಂಸವನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಇದೇ ವೇಳೆ ಬೇರೆ ಧರ್ಮದ ಧರ್ಮ ಗ್ರಂಥಗಳಿಗೂ ನಿಷೇಧ ಹೇರಿದೆ. ಇನ್ನು ಇ-ಸಿಗರೇಟ್‌ಗಳಿಗೂ ನಿಷೇಧವಿದೆ. ದೋಹಾದಲ್ಲಿ ಬಂದಿಳಿಯುವ ಸಂದರ್ಶಕರೊಂದಿಗೆ ಡ್ಯೂಟಿ-ಫ್ರೀ ಆಲ್ಕೋಹಾಲ್ ಅನ್ನು ಸಾಗಿಸಲು ಅನುಮತಿಸಿಲ್ಲ. ಪಂದ್ಯದ ಮೊದಲು ಮತ್ತು ನಂತರ ಬಿಯರ್ ಅನ್ನು ಇನ್ನೂ ಸೇವಿಸಲು ಅನುಮತಿಸಲಾಗಿತ್ತು ಆದರೆ, ನವೆಂಬರ್ 18ರಂದು ನಿರ್ಧಾರವನ್ನು ರದ್ದುಗೊಳಿಸಿತು.

ನ್ಯಾಯಾಂಗ ತನಿಖೆ ಅನಗತ್ಯ

ಮಾಡುತ್ತಿದ್ದಾರೆ ಎಂದು ದೂರಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ಪೊಲೀಸರೇ ತನಿಖೆ ಮಾಡುತ್ತಿದ್ದಾರೆ. ಅವರಿಂದಲೇ ತನಿಖೆ ನಡೆಯಲಿದೆ. ಕಾಂಗ್ರೆಸ್‌ನವರು ಎಲ್ಲದಕ್ಕೂ ಹೈಕೋರ್ಟ್ ನ್ಯಾಯಮೂರ್ತಿಯಿಂದ ತನಿಖೆ ನಡೆಸಬೇಕು ಎಂದು ಹೇಳುತ್ತಾರೆ. ಅವರು ಅಧಿಕಾರದಲ್ಲಿದ್ದಾಗ, ಹಗರಣದ ಆರೋಪ ಎದುರಾದ ಸಂದರ್ಭದಲ್ಲಿ ನ್ಯಾಯಾಧೀಶರನ್ನು ನೇಮಕ ಮಾಡಿ, ವಿಚಾರಣೆಯಿಂದ ಪಾರಾಗುತ್ತಿದ್ದರು. ಈ ಹಗರಣವನ್ನು ಪೊಲೀಸರೇ ತನಿಖೆ ನಡೆಸಿ, ತ್ವರಿತಗತಿಯಲ್ಲಿ ಪೂರ್ಣಗೊಳಿಸಲಿದ್ದಾರೆ ಎಂದರು.

ಗುಜರಾತ್ ಉದ್ಯಮಿ ಆರೋಪ

ಜಮೀನಿನಲ್ಲಿ ತಾನು ಕ್ವಾರೆ ನಡೆಸುತ್ತಿದ್ದು, ಕೆಲ ಸ್ಥಳೀಯ ಜನರು ತೊಂದರೆ ನೀಡಿದ್ದರಿಂದ ಸಮಸ್ಯೆ ಬಗೆಹರಿಸಿಕೊಡುವಂತೆ ಶಾಸಕ ಪುಟ್ಟರಂಗಶೆಟ್ಟಿ ಅವರನ್ನು ಸಂಪರ್ಕಿಸಿದಾಗ ಅವರು ಹೊರ ರಾಜ್ಯದವರಾದ ನೀವು ಇಲ್ಲಿ ಗಣಿಗಾರಿಕೆ ನಡೆಸಲು ಸ್ಥಳೀಯ ಜನರು ಬಿಡುವುದಿಲ್ಲ. ಹೀಗಾಗಿ ನನಗೇ ಕ್ವಾರಿಯನ್ನು ಮಾರಾಟ ಮಾಡಿಬಿಡಿ ಎಂದು ಕೇಳಿದರು. ನಂತರ ಕ್ವಾರಿಗೆ 12.50 ಕೋಟಿ ರೂ. ಬೆಲೆ ನಿಗದಿಪಡಿಸಿ 1 ಕೋಟಿ ರೂ. ಮುಂಗಡವಾಗಿ ನೀಡಿ, ಆರು ತಿಂಗಳೊಳಗೆ ಕ್ರಯ ಮಾಡಿಕೊಳ್ಳುವುದಾಗಿ ತಿಳಿಸಿದ್ದರು ಎಂದು ಕಮಲೇಶ್ ವಿವರಿಸಿದರು.

ಆದರೆ ಕಾನೂನುಬದ್ಧವಾಗಿ ಸಂಪೂರ್ಣ ಹಣ ನೀಡಿ ಜಮೀನನ್ನು ಕ್ರಯ ಮಾಡಿಕೊಳ್ಳದೇ ಏಕಾಏಕಿ ಫೆಬ್ರವರಿ ತಿಂಗಳಿನಿಂದ ಕ್ವಾರಿಯಲ್ಲಿ ಕೆಲಸ ಆರಂಭಿಸಿ, ತಿಂಗಳಿಗೆ ನೂರಾರು ಮೀಟರ್ ಕಲ್ಲು ತೆಗೆಯುತ್ತಿದ್ದರು. ಈ ಬಗ್ಗೆ ತಾನು ಪ್ರಶ್ನಿಸಿದಾಗ ಪುಟ್ಟರಂಗಶೆಟ್ಟಿ ಅವರ ಅಳಿಯ ರಾಮಚಂದ್ರ ಹಾಗೂ ಅವರ ಪಾಲುದಾರ ಶಾಂತ ಕುಮಾರ್ ನನ್ನನ್ನು ವಕೀಲರ ಕಚೇರಿಗೆ ಕರೆಸಿಕೊಂಡು ಜೆರಾಕ್ಸ್ ಮಾಡಿಕೊಳ್ಳುವುದಾಗಿ ಕ್ರಯದ ಕರಾರು ಪತ್ರವನ್ನು ಪಡೆದು, ಅದನ್ನು ವಾಪಸ್ ಕೊಡದೇ ಧಮ್ಕಿ ಹಾಕಿದ್ದಾರೆ. ನಂತರ 2.54 ಕೋಟಿ ಹಣವನ್ನು ನನಗೆ ನೀಡಿದ್ದು, ಒಟ್ಟಾರೆ 3.54 ಕೋಟಿ ರೂ. ಮಾತ್ರ ಕೊಟ್ಟು ಉಳಿದ 9 ಕೋಟಿ ಕೊಡದೇ ವಂಚಿಸಿದ್ದಾರೆ. ಅಲ್ಲದೇ ಉಳಿದ ಹಣ ಕೊಟ್ಟು ಕಾನೂನುಬದ್ಧವಾಗಿ ಜಮೀನನ್ನು ನೋಂದಣಿ ಮಾಡಿಸಿಕೊಳ್ಳಿ ಎಂದು ಹೇಳಿದರೆ ಕೊಲೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಆರೋಪಿಸಿದರು. ಈ ವಿಚಾರವಾಗಿ ತಾನು ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರೆ, ಪುಟ್ಟರಂಗಶೆಟ್ಟಿ ಅಳಿಯ ತನ್ನ ಪಾಲುದಾರ ಶಾಂತಕುಮಾರ್ ಮೂಲಕ ನನ್ನ ಮತ್ತು ನನ್ನ ಪತ್ನಿ ವಿರುದ್ಧ ಜಾತಿ ನಿಂದನೆ ದೂರನ್ನು ಅದೇ ಠಾಣೆಯಲ್ಲಿ ದಾಖಲಿಸಿದ್ದಾರೆ. ಶಾಸಕರ ವಿರುದ್ಧ ದೂರು ನೀಡಿದರೂ ಪೊಲೀಸರು ಸ್ವೀಕರಿಸುತ್ತಿಲ್ಲ. ಹೀಗಾಗಿ ತಾನು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಶಾಸಕ ಪುಟ್ಟರಂಗಶೆಟ್ಟಿ ವಿರುದ್ಧ ದೂರು ಸಲ್ಲಿಸಲು ನಿರ್ಧರಿಸಿದ್ದೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಸುಂದರ ರಾಜ್, ರಂಗನಾಯಕ, ಹೇಮಂತ್ ಉಪಸ್ಥಿತರಿದ್ದರು.

ಕೂಡಲೇ ಬಾಕಿ ಹಣ ಪಾವತಿ

ಜೊತೆ ಕರಾರು ಮಾಡಿ ಕೊಂಡಿರುವ ಜಮೀನಿನಲ್ಲಿ ಕ್ವಾರಿ ನಡೆಸುತ್ತಿಲ್ಲ. ಇಷ್ಟಕ್ಕೂ ನನಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುವ ಜಮೀನಿನ ಖಾತೆಯೇ ಕಮಲೇಶ್ ಹೆಸರಿನಲ್ಲಿಲ್ಲ. ಖಾತೆ ಇಲ್ಲದೆ ಕ್ರಯ ನೋಂದಣಿ ಸಾಧ್ಯವಿಲ್ಲ. ನನಗೆ ಯಾವಾಗ ಕ್ರಯದ ನೋಂದಣಿ ಮಾಡಿಕೊಟ್ಟರೂ ಉಳಿದ ಹಣ ಕೊಡಲು ನಾನು ಸಿದ್ಧನಾಗಿದ್ದೇನೆ. ಆದರೆ ಕಮಲೇಶ್ ತನ್ನ ಹೆಸರಿಗೆ ಖಾತೆಯನ್ನೂ ಮಾಡಿಕೊಳ್ಳದೇ, ನನಗೆ ಜಮೀನು ನೋಂದಣಿ ಮಾಡದೇ 3.54 ಕೋಟಿ ರೂಗಳನ್ನು ಪಡೆದು ನಷ್ಟ ಉಂಟು ಮಾಡಿದ್ದಾರೆ ಎಂಬುದು ನಿಜ. ಅಲ್ಲದೇ ಈ ವ್ಯಕ್ತಿ ಬೇರೆ ಕೆಲವರಿಂದಲೂ ಹಣ ಪಡೆದು ವಂಚಿಸಿದ್ದಾನೆ ಎಂಬ ಮಾಹಿತಿಯೂ ಇದೆ. ಇವೆಲ್ಲವುಗಳ ಬಗ್ಗೆ ಸುದ್ದಿಗೋಷ್ಠಿ ನಡೆಸಿ ಸುದೀರ್ಘ ವಿವರಣೆ ನೀಡುತ್ತೇನೆ. ಇನ್ನು ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ನನ್ನ ಅಳಿಯ ಮತ್ತು ಅವರ ಸ್ನೇಹಿತನ ವಿರುದ್ಧ ಕಮಲೇಶ್ ಒಂದು ದೂರನ್ನು ಪೊಲೀಸರಿಗೆ ನೀಡಿದ್ದು, ಪ್ರತಿಯಾಗಿ ನನ್ನ ಅಳಿಯನ ಸ್ನೇಹಿತನೂ ದೂರು ದಾಖಲಿಸಿದ್ದಾರೆ. ಪೊಲೀಸರ ತನಿಖೆಯಿಂದ ಸತ್ಯಾಂಶ ಹೊರ ಬರಲಿದೆ ಎಂದು ಶಾಸಕ ಪುಟ್ಟರಂಗಶೆಟ್ಟಿ ತಿಳಿಸಿದ್ದಾರೆ.

ಚಿರತೆಯೊಂದಿಗೆ ಮುಳ್ಳುಹಂದಿ ಪ್ರತ್ಯಕ್ಷ

ಸ್ಥಳಾಂತರಿಸಿರುವುದು ದುರದೃಷ್ಟಕರ ಎಂದು ಸಿಎನ್‌ಎನ್‌ಎಲ್ ಇಂಜಿನಿಯರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಕಳೆದ 20 ದಿನಗಳಿಂದ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ ಹೇರಿರುವುದರಿಂದ ಆಣೆಕಟ್ಟೆಯ ಆವರಣದಲ್ಲಿ ತಿಂಡಿ ತಿನಿಸು ಮತ್ತು ಹಣ್ಣುಗಳನ್ನು ಮಾರಾಟ ಮಾಡುವ ನೂರಾರು ಸಣ್ಣ ವ್ಯಾಪಾರಿಗಳು ಮತ್ತು ಬೃಂದಾವನ ಗಾರ್ಡನ್‌ನಲ್ಲಿರುವ ಛಾಯಾಗ್ರಾಹಕರು ಬೀದಿ ಪಾಲಾಗಿದ್ದಾರೆ. ಆಣೆಕಟ್ಟೆ ಆಸುಪಾಸಿನಲ್ಲಿ 100ಕ್ಕೂ ಹೆಚ್ಚು ಮಳಿಗೆಗಳಿದ್ದು, ಒಂದು ತಿಂಗಳಿನಿಂದ ವ್ಯಾಪಾರ ವಹಿವಾಟು ಸ್ಥಗಿತಗೊಂಡಿದ್ದು ವ್ಯಾಪಾರಸ್ಥರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕೂಡಲೇ ಚಿರತೆ ಹಿಡಿದು ಪ್ರವಾಸಿಗರಿಗೆ ಪ್ರವಾಸಿಗರ ನಿರ್ಬಂಧ ತೆರವುಗೊಳಿಸುವಂತೆ ಶಾಸಕರು ಸಂಬಂಧಪಟ್ಟ ಅಧಿಕಾರಿಗಳ ಬಳಿ ಖುದ್ದು ಬಳಿ ವ್ಯಾಪಾರಸ್ಥರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ನಿತ್ಯ ದೇಶ ವಿದೇಶದ ಸಾವಿರಾರು ಪ್ರವಾಸಿಗರು ಪ್ರವಾಸಿ ತಾಣವಾದ ಕೆಆರ್‌ಎಸ್ ಆಣೆಕಟ್ಟೆ ಮತ್ತು ಬೃಂದಾವನ ವೀಕ್ಷಣೆಗೆ ಆಗಮಿಸುತ್ತಿದ್ದರು. ಇದೀಗ ಆಣೆಕಟ್ಟೆಯಲ್ಲಿ ಚಿರತೆ ಕಾಣಿಸಿಕೊಂಡಿರುವ ಕಾರಣ ಸಾರ್ವಜನಿಕರಿಗೆ ಪ್ರವೇಶ ನಿಷೇಧಿಸಲಾಗಿದೆ.

ಬ್ರಾಹ್ಮಣ ಸಮುದಾಯ ಕುರಿತು ಚಿಂತಕ ಪ.ಮಲ್ಲೇಶ್ ಹೇಳಿಕೆ ಖಂಡಿಸಿ

ನಾಳೆ ಬ್ರಾಹ್ಮಣ ಸಮುದಾಯದಿಂದ ಭಾರೀ ಪ್ರತಿಭಟನೆ

ಮೈಸೂರು ಗನ್‌ಹೌಸ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ

ಮೈಸೂರು,ನ.19(ಪಿಎಂ)- ಬ್ರಾಹ್ಮಣ ಸಮುದಾಯ ಕುರಿತಂತೆ ಚಿಂತಕ ಪ.ಮಲ್ಲೇಶ್ ಹೇಳಿಕೆ ಖಂಡಿಸಿ ಬ್ರಾಹ್ಮಣ ಸಂಘ ಸಂಸ್ಥೆಗಳ ಒಕ್ಕೂಟವು ನ.21ರಂದು ಭಾರೀ ಪ್ರತಿಭಟನೆ ಹಮ್ಮಿಕೊಂಡಿದೆ. ಮೈಸೂರಿನ ಗನ್‌ಹೌಸ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲು ನಿರ್ಧರಿಸಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮುದಾಯದ ಮುಖಂಡ ಹಾಗೂ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ವಾತಂತ್ರ್ಯ ಹೋರಾಟದಲ್ಲಿ ನಾಯಕತ್ವ ವಹಿಸಿದ ಸಮುದಾಯ ನಮ್ಮದು. ಎಲ್ಲಾ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ನಿಟ್ಟಿನಲ್ಲಿ ಬ್ರಾಹ್ಮಣ ಸಮಾಜ ಕೆಲಸ ಮಾಡುತ್ತಿದೆ. ಇಂತಹ ಸಮುದಾಯದ ಬಗ್ಗೆ ವಿನಾಕಾರಣ ಅವಹೇಳನ ಮಾಡಲಾಗಿದೆ ಎಂದು ಕಿಡಿಕಾರಿದರು.

ಪ.ಮಲ್ಲೇಶ ತಾವು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಸಂಬಂಧವಿಲ್ಲದಂತೆ ಹೇಳಿಕೆ ನೀಡಿ ಸಮಾಜದ ಸ್ವಾಸ್ಥ್ಯ ಹಾಳು ಮಾಡಲು ಹೊರಟಿದ್ದಾರೆ. 'ಬ್ರಾಹ್ಮಣರನ್ನು, ಬ್ರಾಹ್ಮಣಿಕೆಯನ್ನು ನಂಬಬೇಡಿ' ಎಂಬಿತ್ಯಾದಿ ಹೇಳಿಕೆ ಮೂಲಕ ನಮ್ಮ ಸಮುದಾಯ ನಿಂದಿಸಿದ್ದಾರೆ. ಇದನ್ನು ಖಂಡಿಸಿ, ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲೇಬೇಕೆಂದು ಈ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದರು.

ಅಂದು ಬೆಳಗ್ಗೆ 10.30ಕ್ಕೆ ಗನ್‌ಹೌಸ್ ಬಳಿಯ ಶಂಕರ ಮಠದ ವಿದ್ಯಾಶಂಕರ ಕಲ್ಯಾಣ ಮಂಟಪದ ಎದುರು ಸಮಾವೇಶಗೊಂಡು, ಚಾಮರಾಜ ಜೋಡಿ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ಪ್ರತಿಭಟನಾ ಮೆರವಣಿಗೆ ತಲುಪಲಿದೆ. ಈ ಹೋರಾಟದಲ್ಲಿ ಸಮುದಾಯದ ವಿದ್ವಾಂಸರು, ಯುವ ಜನರು ಸೇರಿದಂತೆ ಮೂರು ಸಾವಿರಕ್ಕೂ ಹೆಚ್ಚು ಸಮುದಾಯದ ಜನತೆ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಪ್ರತಿಭಟನಾ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಈ ರೀತಿ ಹೇಳಿಕೆ ನೀಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಲಾಗುವುದು. ಬ್ರಾಹ್ಮಣ ಜನಾಂಗ ಇಂದು ಅಲ್ಪಸಂಖ್ಯಾತ ಸಮುದಾಯವಾಗಿದ್ದು, ನಮ್ಮ ರಾಜ್ಯ ಮತ್ತು ದೇಶದಲ್ಲಿ ಶೇ.3ರಷ್ಟು ಮಾತ್ರ ಜನಸಂಖ್ಯೆ ಹೊಂದಿದೆ. ಬ್ರಾಹ್ಮಣ ಸಮುದಾಯ 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಧ್ಯೇಯ ವಾಕ್ಯದಂತೆ ಜೀವನ ನಡೆಸುತ್ತಿದೆ. ಪ್ರತಿಭಟನಾ ಮೆರವಣಿಗೆ ಮೂಲಕ ನಮ್ಮ ಶಕ್ತಿ ಪ್ರದರ್ಶಿಸಲಾಗುವುದು. ಇದಕ್ಕೆ ಸಮಸ್ತ ಹಿಂದೂ ಸಮಾಜ ಸ್ಪಂದಿಸಿ ನಮ್ಮ ಹೋರಾಟ ಯಶಸ್ವಿಗೊಳಿಸಬೇಕು ಎಂದು ಕೋರಿದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ರಾಷ್ಟ್ರಹಿತ ಹಾಗೂ ಎಲ್ಲಾ ಸಮುದಾಯಗಳ ಹಿತದೊಂದಿಗೆ ಇಡೀ ವಿಶ್ವದ ಹಿತ ಬಯಸುವ ಸಮುದಾಯ ನಮ್ಮದು. ಹೀಗಿರುವಾಗ ಸಂಬಂಧವೇ ಇಲ್ಲದ ವಿಚಾರದಲ್ಲಿ ನಮ್ಮ ಸಮುದಾಯ ನಿಂದಿಸಿದರೆ ಸುಮ್ಮನಿರಲು ಸಾಧ್ಯವಿಲ್ಲ. ಮೈಸೂರಿನಲ್ಲಿ ಸಮುದಾಯದ ಸುಮಾರು 65 ಸಂಘಟನೆಗಳು ಈ ಹೋರಾಟದಲ್ಲಿ ಪಾಲ್ಗೊಳ್ಳಲಿವೆ. ಆ ವ್ಯಕ್ತಿ ವಿರುದ್ಧ ಕಠಿಣ ಕಾನೂನು ಕ್ರಮ ಆಗಲೇಬೇಕು ಎಂಬುದು ನಮ್ಮ ಸಮುದಾಯದ ಎಲ್ಲಾ ಸಂಘಟನೆಗಳ ಒತ್ತಾಯ. ಈ ಸಂಬಂಧ ಪೊಲೀಸರಿಗೆ ದೂರು ಸಹ ನೀಡಲಾಗಿದೆ ಎಂದರು.

ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ವಿಪ್ರ ಮಹಿಳಾ ಸಂಘದ ಅಧ್ಯಕ್ಷೆ ಡಾ.ಲಕ್ಷ್ಮಿ, ಸಮುದಾಯದ ಮುಖಂಡರಾದ ಸುಂದರೇಶನ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಹೊಸ ತಲೆಮಾರಿನವರು ಸಾಹಿತ್ಯ, ಸಿನಿಮಾ, ನಾಟಕ ನೋಡಬೇಕು

ಮೈಸೂರಲ್ಲಿ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಚಾಲನೆ ನೀಡಿದ ಮಂಡ್ಯ ರಮೇಶ್ ಅಭಿಮತ

ಮೈಸೂರು, ನ.19(ಆರ್‌ಕೆಬಿ)- ಹೊಸ ತಲೆಮಾರಿನವರು ಸಾಹಿತ್ಯದ ಬಗ್ಗೆ ಒಲವು ಬೆಳೆಸಿಕೊಳ್ಳಬೇಕು. ಸಿನಿಮಾ, ನಾಟಕಗಳನ್ನು ನೋಡಿ, ಅರ್ಥ ಮಾಡಿಕೊಳ್ಳಬೇಕು ಎಂದು ಚಿತ್ರನಟ ಮಂಡ್ಯ ರಮೇಶ್ ತಿಳಿಸಿದರು.



ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ಶನಿವಾರ 2ನೇ ಮೈಸೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ರಂಗಭೂಮಿಯ ಶಕ್ತಿ ದೊಡ್ಡದು. ಜಗತ್ತಿನ ಶ್ರೇಷ್ಠ ಭಾಷೆಗಳಲ್ಲಿ ಕನ್ನಡ ಅತ್ಯಂತ ಮುಖ್ಯವಾದದ್ದು. ಇಂತಹ ಭಾಷೆಗೆ ಜಗತ್ತು ನಿರೀಕ್ಷೆ ಮಾಡುತ್ತಿದೆ. ಇತಿಹಾಸ ಗೊತ್ತಿಲ್ಲದೇ ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ. ನಾವು ಇತಿಹಾಸವಾಗಬೇಕಾದರೆ ಇತಿಹಾಸ ತಿಳಿದುಕೊಳ್ಳಬೇಕು ಎಂದು ಹೇಳಿದರು.

ಮೂರು ಹೊತ್ತು ಜಗಳ ಕಾಯ್ದುಕೊಂಡು ಜಾತಿ, ಧರ್ಮ ಎನ್ನುತ್ತ ಪರಸ್ಪರ ಕೆಸರೆರಚಿಕೊಳ್ಳುತ್ತಿರುವ ಎಡ- ಬಲ ಧರ್ಮದವರು ಸಮಾಜಕ್ಕೆ ಏನನ್ನೂ ಕೊಡಲಾರರು. ಹೀಗಾಗಿ ಜಾತಿ, ಜಗಳ, ಸಿದ್ಧಾಂತ ಜಗಳಗಳು ಹೆಚ್ಚುತ್ತಿವೆ. ಒಬ್ಬ ಜಾತಿ ಬಗ್ಗೆ ದೂಷಿಸಿದರೆ, ಮತ್ತೊಬ್ಬ ಧರ್ಮದ ಬಗ್ಗೆ ಮಾತನಾಡುತ್ತಾನೆ. ಈ ಇಬ್ಬರ ನಡುವೆ ಯಾವುದೇ ವ್ಯತ್ಯಾಸವೂ ಇಲ್ಲ. ಅವರು ಕೇವಲ ಹಾಸ್ಯಾಸ್ಪದವಾಗಿ ಕಾಣಿಸುತ್ತಾರೆ. ಅವರು ಕೇವಲ ಕಿಚ್ಚು ಹಚ್ಚಿ ಬಿಡುತ್ತಾರಷ್ಟೇ. ಕಿಚ್ಚು ಹಚ್ಚುವವರು ಯಾವತ್ತೂ ಉದ್ಧಾರ ಆಗಲಾರರು. ಇಂದು ಬೇಕಾಗಿರುವುದು ಕೆದಕುವುದಲ್ಲ, ಅರಳಿಸುವವರು ಬೇಕು. ಬೆಂಕಿ ಹಚ್ಚುವ ಬದಲು ನಂದಾದೀಪವಾಗಿ ಉರಿಸುವವರು ಬೇಕು. ಜಗತ್ತಿಗೆ ಸಾಂತ್ವನ ಬೇಕೇ ಹೊರತು ಜಾತಿ, ಧರ್ಮದ ನಡುವೆ ಕಿಚ್ಚು ಹಚ್ಚುವವರಲ್ಲ ಎಂದು ಅಭಿಪ್ರಾಯಪಟ್ಟರು.

ಎಲ್ಲ ಕಡೆ ರಾಜಕೀಯ ಮಾಡುವುದಲ್ಲ. ಅದನ್ನು ಎಲ್ಲಿ ಮಾಡಬೇಕೋ ಅಲ್ಲೇ ಮಾಡಬೇಕು. ಇದನ್ನು ಅರ್ಥ ಮಾಡಿಕೊಳ್ಳಬೇಕು. ಎಲ್ಲಿ ಯಾವಾಗ ಏನನ್ನು ಮಾತಾಡಬೇಕು ಅನ್ನುವುದು ಮುಖ್ಯ. ಒಳ್ಳೆಯದನ್ನೇ ಯೋಚಿಸಬೇಕು. ಒಳ್ಳೆಯ ಆಶಯದೊಂದಿಗೆ ಪ್ರೀತಿ ಇಟ್ಟುಕೊಂಡವರು ಜಗತ್ತಿಗೆ ಏನನ್ನಾದರೂ ಕೊಡಲು ಸಾಧ್ಯ ಎಂದು ಹೇಳಿದರು.

ನಿರ್ದೇಶಕ ಪ್ರವೀಣ್ ಕೃಪಾಕರ್ ಮಾತನಾಡಿ, ಮುಂದಿನ ದಿನಗಳಲ್ಲಿ ಮೈಸೂರು ದಸರಾ ರೀತಿಯಲ್ಲಿಯೇ ಮೈಸೂರು ಚಲನಚಿತ್ರೋತ್ಸವ ಹೆಸರುವಾಸಿಯಾಗಿ ಮನ್ನಣೆ ದೊರೆಯಲಿದೆ ಎಂದರು.

ಟ್ರಾಫಿಕ್ ವಾರ್ಡನ್ ಆರ್ಗನೈಜೇಷನ್‌ನ ಮಾಲಿನಿ ಪಾಲಾಕ್ಷ ಮಾತನಾಡಿ, ಪ್ರತಿಯೊಬ್ಬರಿಗೂ ಸಹಾಯ ಮಾಡುವ ಅವಕಾಶ ಲಭಿಸುತ್ತದೆ. ಆ ಅವಕಾಶ ಸಿಕ್ಕಾಗ ಸಹಾಯ ಮಾಡಲು ಮುಂದಾಗಬೇಕು. ಸಹಾಯಕ್ಕೆ ಯಾವುದೇ ನಿರೀಕ್ಷೆ ಹಾಗೂ ಫಲಾಪೇಕ್ಷೆ ಬಯಸುವುದು ಸರಿಯಲ್ಲ ಎಂದರು. ಸಮಾರಂಭದಲ್ಲಿ ಇಂದಿರಾ ನಾಯರ್, ರಂಜಿತಾ ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ನ.19- 2022-23ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೌಲಾನ ಆಜಾದ್ ಮಾದರಿ ಶಾಲೆ, ಲಷ್ಕರ್ ಮೊಹಲ್ಲಾ, ಕೆಸರೆ ಹಾಗೂ ಹುಣಸೂರು ಶಾಲೆಗಳಿಗೆ ಹಿಂದಿ ಮತ್ತು ದೈಹಿಕ ಶಿಕ್ಷಣ ಬೋಧನೆಗಾಗಿ ಅತಿಥಿ ಶಿಕ್ಷಕರು ಬೇಕಾಗಿರುವ ಕಾರಣ ಜಿಲ್ಲಾ ಕಚೇರಿ ಮೈಸೂರು ವತಿಯಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ನವೆಂಬರ್ 27 ಕೊನೆಯ ದಿನಾಂಕವಾಗಿರುತ್ತದೆ.

ಆಸಕ್ತ B.Ed (ಹಿಂದಿ) ಮತ್ತು B.PEd ಅಭ್ಯರ್ಥಿಗಳು ಕೊನೆಯ ದಿನಾಂಕದೊಳಗಾಗಿ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮೌಲಾನ ಆಜಾದ್ ಭವನ, ಸಿ.ಎ:ನಂ-1 ಶೋಭ ಗಾರ್ಡನ್ ಪಕ್ಕ ದುಡಿನ ಮಾರಮ್ಮ ದೇವಸ್ಥಾನದ ಎದುರು, ಬೆಂಗಳೂರು-ಮೈಸೂರು ರಸ್ತೆ, ಮೈಸೂರು ಜಿಲ್ಲೆ-570007 ಇಲ್ಲಿ ಸಂಪರ್ಕಿಸಬಹುದು ಅಥವಾ ದೂರವಾಣಿ ಸಂಖ್ಯೆ 0821-2422088 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ

ಬಿಜೆಪಿ ಮುಖಂಡನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ನ.19(ಪಿಎಂ)- ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಕುರಿತಂತೆ ಶೂಟ್ ಮಾಡಲು ನಾವು ರೆಡಿ ಎಂಬ ಹೇಳಿಕೆ ನೀಡಿರುವ ಬಿಜೆಪಿ ಮುಖಂಡ ಮಣಿಕಂಠ ರಾಥೋಡ್ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ (ಬಣ ರಹಿತ) ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಮಣಿಕಂಠ ರಾಥೋಡ್ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಈತನನ್ನು ಕಲಬುರ್ಗಿ ಜಿಲ್ಲೆಯಿಂದ ಗಡೀಪಾರು ಮಾಡಬೇಕು ಎಂದು ಒತ್ತಾಯಿಸಿದರು.

ಪ್ರಿಯಾಂಕ್ ಖರ್ಗೆ ದಲಿತ ಸಮುದಾಯದ ಭರವಸೆ ನಾಯಕರು. ಇವರು ರಾಜ್ಯ ಬಿಜೆಪಿ ಸರ್ಕಾರದ ಹಗರಣಗಳ ವಿರುದ್ಧ ಧ್ವನಿ ಎತ್ತಿದ ಹಿನ್ನೆಲೆಯಲ್ಲಿ ಅವರ ಮೇಲೆ ಹಲ್ಲೆ ನಡೆಸುವ ಸಂಚು, ತೇಜೋವಧೆ ಹೆಚ್ಚಾಗುತ್ತಿದೆ. ಈತನ ಹೇಳಿಕೆ ಗಮನಿಸಿದರೆ ರಾಜ್ಯ ಬಿಜೆಪಿ ಸರ್ಕಾರ ಪ್ರಚೋದನೆ ನೀಡಿದೆಯೇ? ಎಂಬ ಅನುಮಾನ ಮೂಡುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಬಿಜೆಪಿ ಸರ್ಕಾರ ನೆಪ ಮಾತ್ರಕ್ಕೆ ಈತನ ಬಂಧನಕ್ಕೆ ಕ್ರಮ ವಹಿಸಿದೆ. ಇದರಿಂದ ಇಂತಹವರಿಗೆ ಯಾವುದೇ ಭಯವಿಲ್ಲ. ಹಾಗಾಗಿ ಆತನ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಅಲ್ಲದೆ, ಪ್ರಿಯಾಂಕ್ ಖರ್ಗೆ ಅವರಿಗೆ ಎಸ್‌ಪಿಜಿ ಭದ್ರತೆ ನೀಡಬೇಕು ಎಂದು ಆಗ್ರಹಿಸಿದರು. ದಸಂಸ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಆಲಗೂಡು, ಮುಖಂಡರಾದ ಮುರಡಗಳ್ಳಿ ಮಹದೇವು, ಆಲತ್ತೂರು ಶಿವರಾಜು, ಹೆಚ್.ಅಶೋಕ್, ಮೂಡಹಳ್ಳಿ ಮಹದೇವ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ: ಪೋಕ್ಸೊ ಕಾಯಿದೆಯಡಿ ವೃದ್ಧನ ಬಂಧನ

ಗೋಣಿಕೊಪ್ಪ, ನ.19-ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ವೃದ್ಧನನ್ನು ಪೋಕ್ಸೋ ಕಾಯಿದೆಯಡಿ ಗೋಣಿಕೊಪ್ಪ ಠಾಣೆ ಪೊಲೀಸರು ಬಂಧಿಸಿದ್ದಾರೆ. ಅರವತ್ತೊಕ್ಲು ಗ್ರಾಮದ ಮೈಸೂರಮ್ಮ ಕಾಲೋನಿ ನಿವಾಸಿ ಅಪ್ಪುಕುಟ್ಟ (70) ಬಂಧನಕ್ಕೊಳಗಾಗಿರುವ ಕಾಮುಕನಾಗಿದ್ದು, ಈತ ನ.16ರಂದು ಶಾಲೆಗೆ ಹೋಗಿ ಹಿಂತಿರುಗಿದ್ದ ಕೂಲಿ ಕಾರ್ಮಿಕ ದಂಪತಿಯ 8 ವರ್ಷದ ಬಾಲಕಿಗೆ ಅಂಗಡಿಯಲ್ಲಿ ಬಿಸ್ಕಟ್ ತೆಗೆದುಕೊಟ್ಟು ಚಿಂಟೂ ಟಿವಿ ತೋರಿಸುತ್ತೇನೆ ಎಂದು ಮನೆಗೆ ಕರೆದೊಯ್ದು, ಲೈಂಗಿಕ ದೌರ್ಜನ್ಯವೆಸಗಿದ್ದಾನೆ. ಸಂಜೆ ಬಾಲಕಿಯ ತಾಯಿ ಮನೆಗೆ ಬಂದಾಗ ಅಳುತ್ತಿದ್ದ ಬಾಲಕಿ, ವೃದ್ಧ ತನ್ನ ಮೇಲೆ ಎಸಗಿದ ಲೈಂಗಿಕ ದೌರ್ಜನ್ಯದ ಬಗ್ಗೆ ತಿಳಿಸಿದ್ದಾಳೆ. ಈ ಹಿನ್ನೆಲೆಯಲ್ಲಿ ಬಾಲಕಿಯ ತಾಯಿ ನೀಡಿದ ದೂರನ್ನಾಧರಿಸಿ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡ ಗೋಣಿಕೊಪ್ಪ ಠಾಣೆ ಪೊಲೀಸರು ಅಪ್ಪುಕುಟ್ಟನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.



ವಿಕಲಚೇತನ ಮಕ್ಕಳ 'ಬಾಂಧವ್ಯ' ಬೆಸೆದ ಕ್ರೀಡಾ ಮಹೋತ್ಸವ

ಕುಣಿದು, ಕುಪ್ಪಳಿಸಿ, ಸಂಭ್ರಮಿಸಿದ ವಿಕಲಚೇತನ ಮಕ್ಕಳು





ಮೈಸೂರು, ನ.19 (ಆರ್‌ಕೆಬಿ)- ರೋಟರಿ ಮೈಸೂರು ಮಿಡ್‌ಟೌನ್, ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಶನಿವಾರ ಭಿನ್ನ ಸಾಮರ್ಥ್ಯದ ಮಕ್ಕಳಿಗಾಗಿ ಆಯೋಜಿಸಿದ್ದ 'ಬಾಂಧವ್ಯ 2022-23' ಕ್ರೀಡಾ ಮಹೋತ್ಸವದಲ್ಲಿ ನೂರಾರು ವಿಕಲಚೇತನ ಮಕ್ಕಳು, ಹಿರಿಯರು ಪಾಲ್ಗೊಂಡು ಸಂಭ್ರಮಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಅನುಪಸ್ಥಿತಿಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಅವರು ಪಾರಿವಾಳ ಹಾರಿಬಿಡುವ ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದವರಿಂದ 'ಕ್ರೀಡಾ ಜ್ಯೋತಿ' ಸ್ವೀಕರಿಸಿ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಮಂಜುನಾಥ್ ಅವರು, ವಿಕಲಚೇತನ ಮಕ್ಕಳಿಗೆ ಸಹಾನುಭೂತಿಗಿಂತ ಪ್ರೋತ್ಸಾಹ ಅಗತ್ಯ. ಅಂಗವಿಕಲರು ದೈಹಿಕವಾಗಿ ಅಶಕ್ತರಾಗಿದ್ದರೂ, ಅವರು ಉತ್ತಮ ಮಾನಸಿಕ ಶಕ್ತಿಯನ್ನು ಹೊಂದಿದ್ದಾರೆ, ಅದು ಅವರ ವೃತ್ತಿ ಮತ್ತು ಜೀವನದಲ್ಲಿ ಹೆಚ್ಚಿನ ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದರು.

ರೋಟರಿ ಮೈಸೂರು ಮಿಡ್‌ಟೌನ್ ಪ್ರತಿ ವರ್ಷ ವಿಕಲಚೇತನರಿಗಾಗಿ ಇಂತಹ ಕ್ರೀಡಾಕೂಟವನ್ನು ಆಯೋಜಿಸುತ್ತಿರುವುದನ್ನು ಶ್ಲಾಘಿಸಿದ ಅವರು, ಬಾಂಧವ್ಯ ಅಂದರೆ ವಿಕಲಚೇತನರೊಂದಿಗೆ ಬೆಸೆಯುವ ಬಾಂಧವ್ಯವಾಗಿದ್ದು, ಕಾರ್ಯಕ್ರಮಕ್ಕೆ ಉತ್ತಮ ಶೀರ್ಷಿಕೆಯಾಗಿದೆ ಎಂದು ಹೇಳಿದರು.

ಇಂತಹ ಕ್ರೀಡಾಕೂಟಗಳು ಭಾಗವಹಿಸುವವರ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತವೆ. ವಿಕಲಚೇತನ ಮಕ್ಕಳು ಪ್ರೌಢಾವಸ್ಥೆಗೆ ಬಂದಾಗ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಅವರಿಗೆ ಹೆಚ್ಚಿನ ಸಹಾಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಗೌರವ ಅತಿಥಿಗಳಾಗಿ ಆಗಮಿಸಿದ್ದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ಯಾರಾ ಅಥ್ಲೀಟ್ ಆರ್.ಟಿ. ಪ್ರಸನ್ನ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ರೋಟರಿ- 3181 ಜಿಲ್ಲಾ ಗವರ್ನರ್ (ಚುನಾಯಿತ) ಎಚ್.ಆರ್.ಕೇಶವ್, ವಲಯ-7 ಸಹಾಯಕ ಗವರ್ನರ್ ಆರ್.ವೆಂಕಟೇಶ್, ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಎಂ.ಎಸ್.ನವೀನ್ ಚಂದ್ರ, ಗೌರವ ಕಾರ್ಯದರ್ಶಿ ಎಸ್.ಕುಮಾರಸ್ವಾಮಿ, 'ಬಾಂಧವ್ಯ 2022-23' ಅಧ್ಯಕ್ಷ ಜಯಕುಮಾರ್, ಸಹ ಅಧ್ಯಕ್ಷ ಎಲಿಝಾರ್ ಮಿಲ್ಟನ್ ಇನ್ನಿತರರು ಉಪಸ್ಥಿತರಿದ್ದರು.

18ಕ್ಕೂ ಅಧಿಕ ವಿಕಲಚೇತನ ಶಾಲೆಗಳ ಮಕ್ಕಳು ಕ್ರೀಡಾಕೂಟದಲ್ಲಿ ಭಾಗವಹಿಸಿ, ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ, ಸಂಭ್ರಮಿಸಿದರು.

ವಿಶೇಷಚೇತನರ ಪ್ರತಿಭೆ ಅನಾವರಣ

ಬಹುಮಾನಗಳನ್ನು ಬಾಚಿ ಸಂಭ್ರಮಿಸಿದರು

ಮೈಸೂರು, ನ.19(ಎಂಕೆ)- ಆತ್ಮವಿಶ್ವಾಸವಿದ್ದರೆ ಅಸಾಧ್ಯವಾದದ್ದು, ಸಾಧ್ಯವಾಗುತ್ತದೆ ಎಂಬುದನ್ನು ಸಾಬೀತುಪಡಿಸಿದ ವಿಶೇಷಚೇತನ ಮಕ್ಕಳು ಬಹುಮಾನಗಳನ್ನು ಗೆದ್ದು ಬೀಗಿದರು...

ಮೈಸೂರು ವಿವಿ ಓವಲ್ ಮೈದಾನದಲ್ಲಿ ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಆಯೋಜಿಸಿದ್ದ ವಿಶೇಷಚೇತನ ಮಕ್ಕಳ ಕ್ರೀಡಾಕೂಟ(ಬಾಂಧವ್ಯ-2022)ದ ಸಮಾರೋಪ ಸಮಾರಂಭದಲ್ಲಿ ವಿವಿಧ ಬಗೆಯ ಕ್ರೀಡೆಗಳಲ್ಲಿ ಭಾಗವಹಿಸಿ ಪದಕಗಳನ್ನು ಬೇಟೆಯಾಡಿದ ವಿಶೇಷಚೇತನ ಮಕ್ಕಳಿಗೆ ಬಹುಮಾನ ವಿತರಿಸಿ ಪ್ರೋತ್ಸಾಹಿಸಲಾಯಿತು.

ಪಥಸಂಚಲನದಲ್ಲಿ ಅರುಣೋದಯ ವಿಕಲಚೇತನ ಮಕ್ಕಳ ಕೇಂದ್ರದ ಮಕ್ಕಳು ಪ್ರಥಮ ಸ್ಥಾನ ಪಡೆದರೆ, ಮೈತ್ರಿ ಚಾರಿಟಬಲ್ ಟ್ರಸ್ಟ್ ದ್ವಿತೀಯ ಹಾಗೂ ಕರುಣಾಮಯಿ ತೃತೀಯ ಸ್ಥಾನ ಪಡೆಯಿತು. ಎಲ್‌ಎ ಚಾಂಪಿಯನ್ ಶಿಪ್‌ನಲ್ಲಿ ಜೆಎಂಜೆ ಸ್ಪೆಷನ್ ಸ್ಕೂಲ್ ಪ್ರಥಮ, ಜೆಎಸ್‌ಎಸ್ ಸ್ಪೆಷನ್ ಸ್ಕೂಲ್ ದ್ವಿತೀಯ ಬಹುಮಾನ ಗೆದ್ದರೆ, ಹೆಚ್‌ಎ ಚಾಂಪಿಯನ್‌ಶಿಪ್‌ನಲ್ಲಿ ಕರುಣಾಮಯಿ ಪ್ರಥಮ ಹಾಗೂ ಅರುಣೋದಯ ದ್ವಿತೀಯ ಬಹುಮಾನ ಗೆದ್ದುಕೊಂಡಿತು. ಹಾಗೆಯೇ ವೈಯಕ್ತಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿಶೇಷ ಮಕ್ಕಳಿಗೆ ಶ್ರೀರಂಗಪಟ್ಟಣ ಉಪವಿಭಾಗದ ಉಪ ಪೊಲೀಸ್ ಅಧೀಕ್ಷಕ ಎಸ್.ಎನ್.ಸಂದೇಶ್‌ಕುಮಾರ್ ಬಹುಮಾನ ವಿತರಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ಬಾಂಧವ್ಯ-2022 ದೈವ ಸ್ವರೂಪಿ ಮಕ್ಕಳನ್ನು ಕ್ರೀಡೆಯಲ್ಲಿ ತೊಡಗಿಸುವ ಪ್ರಯತ್ನವಾಗಿದ್ದು, ಸಾರ್ಥಕ ಕಾರ್ಯಕ್ರಮವಾಗಿದೆ. ವಿಶೇಷಚೇತನ ಮಕ್ಕಳಲ್ಲಿಯೂ ಪ್ರತಿಭಾವಂತರನ್ನು ಗುರ್ತಿಸುವ ಕಾರ್ಯದಿಂದ ಆ ಮಕ್ಕಳ ತಾಯಿ ಜೀವಕ್ಕೆ ಸಾರ್ಥಕ ಎನಿಸುತ್ತದೆ. ಇಂತಹ ಕಾರ್ಯಕ್ರಮಗಳು ನಿರಂತರವಾಗಿರಲಿ ಎಂದು ಶುಭ ಹಾರೈಸಿದರು.

ಗ್ರಾಮ ವಾಸ್ತವ್ಯದಿಂದ ಗ್ರಾಮೀಣರ ಸಮಸ್ಯೆ ನಿವಾರಣೆ

ಕಂದಾಯ ಸಚಿವ ಆರ್.ಅಶೋಕ್ ಅಭಿಪ್ರಾಯ


ಅಂಗವಿಕಲರೊಬ್ಬರಿಗೆ ಸಚಿವ ಅಶೋಕ್ ಕೃತಕ ಕಾಲು ಜೋಡಿಸುತ್ತಿರುವುದು





ಹೆಚ್.ಡಿ.ಕೋಟೆ, ನ.19– ಗ್ರಾಮ ವಾಸ್ತವ್ಯ ಪಾಠಶಾಲೆ ಇದ್ದ ಹಾಗೆ. ಗ್ರಾಮ ವಾಸ್ತವ್ಯದಿಂದ ಹಳ್ಳಿ ಜನರ ಸಮಸ್ಯೆ ಅರಿತು ಸ್ಥಳದಲ್ಲೇ ಪರಿಹಾರ ನೀಡಲು ಸಾಧ್ಯ ಎಂದು ಕಂದಾಯ ಸಚಿವ ಆರ್.ಅಶೋಕ್ ಅಭಿಪ್ರಾಯಪಟ್ಟರು.

ತಾಲೂಕಿನ ಕೆಂಚನಹಳ್ಳಿ ಗ್ರಾಮದಲ್ಲಿ ಶನಿವಾರ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಕಾರ್ಯಕ್ರಮದ ಅಂಗವಾಗಿ ಭೀಮನ ಕೊಲ್ಲಿ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಂಡಿದ್ದ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಧಾನಸೌಧದಲ್ಲಿ ಮಂತ್ರಿಗಳು ಜನರ ಸಮಸ್ಯೆ ಬಗ್ಗೆ ಕೇಳಿದರೆ ಅಧಿಕಾರಿಗಳು ಎಲ್ಲಾ ಚೆನ್ನಾಗಿದೆ ಎನ್ನುತ್ತಾರೆ. ಆದರೆ ವಾಸ್ತವದಲ್ಲಿ ಜನರ ಸಮಸ್ಯೆಗಳು ಬಹಳಷ್ಟಿದೆ. ಗ್ರಾಮೀಣ ಜನರ ಸಮಸ್ಯೆ ಬಗೆಹರಿಸಲು ಜನರಿದ್ದಲ್ಲಿಗೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ ಅವರ ಸಮಸ್ಯೆ ಅರಿತು, ಬಗೆಹರಿಸುವುದು ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ, ಗ್ರಾಮ ವಾಸ್ತವ್ಯದ ಉದ್ದೇಶ ಎಂದರು.

ತಾಲೂಕು ಅರಣ್ಯ ಅಂಚಿನಲ್ಲಿದ್ದು, ಇಲ್ಲಿ ಪ್ರಾಣಿ ಮತ್ತು ಮನುಷ್ಯನ ಸಂಘರ್ಷ ವಿದೆ. ಇಂತಹ ಸಮಸ್ಯೆಗಳಿದ್ದರೂ ಜನರು ಇಲ್ಲಿನ ಪರಿಸರಕ್ಕೆ ಹೊಂದಿ ಕೊಂಡು ಜೀವನ ನಡೆಸುತ್ತಿದ್ದಾರೆ. ಈ ವ್ಯಾಪ್ತಿಯಲ್ಲಿ ಹಾಡಿಗಳು ಹೆಚ್ಚಾಗಿದ್ದು, ಗಿರಿಜನ ಹೆಚ್ಚಾಗಿ ವಾಸಿಸುತ್ತಾರೆ. ಹಾಡಿ ಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತನೆ ಮಾಡಿ ಗ್ರಾಮಗಳಿಗೆ ಸಿಗುವ ಎಲ್ಲಾ ಸೌಲಭ್ಯ ಒದಗಿಸಲಾಗುವುದು ಎಂದರು.

ಸ್ಥಳದಲ್ಲಿ ಮಾಸಾಶನ, ಪೌತಿ ಖಾತೆ ಬದಲಾವಣೆ, ಸೌಲಭ್ಯಗಳ ವಿತರಣೆ ಹಾಗೂ ಹಕ್ಕು ಪತ್ರಗಳ ವಿತರಣೆ ಮಾಡಲಾಗುವುದು. ಪೌತಿ ಖಾತೆ ಮಾಡುವಾಗ ಹೆಣ್ಣು ಮಕ್ಕಳ ಸಹಿ ಪಡೆಯುವುದು ಕಡ್ಡಾಯ. ಕಾರಣ ಹೆಣ್ಣು ಮಕ್ಕಳಿಗೂ ತಂದೆ ಆಸ್ತಿಯಲ್ಲಿ ಸಮಾನ ಹಕ್ಕಿದೆ ಎಂದರು.

ಬಡವರು ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿ ಕೊಂಡಿದ್ದರೆ ಅಂಥವರಿಗೆ 94ಸಿ ಅಡಿ ಆ ಜಾಗವನ್ನು ಅವರಿಗೆ ಖಾತೆ ಮಾಡಿ ಕೊಡಲಾಗುವುದು. ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಜಮೀನನ್ನು ಉಳುಮೆ ಮಾಡುತ್ತಿದ್ದರೆ, ಈ ಹಿಂದೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತಿತ್ತು. ಇದಕ್ಕೆ ತಿದ್ದುಪಡಿ ತಂದು ಪ್ರಕರಣ ದಾಖಲಿಸದಂತೆ ಕಾನೂನು ಮಾಡಲಾಗಿದೆ. ಕೋಳಿ ಸಾಕಾಣಿಕೆಗೆ ಈ ಹಿಂದೆ ಭೂ ಪರಿವರ್ತನೆ ಮಾಡಿಸಬೇಕಿತ್ತು. ಆದರೆ ಕಾನೂನು ತಿದ್ದುಪಡಿ ಮಾಡಿ ಕೃಷಿ ವ್ಯಾಪ್ತಿಗೆ ತರಲಾಗಿದೆ ಎಂದರು.

ಭೂಮಿ ಖಾತೆಗೆ ಇದ್ದ 30 ದಿನಗಳ ಅವಧಿಯನ್ನು 7 ದಿನಗಳಿಗೆ ಇಳಿಸಲಾಗಿದೆ. ಎಸ್‌ಸಿ/ಎಸ್‌ಟಿ ಸಮುದಾಯದವರಿಗೆ ಸರ್ಕಾರ ನೀಡಿರುವ ಜಮೀನಿನಲ್ಲಿ ಮನೆ ನಿರ್ಮಿಸಿಕೊಳ್ಳಲು ಭೂ ಪರಿವರ್ತನೆ ಮಾಡಿಕೊಡಲು ಜಿಲ್ಲಾಧಿಕಾರಿಗೆ ಅಧಿಕಾರ ನೀಡಲಾಗಿದೆ. ಮನೆ ನಿರ್ಮಾಣಕ್ಕೆ ಬ್ಯಾಂಕ್ ಸಾಲ ಪಡೆಯಲು ಭೂ ಪರಿವರ್ತನೆ ಮಾಡಲು 7 ದಿನಗಳ ಅವಕಾಶ ಕಲ್ಪಿಸಲಾಗಿದೆ. ಹಲೋ ಕಂದಾಯ ಸಚಿವರೇ ಸಹಾಯವಾಣಿ ಮೂಲಕ 72 ಗಂಟೆಗಳೊಳಗೆ ಹಿರಿಯ ನಾಗರಿಕರಿಗೆ ಪಿಂಚಣಿ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದರು.

> ತಾಲೂಕಿನಲ್ಲಿ 120 ಹಾಡಿಗಳಿದ್ದು, ಗಿರಿಜನರು ಹೆಚ್ಚಾಗಿ ವಾಸಿಸುತ್ತಾರೆ. ಇವರು ಸರ್ಕಾರಿ ಜಮೀನುಗಳಲ್ಲಿ ಮನೆ ನಿರ್ಮಿಸಿಕೊಂಡಿದ್ದು, ಹಕ್ಕುಪತ್ರ ನೀಡಬೇಕು. ತಾಲೂಕಿನಲ್ಲಿ 48 ಪುನರ್‌ವಸತಿ ಗ್ರಾಮಗಳಿದ್ದು, ಇವುಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡಬೇಕು. ಹೆಚ್.ಡಿ.ಕೋಟೆ ತಾಲೂಕು ವಿಸ್ತೀರ್ಣದಲ್ಲಿ ದೊಡ್ಡದಿದ್ದು, ವಿಸ್ತೀರ್ಣದ ಆಧಾರದಲ್ಲಿ ಹೆಚ್ಚಿನ ಅನುದಾನ ನೀಡಬೇಕು.
> – ಅನಿಲ್ ಚಿಕ್ಕಮಾದು, ಶಾಸಕ.

ಜಿಲ್ಲೆಯಲ್ಲಿ ಮಳೆ ಹಾನಿಯಾದ 3060 ರೈತರಿಗೆ 2.5 ಕೋಟಿ ರೂ. ಪರಿಹಾರ, 5444 ಮನೆಗಳ ಹಾನಿಗೆ 45 ಕೋಟಿ ಹಾಗೂ ಕೋವಿಡ್‌ನಿಂದ ಮೃತಪಟ್ಟ 3644 ಕುಟುಂಬಗಳಿಗೆ ತಲಾ ಒಂದು ಲಕ್ಷದಂತೆ 27 ಕೋಟಿ ರೂ. ಪರಿಹಾರ ನೀಡಲಾಗಿದೆ ಎಂದರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಗ್ರಾಮ ವಾಸ್ತವ್ಯ ಕಾರ್ಯಕ್ರಮದಿಂದ ಜನರ ನಡುವೆ ಇದ್ದು, ಜನರ ಸಮಸ್ಯೆ ಪರಿಹರಿಸಲು ಸಾಧ್ಯವಾಗುತ್ತದೆ. ಇಂದು 7,000ಕ್ಕೂ ಹೆಚ್ಚು ಫಲಾನುಭವಿಗಳಿಗೆ ಸೌಲಭ್ಯ ವಿತರಿಸಲಾಗುತ್ತಿದೆ. ಇಂದು ಸ್ವೀಕಾರ ಮಾಡುವ ಅರ್ಜಿಗಳಲ್ಲಿ ಬಹುತೇಕ ಸ್ಥಳದಲ್ಲಿ ಪರಿಹಾರ ನೀಡಲಾಗುವುದು. ಉಳಿದ ಅರ್ಜಿಗಳಿಗೆ 2 ವಾರ ದೊಳಗೆ ಪರಿಹಾರ ನೀಡಲಾಗುವುದು ಎಂದರು.

ಇದಕ್ಕೂ ಮುನ್ನಾ ಸಚಿವರಿಗೆ ಪೂರ್ಣಕುಂಭದ ಮೂಲಕ ಅದ್ಧೂರಿ ಸ್ವಾಗತ ಕೋರಲಾಯಿತು. ನಂತರ ಮಹದೇಶ್ವರ ಸ್ವಾಮಿಗೆ ಸಚಿವರು ವಿಶೇಷ ಪೂಜೆ ಸಲ್ಲಿಸಿದರು. ವಿವಿಧ ಇಲಾಖೆಗಳು ಸಾರ್ವಜನಿಕರಿಗೆ ನೀಡುವ ಸೌಲಭ್ಯಗಳ ಕುರಿತು ತೆರೆದಿರುವ ಮಳಿಗೆಗಳನ್ನು ಸಚಿವರು ಉದ್ಘಾಟಿಸಿದರು.

ವೇದಿಕೆ ಮೇಲೆ ವಿಕಲಚೇತನ ಫಲಾನುಭವಿ ಅಮಾವಾಸ್ಯೆ ಅವರಿಗೆ ಸಚಿವರು ಕೃತಕ ಕಾಲನ್ನು ಜೋಡಣೆ ಮಾಡಿದರು. ಕಾರ್ಯಕ್ರಮದಲ್ಲಿ ಮೈಸೂರು ವಿಭಾಗೀಯ ಆಯುಕ್ತ ಪ್ರಕಾಶ್, ಜಿಪಂ ಸಿಇಓ ಪೂರ್ಣಿಮಾ, ಎಸ್ಪಿ ಆರ್.ಚೇತನ್, ಎಡಿಸಿ ಮಂಜುನಾಥ್ ಸ್ವಾಮಿ, ಎನ್ ಬೇಗೂರು ಗ್ರಾಪಂ ಅಧ್ಯಕ್ಷೆ ಸುಶೀಲಮ್ಮ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಮಠ (ಕ): ಬೆ.10ಕ್ಕೆ, ಅಬ್ಬರ (ಕ): ಮ.1.05ಕ್ಕೆ, ರಾ.10.05ಕ್ಕೆ, ಕಾಲಗ ತಲೈವನ್ (ತ): ಸಂ.4ಕ್ಕೆ, ಉಂಚೈ (ಹಿಂ): ಸಂ.6.55ಕ್ಕೆ.
ಸ್ಕ್ರೀನ್ 3	ಗಂಧದ ಗುಡಿ (ಕ): ಬೆ.10.05ಕ್ಕೆ, ಮ.12.05ಕ್ಕೆ, ಮ.2.10ಕ್ಕೆ, ಯಶೋಧಾ (ತೆ): ಸಂ.4.15ಕ್ಕೆ, ದೃಶ್ಯಂ–2 (ಹಿಂ): ರಾ.7.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ದೃಶ್ಯಂ–2 (ಹಿಂ): ಬೆ.10.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ದೃಶ್ಯಂ–2 (ಹಿಂ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 2	ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಮಠ (ಕ): ಬೆ.11.30ಕ್ಕೆ, ಖಾಸಗಿ ಪುಟಗಳು (ಕ): ಮ.2.35ಕ್ಕೆ, ಅಬ್ಬರ (ಕ): ಸಂ.5ಕ್ಕೆ, ಗಂಧದ ಗುಡಿ (ಕ): ರಾ.8ಕ್ಕೆ, ಕಾಲಗ ತಲೈವನ್ (ತ): ರಾ.10.10ಕ್ಕೆ.
ಸ್ಕ್ರೀನ್ 4	ದೃಶ್ಯಂ–2 (ಹಿಂ): ಬೆ.10.45ಕ್ಕೆ, ರಾ.10.30ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.5ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಅಬ್ಬರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೃಶ್ಯಂ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗಂಧದ ಗುಡಿ (ಕ) ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬನಾರಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಾನ್ ಮಿರುಗಮ್ಮೈ ಮಾರಾ (ತ)	2 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ಅಬ್ಬರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಬ್ಬರ (ಕ)	4 ಪ್ರದರ್ಶನಗಳು
ಪ್ರಭಾ	
ದಿಲ್ ಪಸಂದ್ (ಕ)	4 ಪ್ರದರ್ಶನಗಳು

ಪ.ಮಲ್ಲೇಶ್ ಹೇಳಿಕೆ ಖಂಡಿಸಿ ಪಂಜಿನ ಮೆರವಣಿಗೆ



ನಂಜನಗೂಡು, ನ.19– ಬ್ರಾಹ್ಮಣ ಸಮುದಾಯವನ್ನು ಅವಹೇಳನ ಮಾಡಿರುವ ವಿಚಾರವಾದಿ ಪ.ಮಲ್ಲೇಶ್ ಹೇಳಿಕೆಯನ್ನು ಸಮುದಾಯ ತೀವ್ರವಾಗಿ ಖಂಡಿಸುತ್ತದೆ ಎಂದು ತಾಲೂಕು ಬ್ರಾಹ್ಮಣ ಸಹಾಯಕ ಸಭಾ ಅಧ್ಯಕ್ಷ ಆರ್.ಗೋವರ್ಧನ್ ತಿಳಿಸಿದರು.

ನಗರದ ಚಿಂತಾಮಣಿ ಗಣಪತಿ ದೇವಾಲಯದ ಮುಂಭಾಗ ಶನಿವಾರ ಸಂಜೆ ಪ.ಮಲ್ಲೇಶ್ ವಿರುದ್ಧ ನಡೆದ ಪ್ರತಿಭಟನಾ ಸಭೆ ಹಾಗೂ ಪಂಜಿನ ಮೆರವಣಿಗೆಯಲ್ಲಿ ಅವರು ಮಾತನಾಡಿದರು.

ಪ.ಮಲ್ಲೇಶ್‌ಗೆ ಅರಳು–ಮರುಳು. ಸ್ಥಿಮಿತ ಕಳೆದುಕೊಂಡ ಮೇಲೆ ಮನೆಯಲ್ಲಿರಬೇಕು. ಬ್ರಾಹ್ಮಣ ಸಮಾಜ ನಿಂದಿಸುವ ಮೂಲಕ ಸಮಾಜದಲ್ಲಿ ಅಶಾಂತಿ ಉಂಟು ಮಾಡುತ್ತಿದ್ದಾರೆ. ಹೀಗಾಗಿ ಅವರು ಬೇಷರತ್ ಕ್ಷಮೆಯಾಚಿಸಬೇಕು. ಬ್ರಾಹ್ಮಣರು ಶೇ.5 ಇದ್ದು, ಶೇ.95ರಷ್ಟು ಇರುವ ಶೂದ್ರರು ತಿರುಗಿ ಬಿದ್ದರೆ ಉಳಿಗಾಲವಿಲ್ಲ ಎಂಬ ಹೇಳಿಕೆ ನೀಡಿ, ಬ್ರಾಹ್ಮಣ ವಿರುದ್ಧ ಜನರನ್ನು ಪ್ರಚೋದಿಸುತ್ತಿದ್ದಾರೆ. ಬ್ರಾಹ್ಮಣ ಸಮಾಜ ಪ.ಮಲ್ಲೇಶ್ ವಿರುದ್ಧ ರಾಜ್ಯಾದ್ಯಂತ ಹೋರಾಟ ನಡೆಸುತ್ತದೆ. ಅವರ ವಿರುದ್ಧ ದೂರು ನೀಡಲಾಗಿದ್ದು, ಈ ಪ್ರಕರಣ ತಾರ್ಕಿಕ ಅಂತ್ಯ ಕಾಣುವವರೆಗೆ ಹೋರಾಟ ಮುಂದುವರೆಸಲಾಗುವುದು ಎಂದರು.

ಪ್ರತಿಭಟನಾಕಾರರು ನಗರದ ಪ್ರಮುಖ ಬೀದಿಗಳಲ್ಲಿ ಪ.ಮಲ್ಲೇಶ್ ವಿರುದ್ಧ ಧಿಕ್ಕಾರ ಕೂಗುತ್ತಾ ಪಂಜಿನ ಮೆರವಣಿಗೆ ನಡೆಸಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಯು.ಎನ್.ಪದ್ಮನಾಭರಾವ್, ಗೋಪಾಲ್ ರಾವ್, ರಂಗನಾಥ್, ಗೋಪಿನಾಥ್, ಗುರುರಾಜ್, ಇಂದಿರೇಶ್, ಅನಂತರಾಮು, ಸತೀಶ್ ದಳವಾಯಿ, ಬಾಲಸುಬ್ರಹ್ಮಣ್ಯ, ನಾಗಸಂದರ, ಸುಧಾ, ಮುರುಳಿ, ರವಿ ಕುಮಾರ್, ನಂದೀಶ್, ಶ್ರೀಕಂಠ ಪ್ರಸನ್ನ, ಉಮೇಶ್ ಉಪಸ್ಥಿತರಿದ್ದರು.

ಬನ್ನೂರು ಪುರಸಭೆಯಲ್ಲಿ ಅಕ್ರಮ ಖಾತೆ: ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮಕ್ಕೆ ಆಗ್ರಹ



ತಿ.ನರಸೀಪುರ, ನ.19– ತಾಲೂಕಿನ ಬನ್ನೂರು ಪುರಸಭೆಯಲ್ಲಿ ಅಕ್ರಮ ಖಾತೆ ಮಾಡಲಾಗುತ್ತಿದ್ದು, ಪೌರಾಡಳಿತ ನಿರ್ದೇಶಕರು ಹಾಗೂ ಜಿಲ್ಲಾಧಿಕಾರಿಗಳು ಪುರಸಭೆ ವ್ಯಾಪ್ತಿಯ ಎಲ್ಲಾ ಖಾತೆಗಳನ್ನು ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಬನ್ನೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಪ.ಪಂಗಡ ವಿಭಾಗದ ಅಧ್ಯಕ್ಷ ಬಿ.ಎಂ.ಸತೀಶ್ ನಾಯಕ್ ಒತ್ತಾಯಿಸಿದ್ದಾರೆ.

ಬನ್ನೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪುರಸಭೆ ಡಾಟಾ ಎಂಟ್ರಿ ಆಪರೇಟರ್ ಎಸ್.ಎನ್.ಗುರುದತ್ತ ಚಕ್ರವರ್ತಿ ಪುರಸಭೆಯಲ್ಲಿ ಮಾಡಿರುವ ಹಗರಣ ಲೆಕ್ಕಕ್ಕೆ ಸಿಗದಷ್ಟಿದ್ದು, ಸ್ಥಳೀಯ ರಾಜಕಾರಣಿಗಳ ಒತ್ತಡದಿಂದ ಇವರ ಮೇಲೆ ಯಾವುದೇ ದೂರು ದಾಖಲಾಗಿಲ್ಲ. ಇತ್ತೀಚೆಗೆ ಪುರಸಭೆ 18ನೇ ವಾರ್ಡ್ ಕೆಂಪೇಗೌಡ ಬಡಾವಣೆಗೆ ಸಂಬಂಧಿಸಿದಂತೆ ಶಂಕರೇಗೌಡ ಅವರ ಖಾಲಿ ನಿವೇಶನಕ್ಕೆ ಇ–ಆಸ್ತಿ ನಮೂನೆ–3 ಮಾಡಿಸಿಕೊಡುವುದಾಗಿ ತಮ್ಮ ಸಂಬಂಧಿ ಕುಮಾರ್ ಮೂಲಕ 2 ಲಕ್ಷ ರೂ. ಪಡೆದು ಮುಖ್ಯಾಧಿಕಾರಿ ಡಿಜಿಟಲ್ ಸಹಿ ಇಲ್ಲದೇ ಆರ್‌ಐ ಮತ್ತು ಆರ್‌ಓಗಳ ಮಹಜರ್ ವರದಿ ಮತ್ತು ಕಚೇರಿ ಟಿಪ್ಪಣಿ ಇಲ್ಲದೇ ನಮೂನೆ 3ರ ನಕಲನ್ನು ಶಂಕರೇಗೌಡರಿಗೆ ನೀಡುವ ಮೂಲಕ ಅಕ್ರಮ ವೆಸಗಿದ್ದಾರೆ. ನಮೂನೆ–03ರ ಆಧಾರದ ಮೇಲೆ ಶಂಕರೇಗೌಡ ಮತ್ತು ಅವರ ಪತ್ನಿ ಭಾಗ್ಯ, ಮಗ ದಿಲೀಪ್ ಕುಮಾರ್ ಮೂವರು ಈ ನಿವೇಶನ ಕುಂತನಹಳ್ಳಿ ಗ್ರಾಮದ ಪಿ.ವೆಂಕಟೇಶ್ ಅವರ ಹೆಸರಿಗೆ ಬನ್ನೂರು ಉಪ ನೋಂದಣಿ ಕಚೇರಿಯಲ್ಲಿ ಶುದ್ಧ ಕ್ರಯ ಮಾಡಿ ರಿಜಿಸ್ಟರ್ ಮಾಡಿಸಿದ್ದಾರೆ.

ನಂತರ ವೆಂಕಟೇಶ್ ತಮ್ಮ ಹೆಸರಿಗೆ ಖಾತೆ ಮಾಡಿಸಲು ಪುರಸಭೆಗೆ ಅರ್ಜಿ ಸಲ್ಲಿಸಲಾಗಿ ಮುಖ್ಯಾಧಿಕಾರಿಗಳ ಲಾಗಿನ್‌ನಲ್ಲಿ ನಾಟ್ ಫೌಂಡ್ ಅಥವಾ ಲಭ್ಯವಿರುವುದಿಲ್ಲ ಎಂದು ತೋರಿಸಿದ ನಂತರ ಮೂಲ ದಾಖಲಾತಿ ಪರಿಶೀಲಿಸಲಾಗಿ ಇ–ಆಸ್ತಿ ನಮೂನೆ–03 ಅಕ್ರಮ ಬೆಳಕಿಗೆ ಬಂದಿದೆ. ಅಕ್ರಮ ಖಾತೆ ಮುಖ್ಯಾಧಿಕಾರಿ ಗಮನಕ್ಕೆ ಬಂದಿದ್ದರೂ ಡಾಟಾ ಆಪರೇಟರ್ ಮೇಲೆ ಕ್ರಮ ಜರುಗಿಸದಿರುವುದು ಅನುಮಾನಕ್ಕೆ ಎಡೆ ಮಾಡಿದೆ ಎಂದರು.

ಹೀಗಾಗಿ ಪುರಸಭೆಯಲ್ಲಿ ನಡೆದಿರುವ ಅಕ್ರಮಗಳನ್ನು ಪೌರಾಡಳಿತ ನಿರ್ದೇಶಕರು, ಜಿಲ್ಲಾಧಿಕಾರಿಗಳು ಕೂಡಲೇ ಪರಿಶೀಲಿಸಿ ನ್ಯಾಯ ದೊರಕಿಸಿಕೊಡುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ರೈತ ಮುಖಂಡರಾದ ನಾರಾಯಣ್, ಸುರೇಂದ್ರ, ಕೃಷ್ಣಪ್ಪ ಹಾಜರಿದ್ದರು.

ಇಂದು ಪ್ರತಿಭಾ ಪುರಸ್ಕಾರ, ವಾರ್ಷಿಕ ಸಭೆ

ಹೆಚ್.ಡಿ.ಕೋಟೆ, ನ.19– ತಾಲೂಕು ನಾಯಕ ನೌಕರರ ಸಂಘದಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಾರ್ಷಿಕ ಸಭೆಯನ್ನು ನ.20 ರಂದು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಆಯೋಜಿಸಲಾಗಿದೆ.

ಬೆಳಗ್ಗೆ 10.30ಕ್ಕೆ ನಡೆಯುವ ಕಾರ್ಯಕ್ರಮವನ್ನು ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಲಿದ್ದಾರೆ. ಮಾಜಿ ಶಾಸಕ ಚಿಕ್ಕಣ್ಣ ವಾಲ್ಮೀಕಿ ಭಾವಚಿತ್ರ ಅನಾವರಣ ಮಾಡಲಿದ್ದಾರೆ. ಮೈಸೂರು ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್ ನಿವೃತ್ತರಿಗೆ ಸನ್ಮಾನ ಮಾಡಲಿದ್ದು, ಸಂಘದ ಅಧ್ಯಕ್ಷ ಸಿದ್ದನಾಯಕ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ಸಂಘದ ಗೌರವಾಧ್ಯಕ್ಷ ಚಿಕ್ಕನಾಯಕ, ತಹಸೀಲ್ದಾರ್ ರತ್ನಾಂಬಿಕಾ, ಪುರಸಭಾಧ್ಯಕ್ಷೆ ಅನಿತಾ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ವಿತರಣೆ



ಹುಣಸೂರು, ನ.19– ನಗರಸಭೆ ಹಾಗೂ ರಾಷ್ಟ್ರೀಯ ಜೀವನೋಪಾಯ ಅಭಿಯಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಇಲಾಖೆ ವತಿಯಿಂದ ನಗರದ 315 ಬೀದಿ ಬದಿ ವ್ಯಾಪಾರಿಗಳಿಗೆ ಶಾಸಕ ಹೆಚ್.ಪಿ. ಮಂಜುನಾಥ್ ಗುರುತಿನ ಚೀಟಿ ವಿತರಿಸಿದರು.

ನಂತರ ಮಾತನಾಡಿದ ಶಾಸಕರು, 2016ರಲ್ಲಿ ಬೀದಿ ಬದಿ ವ್ಯಾಪಾರಿಗಳ ಬಗ್ಗೆ ಸಮೀಕ್ಷೆ ಮಾಡಿ ಅವರ ರಕ್ಷಣೆ ಹಾಗೂ ನಿಗದಿತ ಸ್ಥಳಗಳಲ್ಲಿ ವ್ಯಾಪಾರ ಮಾಡಲು ಅನುಕೂಲವಾಗುವಂತೆ ಸ್ಥಳೀಯ ಸಂಸ್ಥೆಗಳ ಮೂಲಕ ಬೀದಿ ಬದಿ ವ್ಯಾಪಾರಿಗಳ ಸಮಸ್ಯೆ ಹಾಗೂ ಅಹವಾಲು ತಿಳಿಯಲು ಸಮಿತಿ ರಚನೆ ಮಾಡಿ ಅವರ ಆರ್ಥಿಕಾಭಿವೃದ್ಧಿಗೆ ಹಂತ ಹಂತವಾಗಿ ಸಾಲ ಸೌಲಭ್ಯ ನೀಡಲು ಅವಕಾಶ ಮಾಡಿ ಕೊಡಲಾಗಿತ್ತು. ಪ್ರಸ್ತುತ ನಗರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ 709 ಮಂದಿ ಬೀದಿಬದಿ ವ್ಯಾಪಾರಿಗಳಿಗೆ ತಲಾ 10 ಸಾವಿರಗಳನ್ನು ಶೇ.7ರ ಬಡ್ಡಿ ದರದಲ್ಲಿ ಸಾಲ ನೀಡಿ 10 ತಿಂಗಳ ಕಾಲಾವಧಿಯಲ್ಲಿ ಸಾಲ ತೀರಿಸಲು ಅವಕಾಶ ನೀಡಲಾಗಿದ್ದು ನಂತರ 10 ಸಾವಿರ ಸಾಲ ತೀರಿಸಿದವರಿಗೆ ಮತ್ತೆ 20 ಸಾವಿರ ರೂ ಇದೇ ಬಡ್ಡಿದರ, ಕಾಲಾವಧಿಯಲ್ಲಿ ಸಾಲ ತೀರಿಸಲು ಅವಕಾಶ ಮಾಡಿಕೊಡಲಾಗಿದೆ ಎಂದರು.

ಈ ವೇಳೆ ನಗರಸಭೆ ಆಯುಕ್ತೆ ಮಾನಸ, ನಗರಸಭಾಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ ಕೃಷ್ಣನಾಯಕ್, ಸ್ಥಾಯಿ ಸಮಿತಿ ಅಧ್ಯಕ್ಷೆ ಶ್ವೇತಾ, ಹುಡಾ ಸದಸ್ಯ ಸ್ವಾಮಿಗೌಡ ಸೇರಿದಂತೆ ನಗರಸಭಾ ಸದಸ್ಯರು ಹಾಗೂ ನೌಕರವರ್ಗ ಹಾಜರಿದ್ದರು.

ನ.28, ದೇಶೇಶ್ವರಸ್ವಾಮಿ, ಪಾರ್ವತಿ ಅಮ್ಮನವರ ದೇವಾಲಯ ರಾಜಗೋಪುರ ಕಳಸ ಪ್ರತಿಷ್ಠಾಪನೆ



ಮೂಗೂರು, ನ.19– ದೇಶೇಶ್ವರಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ದೇವಾಲಯದ ರಾಜಗೋಪುರಕ್ಕೆ ನ.28 ರಂದು ಕಳಸ ಪ್ರತಿಷ್ಠಾಪನೆ ಮಾಡಲಾಗುವುದು ಎಂದು ದೇವಾಲಯದ ಟ್ರಸ್ಟ್ ಮುಖ್ಯಸ್ಥರೂ ಆದ ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ಮೂಗೂರು ಗ್ರಾಮಕ್ಕೆ ಭೇಟಿ ನೀಡಿ ಸ್ಥಳೀಯ ಮುಖಂಡರೊಂದಿಗೆ ಚರ್ಚಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆ.21 ರಂದು ನಡೆದ ಶ್ರೀತ್ರಿಪುರಸುಂದರಿ ಅಮ್ಮನವರ ರಾಜಗೋಪುರದ ಕಳಸ ಪ್ರತಿಷ್ಠಾಪನೆ ಮಾದರಿಯಲ್ಲೇ ದೇವಗಿರಿ ಎಂದು ಪ್ರಖ್ಯಾತಿ ಪಡೆದ ಶ್ರೀಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿಸಲ್ಪಟ್ಟ ಐತಿಹಾಸಿಕ ಕ್ಷೇತ್ರವಾದ ಗ್ರಾಮದ ಶ್ರೀದೇಶೇಶ್ವರ ಸ್ವಾಮಿ ರಾಜಗೋಪುರ ಹಾಗೂ ಶ್ರೀ ಪಾರ್ವತಿ ಅಮ್ಮನವರ ದೇಗುಲಕ್ಕೆ ನ.28 ರಂದು ಮುಂಜಾನೆ 4 ಗಂಟೆಯ ಬ್ರಾಹ್ಮಿ ಮುಹೂರ್ತದಲ್ಲಿ ನೂತನ ಕಳಸ ಪ್ರತಿಷ್ಠಾಪನೆ ಮಾಡಲಾಗುವುದು. ಈ ಕಾರ್ಯಕ್ರಮಕ್ಕೆ ಸ್ಥಳೀಯ ಜನಪ್ರತಿನಿಧಿಗಳು, ಗ್ರಾಮಸ್ಥರು, ಮುಖಂಡರು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಈ ವೇಳೆ ಶ್ರೀತ್ರಿಪುರ ಸುಂದರಿ ಅಮ್ಮನವರ ಸೇವಾ ಟ್ರಸ್ಟ್ ರಾಜ್ಯ ಸಂಚಾಲಕ ಧರಣೀಶ್, ಟ್ರಸ್ಟ್ ಅಧ್ಯಕ್ಷ ಲಿಂಗಪ್ಪ, ನಿರ್ದೇಶಕ ಶಿವಣ್ಣ, ಹರೀಶ್, ಮುಖಂಡರಾದ ಮಾಜಿ ಪ್ರಧಾನ ಎಂ.ಡಿ.ಬಸವರಾಜು, ಎಂ.ಪಿ.ನಾಗರಾಜು, ಪ್ರಧಾನ ಅರ್ಚಕ ಸುಬ್ರಹ್ಮಣ್ಯ, ಅಜೇಯ ಶಾಸ್ತ್ರಿ, ಸುಂದ್ರಪ್ಪ, ಎಂ.ಬಿ.ಮಹೇಂದ್ರಕುಮಾರ್ ಇತರರಿದ್ದರು.

ಬಿಜೆಪಿ ದುರಾಡಳಿತ, ಜೆಡಿಎಸ್ ಅವಕಾಶವಾದಿ ರಾಜಕಾರಣದ ಹಿನ್ನೆಲೆ

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿಶ್ವಾಸ



ತಿ.ನರಸೀಪುರ ನ.19– ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರದ ದುರಾಡಳಿತ, ಆಡಳಿತ ವೈಫಲ್ಯ ಹಾಗೂ ಜೆಡಿಎಸ್‌ನ ಅವಕಾಶವಾದ ರಾಜಕಾರಣ ಅರಿತಿರುವ ಜನರು ಮುಂಬರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲಿದ್ದಾರೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ವಾಟಾಳು ಗ್ರಾಮದಲ್ಲಿ ಶನಿವಾರ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಹಲವು ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡು ಮಾತನಾಡಿದ ಅವರು, ಮತ್ತೊಮ್ಮೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದು ಕ್ಷೇತ್ರದಲ್ಲಿ ಕುಂಠಿತಗೊಂಡಿರುವ ಅಭಿವೃದ್ಧಿ ಕೆಲಸ ಪ್ರಾರಂಭಿಸೋಣ ಎಂದರು.

2008, 2018ರ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತವಿರಲಿಲ್ಲ. ವಿಪಕ್ಷಗಳ ಶಾಸಕರನ್ನು ಖರೀದಿಸಿ, ಸರ್ಕಾರ ರಚಿಸಿದ್ದರ ಕೆಟ್ಟ ಪರಿಣಾಮವಾಗಿ ರಾಜ್ಯಕ್ಕೆ ಮೂವರು ಮುಖ್ಯಮಂತ್ರಿಗಳಾದರು. ಇನ್ನೂ ಜೆಡಿಎಸ್‌ಗೆ ಸ್ವಂತ ಬಲದ ಮೇಲೆ ಸರ್ಕಾರ ರಚಿಸುವುದು ಸಾಧ್ಯವಿಲ್ಲ. ಅತಂತ್ರ ವಿಧಾನಸಭೆಗೆ ಹೊಂಚು ಹಾಕಿ ಕುಳಿತಿರುತ್ತಾರೆ. ಹಾಗಾಗಿ ರಾಜ್ಯ ಮತ್ತು ಕ್ಷೇತ್ರದ ಜನರು ಜನಪರ ಸರ್ಕಾರಕ್ಕಾಗಿ ಕಾಂಗ್ರೆಸ್ ಪಕ್ಷ ಬೆಂಬಲಿಸಬೇಕು ಎಂದು ಕರೆ ನೀಡಿದರು.

ಭವನದ ಭೂಮಿ, ಅನುದಾನ ಉಳಿಸಿಕೊಳ್ಳದ ಶಾಸಕ: ಸರ್ಕಾರ ಕಳೆದ ಮೂರೂವರೆ ವರ್ಷಗಳಿಂದ ಯಾವುದೇ ಯೋಜನೆಗೂ ಅನುದಾನ ಕೊಟ್ಟಿಲ್ಲ. ಸರ್ಕಾರದ ಅವಧಿಯಲ್ಲಿ ತಾಲೂಕು ಮಟ್ಟದ ಉಪ್ಪಾರರ ಸಮುದಾಯ ಭವನಕ್ಕೆ ನೀಡಿದ್ದ ಭೂಮಿ ಮತ್ತು 1 ಕೋಟಿ ರೂ. ಅನುದಾನವನ್ನು ಈಗಿನ ಶಾಸಕರು ಉಳಿಸಿಕೊಂಡಿಲ್ಲ ಎಂದು ಆರೋಪಿಸಿದ ಮಹದೇವಪ್ಪ, ವಿಪಕ್ಷ ನಾಯಕ ಸಿದ್ದರಾಮಯ್ಯ ಸಿಎಂ ಆಗಿದ್ದ ಅವಧಿಯಲ್ಲಿ ಜನರ ಬದುಕನ್ನು ಹಸನುಗೊಳಿಸುವ ಅನ್ನಭಾಗ್ಯದಂತಹ ಯೋಜನೆಗಳೊಂದಿಗೆ ಉತ್ತಮ ಆಡಳಿತ ಬಯಸುತ್ತಿರುವುದರಿಂದ 2023ರ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ಖಚಿತ ಎಂದರು.

'ಕೈ' ಹಿಡಿದ ಬಿಜೆಪಿ, ಜೆಡಿಎಸ್ ಮುಖಂಡರು: ಸಭೆಯಲ್ಲಿ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ನಾಯಕತ್ವ ಬೆಂಬಲಿಸಿ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಮ್ಮುಖದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರಾದ ಗೌಡ್ರು ಶಿವಸ್ವಾಮಿ, ರಂಗಯ್ಯ, ರವಿ, ರಾಚಯ್ಯ, ಯೋಗೇಶ್, ಸಿದ್ದೇಶ್, ಗೋವಿಂದ ನಾಯಕ, ವಿ.ಬಿ.ಮಹದೇವನಾಯಕ, ಆದಿಬೆಟ್ಟಹಳ್ಳಿ ಶಿವರಾಮೇಗೌಡ, ಗುಂಡು ಅರಸು, ಸುಜ್ಜಲೂರು ಗ್ರಾಮದ ಉಮೇಶ, ನಂಜುಂಡಸ್ವಾಮಿ, ನಂಜಯ್ಯ, ಪುಟ್ಟಮಾದಪ್ಪ, ವಾಟಾಳುಪುರ ಗ್ರಾಮದ ಸಂತೋಷ್, ನಾಗೇಶ್ ಹಾಗೂ ನಿವೃತ್ತ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಹದೇವಯ್ಯ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

> ಪಕ್ಷ ಸಂಘಟನೆಯಲ್ಲಿ ನ್ಯೂನತೆ, ಭಿನ್ನಾಭಿಪ್ರಾಯ ಸರಿಪಡಿಸಿಕೊಂಡು ಮುಖಂಡರು ಮತ್ತು ಕಾರ್ಯಕರ್ತರ ನಡುವಿನ ಬಾಂಧವ್ಯ ಬೆಸೆದು ಪಕ್ಷದ ಸಂಘಟನೆ ಬಲಪಡಿಸಲು ಸಭೆ ಕರೆಯಲಾಗಿದೆ. ಯಾವುದೇ ಸಲಹೆಗಳನ್ನು ಕಾರ್ಯಕರ್ತರು ಮುಕ್ತವಾಗಿ ನೀಡಬೇಕು. ಎಲ್ಲರೂ ಒಗ್ಗಟ್ಟಿನಿಂದ ಕ್ಷೇತ್ರ ಗೆಲ್ಲಲು ಪ್ರತಿಯೊಬ್ಬ ಮತದಾರರನ್ನು ಖುದ್ದಾಗಿ ಭೇಟಿ ಮಾಡಿ, ಮನವೊಲಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡೋಣ.
> – ಸುನೀಲ್ ಬೋಸ್, ಯುವ ಮುಖಂಡ.

ಸಭೆಯಲ್ಲಿ ಗ್ರಾಪಂ ಅಧ್ಯಕ್ಷೆ ಚೆನ್ನಾಜಮ್ಮ, ಉಪಾಧ್ಯಕ್ಷ ಸೋಮಣ್ಣ, ಮಾಜಿ ಅಧ್ಯಕ್ಷ ನಾಗೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಗುತ್ತಿಗೆದಾರ ರಾಚೇಗೌಡ, ಪಿಎಸಿಎಸ್ ಮಾಜಿ ಅಧ್ಯಕ್ಷ ಎ.ಬಿ.ಮಂಜುನಾಥ್, ಎಂ.ಶಿವಣ್ಣ, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಉಮೇಶ, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ನಾಗರಾಜು, ಮುಖಂಡರಾದ ಹ್ಯಾಕನೂರು ಬಸವಣ್ಣ, ಎಂ.ನಿಂಗಪ್ಪ, ಎಂ.ನಾಗರಾಜು, ದೇವಾನಂದ, ಎಂ.ಗುರುಮಲ್ಲಪ್ಪ ಶಿವಣ್ಣ ಪ್ರಭು, ಸುಜ್ಜಲೂರು ಶಿವಯ್ಯ, ಲಕ್ಷ್ಮೀನಾರಾಯಣ, ಗೋಪಾಲ್, ಬಸವರಾಜ್ ಇನ್ನಿತರರಿದ್ದರು.

ಪತ್ನಿ, ಮಕ್ಕಳಿಗೆ ಸುತ್ತಿಗೆಯಿಂದ ಹೊಡೆದಿದ್ದ ಆರೋಪಿ ಸೆರೆ



ಜಯಪುರ, ನ.19– ಪತ್ನಿ ಹಾಗೂ ಮಕ್ಕಳ ಮೇಲೆ ಸುತ್ತಿಗೆಯಿಂದ ಹೊಡೆದಿದ್ದ ಆರೋಪಿಯನ್ನು ಜಯಪುರ ಠಾಣಾ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜಯಪುರ ಹೋಬಳಿಯ ಉದ್ದೂರು ಗ್ರಾಮದ ನಿವಾಸಿ ಸ್ವಾಮಿನಾಯಕ ಬಂಧಿತ ಆರೋಪಿ. ಈತ ಗುರುವಾರ ರಾತ್ರಿ ಪತ್ನಿ ಹಾಗೂ ಮಕ್ಕಳ ಮೇಲೆ ಸುತ್ತಿಗೆಯಿಂದ ಹೊಡೆದು ಪರಾರಿಯಾಗಿದ್ದ ಈತನನ್ನು ಜಯಪುರ ಠಾಣಾ ಪೊಲೀಸರು ಶನಿವಾರ ಕೆಲ್ಲಹಳ್ಳಿ ಸರ್ಕಲ್‌ನಲ್ಲಿ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ವಿಚಾರಣೆ ವೇಳೆ ಆತ ಸಾಲಬಾಧೆಯಿಂದ ನಾನೇನಾದರೂ ಮರಣ ಹೊಂದಿದರೆ ನನ್ನ ಮಕ್ಕಳನ್ನು ನೋಡಿಕೊಳ್ಳುವವರು ಯಾರು ಎಂದು ಈ ಕೃತ್ಯ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಪಿಎಸ್‌ಐ ಸದಾಶಿವ, ತಿಪಾರೆಡ್ಡಿ, ಸಿಬ್ಬಂದಿಗಳಾದ ದಸ್ತಗೀರ್, ಹರೀಶ್ ಕಾರ್ಯಚರಣೆಯಲ್ಲಿ ಇದ್ದರು



4ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು
ಚಿರು ನಾಯಕ್
ಮಗನೇ
ಶ್ರೀ ತಾಯಿ ಚಾಮುಂಡೇಶ್ವರಿಯು ಆಯಸ್ಸು - ಆರೋಗ್ಯ ಕೊಟ್ಟ ಕಾಪಾಡಲಿ
ಶುಭ ಕೋರುವವರು: ಹೈಟೆಕ್ ಫ್ಲವರ್ ಪಾಂಡು ಬಾಯ್ಸ್.., ತಿ.ನರಸೀಪುರ
ಸಂಪರ್ಕಿಸಿ: 8495907388

ATTENTION HOUSE OWNERS / BUILDERS
AURA PLY CLUB
PLY FOR LYF
FACTORY DEPOT RATES | BORER PROOF | 25 YEAR WARRANTY
9901291267 / www.ssbuildmart.com

Nakhsha HOMES
COMPLETE CONSTRUCTION AT JUST
₹1899* Per Sq. Ft. (Incl of GST) T&C Apply
- 100% Ultratech Cement
- SK / Meenakshi Steel
- Wardrobes and Kitchen Cabinets
- Nakhsha True Service For 12 Months

Call: +91 70221 24411 / +91 96069 66266

ಅಪ್ಪನಿಲ್ಲದ ಮೊದಲ ವರ್ಷ



ಶ್ರೀ ಕೆ.ಇ.ವಾಸುದೇವ ರಾವ್
ಅಕೌಂಟ್ ಸೂಪರಿಟೆಂಡೆಂಟ್, ಆರ್‌ಟಿಓ, ಮೈಸೂರು
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾದರೂ ನಿಮ್ಮ ನೆನಪು ಸದಾ ಹಚ್ಚ ಹಸಿರು, ನಿಮ್ಮ ನಡೆ-ನುಡಿ ನಮಗೆ ಆದರ್ಶ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಡೆಯುತ್ತಿರುವ
ಪತ್ನಿ ಕೆ.ಶೋಭ, ಪುತ್ರ ವಿಕ್ರಮ್ ವಾಸುದೇವ ರಾವ್
ಪೂಜಾ ಕಾರ್ಯಕ್ರಮ : ದಿನಾಂಕ 21.11.2022
ಶ್ರೀರಾಂಪುರದಲ್ಲಿರುವ ಸ್ವಗೃಹದಲ್ಲಿ

30% off till Dec. 20, 2022
STUDIO11 salon&spa
India's Favorite Salon & Spa!
Now at Mysore, Vijayanagar 4th Stage
Grand Launch
On 20th Nov'22
HAIR | SKIN | SPA | BRIDAL | TREATMENTS
Come and Look Fabulous!
0821-3502004 | 0821-3501117
7689, Double Road, 1st Floor, Surya Complex, Vijay Nagar, 4th Stage, 2nd Phase Ilavala Hobli, Mysore - 570017. LM - Next to Mysore Mylari Restaurant.

ಮೂಡ ಅನುಮೋದಿತ
20X30 ಸೈಟ್‌ಗಳನ್ನು ಅಥವಾ 1 ಬಿಹೆಚ್‌ಕೆ ಅಪಾರ್ಟ್‌ಮೆಂಟ್ ಅನ್ನು
ಕೇವಲ 25 ಲಕ್ಷಕ್ಕೆ ಖರೀದಿಸಿ
ಲಲಿತಾದ್ರಿಪುರ ರಿಂಗ್ ರೋಡ್‌ನಲ್ಲಿ
ಸಂಪರ್ಕಿಸಿ
97422 56484 / 89713 93144

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಮೈಸೂರು ಜಿಲ್ಲೆಯ ಅತ್ಯಂತ ಅಭಿವೃದ್ಧಿ ಹೊಂದುತ್ತಿರುವ ನಗರದಲ್ಲಿ ಸೈಟ್ ಖರೀದಿಸಿ
ಕೆಆರ್ ನಗರ ಕೇವಲ 9 ಲಕ್ಷಕ್ಕೆ
ಮೈಸೂರು ಕೆಆರ್ ನಗರ ಹೈವೇಯಲ್ಲಿದೆ
ಕೆಆರ್ ನಗರ ಸಿಟಿ ಪಕ್ಕದಲ್ಲಿದೆ
ಸಂಪರ್ಕಿಸಿ
63605 90915 / 98442 05017

3 ರಾಜ್ಯಗಳನ್ನು ಸೇರಿಸುವ ನಗರದಲ್ಲಿ ಸೈಟ್ ಖರೀದಿಸಿ
ಗುಂಡ್ಲುಪೇಟೆಯಲ್ಲಿ ಕೇವಲ 9 ಲಕ್ಷದಿಂದ
ಸೈಟ್ ಪ್ರಾರಂಭವಾಗುತ್ತದೆ
ಸಂಪರ್ಕಿಸಿ
63638 43552 / 99453 44203

Nc SKY VILLAS
30x40 3 BHK Duplex at Bogadhi Road, Concrete Road, Gated community.
RERA Approved.
Rs 57.75 Lakh.
Call : 90714 01234

ನಿವೇಶನ ಮಾರಾಟಕ್ಕಿದೆ
50x80 ಅಳತೆಯ ಪೂರ್ವಕ್ಕೆ, ನಲವತ್ತು ಅಡಿ ರಸ್ತೆಯಲ್ಲಿ ವಿಜಯನಗರ, 2ನೇ ಹಂತ, ಜೋಡಿ ರಸ್ತೆ ಪಕ್ಕ.
9900977993

COMMERCIAL PLOT FOR SALE
37000 Sq.Ft. Commercial Plot for Sale, Next to central Mall, City Centre Mysore.
9945535398


ಮನೆ ಮಾರಾಟಕ್ಕಿದೆ
20x30 N/F ಹೊಸ ಮನೆ, 3BHK @ ವಿಜಯನಗರ 4ನೇ ಹಂತ, 2ನೇ ಫೇಸ್, ಸೋಲಾರ್ (ಮರಿಮಲ್ಲಪ್ಪ ಸ್ಕೂಲ್ ಹತ್ತಿರ)
Good Location
9886173776 / 9632197546

ಕಾಣೆಯಾಗಿದ್ದಾರೆ



ಉಮ್ಮರ್ ಪಾಷಾ
ವಯಸ್ಸು : 48 ವರ್ಷ, ಎತ್ತರ 5.5 ಅಡಿ, ಕಾಣೆಯಾದ ದಿನಾಂಕ: 12.11.2022 ಕಾಣೆಯಾದ ದಿನ ಹಸಿರು ಬಣ್ಣದ ಶರ್ಟ್ ಖಾಕಿ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ದೇವರಾಜ ಮೊಹಲ್ಲಾದ, ಸೀಬಯ್ಯ ರಸ್ತೆಯಲ್ಲಿನ # 2057ರ ಅವರ ಸ್ವಂತ ಮನೆಯಿಂದ ಹೊರ ಹೋದವರು ವಾಪಸ್ಸು ಬಂದಿರುವುದಿಲ್ಲ, ಕಂಡವರು ಸಂಪರ್ಕಿಸಿ
8971882091
9113680776

ನಾಯಿ ಕಾಣೆಯಾಗಿದೆ



ಮೀರಾ
(ಬಿಳಿ ಮತ್ತು ಮರಳಿನ ಬಣ್ಣ ಮಿಶ್ರಿತ) ಬೀಗಲ್ ಜಾತಿಯ ನಾಯಿ, ಕತ್ತಿನಲ್ಲಿ ನೀಲಿ ಬಣ್ಣದ ಕಾಲರ್, ಅದರ ಜೊತೆಗೆ ಪೆಂಡೆಂಟ್ ಮೇಲೆ ಮೀರಾ ಎಂಬ ಹೆಸರಿದ್ದೂ ಕಂಡಲ್ಲಿ ತಕ್ಷಣ ಈ ಸಂಖ್ಯೆಗೆ ಕರೆ ಮಾಡಿ
9686875539
9108035539
ನಾಯಿಯನ್ನು ಹುಡುಕಿ ಕೊಟ್ಟವರಿಗೆ ಸೂಕ್ತ ಬಹುಮಾನ ದೊರೆಯುತ್ತದೆ.

Gated Community PLOTS AT Bogadi Road
Near Peripherel Ring Road
READY TO BUILD 85% BANK LOAN
PRM/KA/RERA/1268/378/PR/181022/002091
Yesh 9538885595

BOOKINGS OPEN FOR
Construction of Brand New Architecture Designed Houses
MUDA APPROVED
20'x40 - 30 Lakhs
30'x40' - 44.99 Lakhs
Near St. Joseph's Central School, Hunsur Road, Mysore.
9740767576, 8884001233

First Quality TEAK Available at Special Price
- 5" x 3"
- 5" x 4"
- 5" x 5"
- 6" x 6"
- 7" x 7"
- 8" x 8"

Call : 63668 33685

ನೈಋತ್ಯ ರೈಲ್ವೆ
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ-ಟೆಂಡರ್ ಪ್ರಕಟಣೆ ಸಂ. ವೈ/ಇ.29/2022-23/36
ದಿನಾಂಕ : 14-11-2022

ಕೆಲಸದ ಹೆಸರು	ಅಂದಾಜು ಮೌಲ್ಯ
ನಂಜನಗೂಡು ಟೌನ್ - ಚಾಮರಾಜನಗರ ಸೆಕ್ಷನ್ ನಡುವೆ ಎಲ್‌ಸಿ ಗೇಟ್‌ಗಳ ಸಂ. 40, 50, 51 ಮತ್ತು 52 ಗಳಿಗೆ ನಿರಂತರ ಜ್ಯೋತಿ ವಿದ್ಯುತ್ ಸರಬರಾಜು ವ್ಯವಸ್ಥೆಗಳನ್ನು ಒದಗಿಸುವುದು.	ರೂ. 9,03,879.16

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06-12-2022 ರಂದು 11:00 ಗಂಟೆವರೆಗೆ

ಇ-ಟೆಂಡರ್ ಪ್ರಕಟಣೆ ಸಂ. ವೈ/ಇ.29/2022-23/37
ದಿನಾಂಕ : 11-11-2022

ಕೆಲಸದ ಹೆಸರು	ಅಂದಾಜು ಮೌಲ್ಯ
ಮೈಸೂರು - ಹಾಸನ ಸೆಕ್ಷನ್ - ಮಂದಗೆರೆ ಮತ್ತು ಮಾವಿನಕೆರೆಯಲ್ಲಿ ಪ್ಲಾಟ್‌ಫಾರಂನ ವಿಸ್ತರಣೆ ಮತ್ತು ಎತ್ತರಿಸುವುದು - ವಿದ್ಯುತ್ ವ್ಯವಸ್ಥೆಗಳು.	ರೂ. 9,62,272/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 02-12-2022 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್, ಮೈಸೂರು
ಪಿಯುಬಿ/492/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23
S.W.Railways SWRRLY SWRRLY

M2 VEG RESTAURANT
Eat in Style
No.94
2nd Floor
KRS Main Road
Gokulam
Book Your Special Occassion
For Reservations 08214055898

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಭಾಗ್ಯಮ್ಮನವರು
ಇವರು ದಿನಾಂಕ 10.11.2022 ಗುರುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 20.11.2022 ಭಾನುವಾರ ಬೆಳಗ್ಗೆ 10.30 ಗಂಟೆಗೆ ಮೃತರ ಸ್ವಗೃಹ ಸಾಹುಕಾರಹುಂಡಿ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾ|| ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

HERITAGE HOMES
MYSURU - HUNSUR HIGHWAY, MYSORE
MEGA RESIDENTIAL TOWNSHIP
MUDA LIMITS
ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೇವಲ ₹550/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಅದ್ವಿಕಾ ವೆಂಚರ್ಸ್
9071386615, 9513301854

ಜೋತಿಷ್ಯ ಮತ್ತು ವಾಸ್ತು
ಲಕ್ಷ್ಮೀನರಸಿಂಹ ಜೋತಿಷ್ಯ ಮಂದಿರ
ನೀವು ಹತ್ತಾರು ಜೋತಿಷ್ಯರಲ್ಲಿ ನಿಮ್ಮ ಸಮಸ್ಯೆಗೆ ಪರಿಹಾರ ಸಿಗದೆ ನೊಂದು ಇರುತ್ತೀರಿ. ಉತ್ತಮ ಮಾರ್ಗದರ್ಶನಕ್ಕಾಗಿ ಸಂಪರ್ಕಿಸಿ, ನಿಮ್ಮ ಸಮಸ್ಯೆಗೆ ವಾಸ್ತುದೋಷ ಮೂಲವಾಗಿರುತ್ತದೆ. ಏಕೆಂದರೆ ಮುಖ್ಯವಾಗಿ ನೀವು ವಾಸ್ತುವಿನ **ಮೂಲ ಆಯವನು** ಮರೆತಿರುತ್ತೀರಿ, ಇದರಿಂದ ಹತ್ತಾರು ಸಮಸ್ಯೆಯಿಂದ ಬಳಲುತ್ತೀರಿ.
ಜಾತಕ ವಾಸ್ತು ಪರಿಶೀಲಿಸಿ ಪರಿಹಾರ ತಿಳಿಸುತ್ತೇವೆ.
ಪಂಡಿತ್: ಸಿದ್ಧಾರ್ಥ ಶರ್ಮ, ಯೋಗ ನರಸಿಂಹಸ್ವಾಮಿ ದೇವಸ್ಥಾನ ಎದುರು ವಿಜಯನಗರ 1ನೇ ಹಂತ, ಮೈಸೂರು
9900218800



Hi! TAXI
ONLY ONE WAY TAXI CHARGE
MYSORE to BANGALORE City drop or Pick up
BANGALORE to MYSORE Airport drop or Pick up
Shakthi Nagar MYSURU
9611177599

ಸಾರ್ವಜನಿಕ ಪ್ರಕಟಣೆಗಾಗಿ

ನಮ್ಮ ಕಕ್ಷಿದಾರರಾದ ಶ್ರೀ ಹೆಚ್.ಎ.ತಮ್ಮಪ್ಪ ಬಿನ್ ಲೇಟ್ ಹೆಚ್.ಎನ್.ಅಪ್ಪಣ್ಣ, ವಯಸ್ಸು ಸುಮಾರು 89 ವರ್ಷಗಳು, ವಾಸ ಮನೆ ನಂ.1944, 14ನೇ ಮೇನ್, ವಿಜಯನಗರ 2ನೇ ಹಂತ, ಸೆಂಟ್ರಲ್ ಸೆಂಟ್ ಜೋಸೆಫ್ ಸ್ಕೂಲ್ ಎದುರು, ಮೈಸೂರು ಇವರು ಈ ಕೆಳಕಂಡ ಷೆಡ್ಯೂಲ್ ನಿವೇಶನವನ್ನು ಅದರ ಕಾನೂನು ಬದ್ಧ ಮಾಲೀಕರಾದ ಮೆ॥ ಕೆಬಿಎಲ್ ಅಂಡ್ ಸನ್ಸ್, ನಂ.01, ಸಿಲಿಕಾನ್ ಸಿಟಿ ಎನ್‌ಕ್ಲೇವ್ ಕುಮಾರ್ ನರ್ಸರಿ, ನ್ಯೂ ಬ್ಯಾಂಕ್ ಕಾಲೋನಿ, ಕೋಣನಕುಂಟೆ ಬೆಂಗಳೂರು, ಪಾಲುದಾರಿಕಾ ಸಂಸ್ಥೆಯ ಪಾಲುದಾರರಾದ ಶ್ರೀ ಎಲ್ ರವಿ ಬಿನ್ ಕೆ.ಬಿ.ಲಕ್ಷ್ಮಣ್ ರವರಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಅಥವಾ ತಂಟೆ - ತಕರಾರು ಇದ್ದರೆ ಈ ಪ್ರಕಟಣೆಯಾದ 14 ದಿನಗಳೊಳಗೆ ನಮ್ಮ ಕಕ್ಷಿದಾರರನ್ನಾಗಲೀ ಅಥವಾ ನಮ್ಮ ಕಚೇರಿಗಾಗಲೀ ಸೂಕ್ತ ದಾಖಲಾತಿಗಳೊಂದಿಗೆ ಖುದ್ದು ಭೇಟಿ ಮಾಡುವಂತೆ ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು: ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಕುಪ್ಪೆದಡ (ಬಸ್ತೀಪುರ) ಗ್ರಾಮದ ಸರ್ವೆ ನಂ. 2, 3, 4/p, 5-p, 8/p, 20/p, 21, 24, 25/p, 26, 27, 28, 29, 30, 31, 32, 33, 34/p, 35/p, 37/p, 41/p, 42, 43, 44, 45 ರಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಿರ್ಮಿಸಿರುವ ಕೆಬಿಎಲ್ ಸಿಲಿಕಾನ್ ಸಿಟಿ ಬಡಾವಣೆ ನಿವೇಶನ ಸಂಖ್ಯೆ : 896 ಪೂರ್ವ-ಪಶ್ಚಿಮ 32.15 + 31.08/2 ಮೀಟರ್, ಉತ್ತರ - ದಕ್ಷಿಣ 33.00 + 26.71/2 ಮೀಟರ್ ಒಟ್ಟು 954.61 ಚದರ ಮೀಟರ್ ವಿಸ್ತೀರ್ಣವುಳ್ಳ ನಿವೇಶನಕ್ಕೆ ಚಕ್ಕುಬಂದಿ, ಪೂರ್ವಕ್ಕೆ : ಖಾಸಗಿ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಖಾಸಗಿ ಸ್ವತ್ತು, ಮತ್ತು ದಕ್ಷಿಣಕ್ಕೆ : ರಸ್ತೆ.

ಸಹಿ/- **ಟಿ.ಜಯರಾಮೇಗೌಡ**,
ಬಿ.ಕಾಂ, ಎಲ್.ಎಲ್.ಬಿ. ವಕೀಲರು,
ಕಚೇರಿ ನಂ. 2345, 2ನೇ ಮಹಡಿ, 3ನೇ ಕ್ರಾಸ್, ಪಂಪಾಪತಿ ರಸ್ತೆ, ಕೆ.ಜಿ.ಕೊಪ್ಪಲ್, ಮೈಸೂರು - 570009,
ಮೊ.: 9845584235, 9342111511
ಮೈಸೂರು. ದಿನಾಂಕ: 19-11-2022

ನೈಋತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ. 31/ಎಂವೈಎಸ್/2022
ದಿನಾಂಕ : 14-11-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಮೈಸೂರು : ಅಧಿಕಾರಿಗಳ ವಿಶ್ರಾಂತಿ ಗೃಹ 6 ಸ್ಯೂಟ್‌ಗಳ ಉದ್ದೇಶಿತ ನಿರ್ಮಾಣ.	ರೂ. 1,31,28,689/-
2	ಮೈಸೂರು : ಅಧೀಕ್ಷಕರ ವಿಶ್ರಾಂತಿ ಕೊಠಡಿ 6 ಕೊಠಡಿಗಳ (12 ಬೆಡ್‌ಗಳು) ಉದ್ದೇಶಿತ ಮರು-ನಿರ್ಮಾಣ.	ರೂ. 40,14,348/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06-12-2022ರಂದು 11:00 ಗಂಟೆವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಪಿಯುಬಿ/491/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23 ಮೈಸೂರು
S.W.Railways SWRRLY SWRRLY

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಜವನಮ್ಮ
ಇವರು ದಿ: 09.11.2022 ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ:20.11.2022 ಭಾನುವಾರ ಮಧ್ಯಾಹ್ನ 01.30 ಗಂಟೆಗೆ ಮೃತರ ಸ್ವಗೃಹ #60, ಗೂಡು, ಆರ್.ಎಸ್. ನಾಯ್ಡುನಗರ ಮುಖ್ಯ ರಸ್ತೆ, ಕೆಸರೆ 3ನೇ ಹಂತ, ವಾಟರ್ ಟ್ಯಾಂಕ್ ಎದುರು, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಶ್ರೀ ಡಿ ಬಸವರಾಜು ಮತ್ತು ಪ್ರೊ.ಡಿ.ಆನಂದ್ ಹಾಗೂ ಕುಟುಂಬವರ್ಗದವರು

ANNUAL STOCK-CLEARANCE
ಭಾನುವಾರ ತೆರೆದಿರುತ್ತದೆ
UPTO 50% OFF ಮಾರಾಟ
DEBIT & CREDIT CARDS AVAILABLE
AFTER % Rs. 32500/- | AFTER % - Rs. 24500/- | AFTER % Rs. 10,500/-
ಉಚಿತ!! 1 ಮಹಾರಾಜ ಸೋಫಾ ಟೀ ಪಾಯಿ ಉಚಿತ | ಉಚಿತ!! 1 ಡೈನಿಂಗ್ ಟೇಬಲ್ ಕಾರ್ನರ್ ಸ್ಟಾಂಡ್ | ಉಚಿತ!! 1 ಡಬಲ್ ಕಾಟ್ ಸೈಡ್ ಟೇಬಲ್
WOODEN HANDCARVED ಪೀಠೋಪಕರಣಗಳು
SALE TILL 22nd NOV NO MORE EXTENSION
100% BURMA TEAKWOOD & SHEESHAM
ಸ್ಥಳ: ರಾಜ್ಯ ಸರ್ಕಾರಿ ನೌಕರರ ಸಂಘದ ಕಟ್ಟಡ ವಾರ್ತಾ ಭವನದ ಹತ್ತಿರ, ಜೆ.ಕೆ.ಗ್ರೌಂಡ್ ಎದುರು, ದಾಸಪ್ಪ ವೃತ್ತದ ಹತ್ತಿರ, ಧನವಂತ್ರಿ ರಸ್ತೆ, ಮೈಸೂರು

ORANGE CITY – MYSORE
RESIDENTIAL PLOTS
@ just Rs.525/- sq.ft.,
Near to new KIADB Land
Dimension
30x40, 30x50, 40x60
Madikeri – Mysore Highway
Call : 97403 91228

ಮೈಸೂರು ಮಿತ್ರ 43
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ಹಸಿರು ನಮ್ಮ ಉಸಿರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಹೆಬ್ಬಾಳು 2ನೇ ಹಂತ, ಮನೆ ನಂ.2579 ರಲ್ಲಿ ವಾಸವಾಗಿರುವ ಲೇಟ್ ನಾಗೇಂದ್ರಪ್ಪ ರವರ ಮಗನಾದ ಸುಮಾರು 36 ವರ್ಷ ವಯಸ್ಸಿನ ಪ್ರೇಂನಾಥ್ ಎನ್ ಯಾದಗಿರ್‌ಕರ್ ರವರು ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ಮನುಗನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 38/2 ರಲ್ಲಿನ 2 ಎಕರೆ 33 ಗುಂಟೆ ಜಮೀನಿನ ಪೈಕಿ 1 ಎಕರೆ 33 ಗುಂಟೆ ಖುಷ್ಕಿ ಜಮೀನನ್ನು (ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳನ್ನು) ಇದರ ಪಸ್ತುತ ಮಾಲೀಕರಾದ ಉಮೇಶ್, ಬಿನ್ ಲೇಟ್ ನಿಂಗೇಗೌಡ ಮತ್ತು ಅರುಣ್ ಕುಮಾರ್, ಬಿನ್ ಲೇಟ್ ನಿಂಗೇಗೌಡ ರವರಿಂದ ಖರೀದಿಸಲು ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರಿಗಾದರು, ಯಾವುದೇ ತರಹದ ಹಕ್ಕು - ಬಾಧ್ಯತೆಗಳು ಇದ್ದ ಪಕ್ಷದಲ್ಲಿ, ಸದರಿ ವ್ಯಕ್ತಿಗಳು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ನಿಮ್ಮ ಹಕ್ಕೂ - ಬಾಧ್ಯತೆಗಳನ್ನು ಈ ಸಾರ್ವಜನಿಕ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗಾಗಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಯಾವುದೇ ಹಕ್ಕು - ಬಾಧ್ಯತೆಗಳು ಇರುವುದಿಲ್ಲವೆಂದು ಭಾವಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತುಗಳ ವಿವರ

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ಮನುಗನಹಳ್ಳಿ ಗ್ರಾಮದಲ್ಲಿರುವ ನಂ.38/2 ರಲ್ಲಿನ 2 ಎಕರೆ 33 ಗುಂಟೆ ಜಮೀನಿನ ಪೈಕಿ 1 ಎಕರೆ 33 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ. ಪೂರ್ವಕ್ಕೆ : ಸರ್ವೆ ನಂ. 39 ರಲ್ಲಿ ಪಿ.ಎಸ್.ಲೀಲಾಧರ ರವರ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ಇದೇ ಸರ್ವೆ ನಂಬರಿನಲ್ಲಿ ಮಾರಾಟಗಾರರ ಉಳಿಕೆ 1 ಎಕರೆ ಜಮೀನು ಮತ್ತು ಸರ್ವೆ ನಂ.38/1 ರ ಜಮೀನು, ದಕ್ಷಿಣಕ್ಕೆ: ಸರ್ವೆ ನಂ.45 ರ ಜಮೀನು.

ಸಹಿ/- **ಕೆ.ಎಸ್.ಮಹದೇವ ಪ್ರಸಾದ್**
ವಕೀಲರು, ನಂ.1028, ಸಿ.ಹೆಚ್.-20/ಡಿ, ಮಳಿಗೆ ಸಂಖ್ಯೆ 2 ಮತ್ತು 3, 1ನೇ ಮಹಡಿ, ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಮೈಸೂರು - 570005.
ಮೊಬೈಲ್ ನಂ. 9164277766

ಸಾರ್ವಜನಿಕ ಸೂಚನೆ

ನಾನು ಕೆಳಗೆ ತಿಳಿಸಿದ ಷೆಡ್ಯೂಲ್ ಆಸ್ತಿಯನ್ನು ಅದರ ಪ್ರಸ್ತುತ ಮಾಲೀಕರಾದ ಶ್ರೀ ಎಚ್.ಎನ್.ಪ್ರಶಾಂತ್, S/o ಎಚ್.ಸಿ.ನಾರಾಯಣ ಅವರಿಂದ ಖರೀದಿಸಲು ಮಾತುಕತೆ ನಡೆಸಿದ್ದೇನೆ, ನಿವಾಸಿ ನಂ. 12, 6ನೇ ಎ ಕ್ರಾಸ್, ಭೂಪಸಂದ್ರ ಹೊಸ ಬಡಾವಣೆ, ಸಂಜಯನಗರ, ದೂರವಾಣಿ ವಿನಿಮಯ ಕೇಂದ್ರ, ಬೆಂಗಳೂರು ಉತ್ತರ, R.M.V ಬಡಾವಣೆ 2ನೇ ಹಂತ, ಬೆಂಗಳೂರು - 560094.

ಯಾವುದೇ ವ್ಯಕ್ತಿಗಳಿದ್ದರೆ, ಸಂಸ್ಥೆಗಳು, ಬ್ಯಾಂಕುಗಳು, ಇತ್ಯಾದಿಗಳು, ಅನುಸೂಚಿ ಆಸ್ತಿಗೆ ಸಂಬಂಧಿಸಿದಂತೆ ಈ ವಹಿವಾಟಿಗೆ ಯಾವುದೇ ಹಕ್ಕುದಾರರು ಅಥವಾ ಆಕ್ಷೇಪಣೆಗಳನ್ನು ಪಡೆದಿದ್ದರೆ ಅದನ್ನು ಪೋಷಕ ದಾಖಲೆಗಳೊಂದಿಗೆ ಲಿಖಿತವಾಗಿ ನನಗೆ ತಿಳಿಸಬಹುದು, ಇಂದಿನಿಂದ 7 (ಏಳು) ದಿನಗಳಲ್ಲಿ. ಇಲ್ಲದಿದ್ದರೆ, ಮಾರಾಟದ ಔಪಚಾರಿಕತೆಗಳನ್ನು ಯಾವುದೇ ಉಲ್ಲೇಖವಿಲ್ಲದೆ ಪೂರ್ಣಗೊಳಿಸಲಾಗುವುದು ಅಥವಾ ಅಂತಹ ಯಾವುದೇ ಉದ್ದೇಶಿತ ಹಕ್ಕುಗಳು ಅಥವಾ ಆಸಕ್ತಿಗಳನ್ನು ಮನ್ನಾ ಮಾಡಲಾಗಿದೆ ಎಂದು ಪರಿಗಣಿಸಲಾಗುತ್ತದೆ.

ವೇಳಾಪಟ್ಟಿ: ಕೃಷಿ ಭೂಮಿ ಹೊಂದಿರುವ Sy.No.196/1, 1 ಎಕರೆ 31 ಗುಂಟಾಗಳು, ಮತ್ತು Sy.No.196/3, 1 ಎಕರೆ 21 ಗುಂಟೆಗಳು, ನವಿಲೂರು ಗ್ರಾಮ, ಸಂತೇಮರಹಳ್ಳಿ ಹೋಬಳಿ ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

ಸಂಪರ್ಕಿಸಿ: ಎಂ.ಆರ್. ಅಶ್ವಥನಾರಾಯಣ, ನಂ.107, 12ನೇ ಮುಖ್ಯರಸ್ತೆ, ಕೆಂಪಾಪುರ ಅಗ್ರಹಾರ, ಬೆಂಗಳೂರು- 560023. ಮೊ.: 9900843040

Sd/- Siddappajichary,
B.Com, LL.B,
Advocate & Notary, KAR 378/9
Opp. Taluk Office, Nanjanagud Raod, T. Narasipura - 571124.

ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರು, ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಲೇಟ್ ಸಿ.ವಿ.ಎಲ್.ಶಾಸ್ತ್ರಿ ರವರ ಧರ್ಮಪತ್ನಿ ಶ್ರೀಮತಿ. ಎ.ಎನ್.ಶಾಸ್ತ್ರಿ ಶಾರದಾ ದೇವಿ. ಮತ್ತು ಇವರ ಮಕ್ಕಳುಗಳಾದ ಶ್ರೀ. ಬಿ.ಎಲ್.ನಾಗೇಂದ್ರ ಪ್ರಸಾದ್, ಶ್ರೀ.ಡಾ.ಎಲ್.ನರೇಂದ್ರ ಪ್ರಸಾದ್ ರವರುಗಳಿಂದ ಖರೀದಿಸುವ ಈರಾದೆಯನ್ನು ಹೊಂದಿ ಕ್ರಯದ ಕರಾರನ್ನು ಮಾಡಿಕೊಂಡಿರುವುದು ಸರಿಯಷ್ಟೆ ಶ್ರೀಮತಿ .ಎ.ಎನ್.ಶಾಸ್ತ್ರಿ ಶಾರದಾ ದೇವಿ. ಮತ್ತು ಇವರ ಮಕ್ಕಳುಗಳಾದ ಶ್ರೀ.ಬಿ.ಎಲ್.ನಾಗೇಂದ್ರ ಪ್ರಸಾದ್, ಶ್ರೀ.ಡಾ.ಎಲ್.ನರೇಂದ್ರ ಪ್ರಸಾದ್ ರವರುಗಳು ಮಾತ್ರ ಮಾಲೀಕರಾಗಿ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಆಸಕ್ತಿ ಮತ್ತು ಸೌಮ್ಯಂಗಳಿಗೂ ಒಳಪಟ್ಟು ಸ್ವಾಧೀನದಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವತಂತ್ರರಾಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೇ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವಾ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ (ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು, ಆಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್ ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಸೂಕ್ತ ದಾಖಲೆಗಳೊಂದಿಗೆ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅದಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ, ಬಾಕಿ ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತು / ಜಮೀನಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಆನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಶ್ರೀರಾಂಪುರ ಗ್ರಾಮದ ಸರ್ವೆ ನಂ.9/1 ರಲ್ಲಿರುವ ವಿಸ್ತೀರ್ಣ 29 ಗುಂಟೆ (ಇಪ್ಪತ್ತೊಂಭತ್ತು ಗುಂಟೆ) ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸಿದ್ದಪ್ಪ ರವರ ಜಮೀನು, ಉತ್ತರಕ್ಕೆ : ಮಲಿಯಯ್ಯ ರವರ ಜಮೀನು, ದಕ್ಷಿಣಕ್ಕೆ: ಪ್ಯಾಸೇಜ್ (ಗಲ್ಲಿ)

ಸಹಿ/- **ಮೋಹನ ಸಿ**, ವಕೀಲರು
ನಂ.1164, 1ನೇ ಮಹಡಿ, ನಂಜುಂಡೇಶ್ವರ ಕಾಂಪ್ಲೆಕ್ಸ್, ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು - 04, ಮೊ.: 9448448407
ದಿನಾಂಕ: 18-11-2022, ಸ್ಥಳ: ಮೈಸೂರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮೈಸೂರು-ನಂಜನಗೂಡು ರಸ್ತೆ, ಬಂಡೀಪಾಳ್ಯ, ಮೈಸೂರು-570 025.
E-Mail:apmcmysore@rediffmail.com, apmcmys@gmail.com, ದೂರವಾಣಿ:0821-2482389
ಸಂ:ಕೃಉಮಾಸ(ಮೈ)/1739/2022-23 ದಿನಾಂಕ : 17.11.2022

ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು ಇವರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಾರ್ವಜನಿಕ/ ಖಾಸಗಿ ಸಹಭಾಗಿತ್ವದಲ್ಲಿ ಶೀತಲಗೃಹ ನಿರ್ಮಿಸುವ ಸಂಬಂಧ ಆಸಕ್ತಿಯುಳ್ಳವರಿಂದ ಟೆಂಡರ್ ಆಹ್ವಾನಿಸಲಾಗಿದೆ. (Expression of Interest (EoI) of Private Developer for Establishment of 2 Nos Modern Cold storages in an extent of 1.0 Acres each in Main Market Yard of APMC MYSORE at Bandipalya on PPP basis).

ಟೆಂಡರ್ ವೇಳಾಪಟ್ಟಿ: ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿನಾಂಕ: **05-12-2022** ರಂದು ಸಂಜೆ 4.30 ಗಂಟೆ, ಪ್ರೀ-ಬಿಡ್ ಮೀಟಿಂಗ್ ದಿನಾಂಕ: **24- 11 -2022** ರಂದು ಬೆಳಿಗ್ಗೆ **11.30** ಗಂಟೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ: **07-12-2022** ರಂದು ಸಂಜೆ 5.00 ಗಂಟೆ. ಹೆಚ್ಚಿನ ಮಾಹಿತಿಗಾಗಿ : https://eproc.karnataka.gov.in/eportal/index.seam

ಸಹಿ/-ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೈಸೂರು
ಸಹಿ/-ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮೈಸೂರು

ನೈರುತ್ಯ ರೈಲ್ವೆ ಗೃಹ ನಿರ್ಮಾಣ ಸಹಕಾರ ಸಂಘ, ನಿಯಮಿತ

ನೈರುತ್ಯ ರೈಲ್ವೆ ಕೇಂದ್ರೀಯ ಕಾರ್ಯಗಾರ, ಕ್ಯಾಂಟಿನ್ ಕಟ್ಟಡ, ಮೈಸೂರು, ದಕ್ಷಿಣ, ಮೈಸೂರು-08



ಕರ್ನಾಟಕ ಸರ್ಕಾರದ 'ಸಹಕಾರ ರತ್ನ ಪ್ರಶಸ್ತಿ' ಪುರಸ್ಕೃತರಾದ
ಡಾ.ಎಂ.ಬಿ.ಮಂಜೇಗೌಡ
ಉಪಾಧ್ಯಕ್ಷರು, SSE/MW ಅವರಿಗೆ
ಹೃತ್ಪೂರ್ವಕ ಅಭಿನಂದನೆಗಳು



ಲಿಂಗರಾಜು
ಅಧ್ಯಕ್ಷರು, HCR Rtd

ಆಡಳಿತ ಮಂಡಳಿ ನಿರ್ದೇಶಕರು



ಜಿ.ಪಾರ್ಥಿಬನ್ MW/AB Sr.Tech
ಕೆ.ಧ್ರುವಕುಮಾರ್ AC Shop / Sr. Tech
ಕೆ. ಅನ್ನು SSEEIc/Rtd.
ಬೇವೇಗೌಡ CBR/Rtd.
ಎಂ.ರವಿಶಂಕರ್ SMY/Sr Tech
ಪಿ. ಶ್ರೀನಿವಾಸ್ INSPN/Rtd.
ಎನ್.ಮಹದೇವ PTF/Rtd.
ಕೆ.ಕನಕರಾಜು SSE/INSPN
ಎನ್.ಸೋಮಶೇಖರ್ MW/sr Tech
ಅನ್ನಪೂರ್ಣ COS/PBR
ಎ.ಅಂಬಿಕಾ COS/PBR/Rtd